ಕನ್ನಡ ವಿಶ್ವವಿದ್ಯಾಲಯ, ಹಂಪಿ

ಟಿ.ಕೆ. ರಾಮರಾವ್ ಅವರ ಕಾದಂಬರಿಗಳು

ಕನ್ನಡ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಕ್ಕೆ

ಅರ್ಪಿಸಿದ ನಿಬಂಧ

ಸಂಶೋಧಕರು

ವಿನೋದ ಕೆ.ಎನ್.

ನೊ.ಸಂ. KRSMKS-00632

ಮಾರ್ಗದರ್ಶಕರು

ಡಾ. ಚಂದ್ರಪ್ಪ

ಕರ್ನಾಟಕ ಸಂಘ (ರಿ), ಮಂಡ್ಯ

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ)

೨೦೧೨-೧೩

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಟಿ.ಕೆ. ರಾಮರಾವ್ ಅವರ ಕಾದಂಬರಿಗಳು

ಕನ್ನಡ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಕ್ಕೆ

ಅರ್ಪಿಸಿದ ನಿಬಂಧ

ಸಂಶೋಧಕರು

ವಿನೋದ ಕೆ.ಎಸ್.

ನೊ.ಸಂ. KRSMKS-00632

ಮಾರ್ಗದರ್ಶಕರು

ಡಾ. ಚಂದ್ರಪ್ಪ

ಕರ್ನಾಟಕ ಸಂಘ (ರಿ), ಮಂಡ್ಯ

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ)

೨೦೧೨–೧೩

ದೃಢೀಕರಣ ಪತ್ರ

"ಟಿ.ಕೆ. ರಾಮರಾವ್ ಅವರ ಕಾದಂಬರಿಗಳು" ಎಂಬ ವಿಷಯದ ಮೇಲೆ ಈ ನಿಬಂಧನವನ್ನು ಹಂಪಿ ಕನ್ನಡ ವಿಶ್ವವಿದ್ಯಾನಿಯಲದ **ಎಂ.ಫಿಲ್. (ಕನ್ನಡ)** ಪದವಿಗೆ **೨೦೧೨-೨೦೧೩**ನೇ ಸಾಲಿನಲ್ಲಿ ವಿದ್ಯಾರ್ಥಿಯಾದ **ವಿನೋದ.ಕೆ.ಎನ್**.ರವರು ನನ್ನ ಮಾರ್ಗದರ್ಶನ ಹಾಗೂ ಮೇಲ್ವಿಚಾರಣೆಯಲ್ಲಿ ಬರೆದು ಒಪ್ಪಿಸುತ್ತಿದ್ದಾರೆಂದೂ ಹಾಗೂ ಈ ವಿಷಯದ ಬಗ್ಗೆ ಬೇರೆ ಯಾರಿಗೂ ನಾನು ಮಾರ್ಗದರ್ಶನ ಮಾಡಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ: ೨೭-೦೭-೨೦೧೩
ಸ್ಥಳ: ಮಂಡ್ಯ

ಮಾರ್ಗದರ್ಶಕರ ಸಹಿ
ಡಾ ॥ ಚಂದ್ರಪ್ಪ
ಪ್ರಾಧ್ಯಾಪಕರು, ಕನ್ನಡ ವಿಭಾಗ,
ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು
ಚನ್ನರಾಯಪಟ್ಟಣ, ಹಾಸನ ಜಿಲ್ಲೆ.

ಘೋಷಣಾ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ, ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್ ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ೨೦೧೨-೧೩ ನೇ ಸಾಲಿಗೆ ಕನ್ನಡ ಎಂ.ಫಿಲ್ ಅಧ್ಯಯನದ ಅಂಗವಾಗಿ ಸಂಶೋಧನ ನಿಬಂಧ ರಚಿಸಲು ಟಿ.ಕೆ. ರಾಮರಾವ್ ಅವರ ಕಾದಂಬರಿಗಳು ಎಂಬ ವಿಷಯವನ್ನು ಆಯ್ಕೆಮಾಡಿಕೊಂಡು ಡಾ. ಚಂದ್ರಪ್ಪ ರವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲೀ, ನಿಬಂಧದ ಅಧ್ಯಯಗಳನ್ನಾಗಲೀ ಯಾವುದೇ ಗ್ರಂಥ ಅಥವಾ ನಿಯತಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ ಮತ್ತು ಬೇರೆ ಯಾವುದೇ ವಿಶ್ವ ವಿದ್ಯಾಲಯಕ್ಕೂ, ಯಾವುದೇ ಪದವಿಗೂ ಸಲ್ಲಿಸಿರುವುದಿಲ್ಲ. ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಈ ನಿಬಂಧವನ್ನು ಸಲ್ಲಿಸುತ್ತಿದ್ದೇನೆ.

Vinoda.K.N.

ದಿನಾಂಕ : ೨೭-೦೩-೨೦೧೩ (ವಿನೋದ ಕೆ.ಎನ್.)

ಸ್ಥಳ : ಮಂಡ್ಯ

ಎಂ.ಫಿಲ್ ವಿದ್ಯಾರ್ಥಿ
ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ), ಮಂಡ್ಯ.

ಪರಿವಿಡಿ

ಅಧ್ಯಾಯ -೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಟಿ.ಕೆ. ರಾಮರಾವ್ ಅವರು ಕೋಲಾರ ಜಿಲ್ಲೆಯ ಹೊಸದುರ್ಗದಲ್ಲಿ ೧೯೩೧ರಲ್ಲಿ ಜನಿಸಿದರು. ಇವರ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣವನ್ನು ತಮ್ಮ ಹುಟ್ಟೂರಿನಲ್ಲೇ ಮುಗಿಸಿದರು. ಬಾಲ್ಯದಿಂದಲೂ ಸಾಹಿತ್ಯದ ಮೇಲೆ ಹೆಚ್ಚು ಒಲವಿರಿಸಿಕೊಂಡಿದ್ದರು. ಈ ಅಭಿರುಚಿಯಿಂದಾಗಿ ತಮ್ಮನ್ನು ತಾವು ಸಾಹಿತ್ಯ ಪ್ರಕಾರಗಳಲ್ಲಿ ಗುರುತಿಸಿಕೊಳ್ಳುವ ಮನಸ್ಸು ಮಾಡಿ ಅಂದಿನ ಸಾಹಿತ್ಯ ಪ್ರಕಾರದಲ್ಲಿನ ವಸ್ತು ವಿಷಯವನ್ನೇ ಆಯ್ಕೆ ಮಾಡಿಕೊಂಡು ರೋಮಾಂಚನವಾಗಿ, ಕುತೂಹಲವಾಗಿ ಮತ್ತು ಪ್ರಭಾವಕಾರಿಯಾಗಿ ಹೇಳುವ ಉದ್ದೇಶದಿಂದ ಪತ್ತೇದಾರಿ ಕಾದಂಬರಿಗಳನ್ನು ರಚನೆ ಮಾಡತೊಡಗಿದರು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ 'ಕಾದಂಬರಿ' ಅತ್ಯಂತ ಜನಪ್ರಿಯ ಹಾಗೂ ಪ್ರಭಾವ ಶಾಲಿಯಾದ ಸಾಹಿತ್ಯ ಪ್ರಕಾರಗಳಲ್ಲಿ ಒಂದು. ಈ ಸಾಹಿತ್ಯ ಪ್ರಕಾರವು ಜನ ಸಾಮಾನ್ಯರ ಆಶೋತ್ತರ, ಅಭಿರುಚಿ, ಸಂಸ್ಕೃತಿಯ ಮಟ್ಟವನ್ನು ವಿವರವಾಗಿ ಪ್ರತಿಬಿಂಬಿಸುವ ಮಾಧ್ಯಮವಾಗಿದೆ. ಹೊಸಗನ್ನಡದಲ್ಲಿ ಇಂಗ್ಲೀಷ್ ಸಾಹಿತ್ಯ ಪ್ರಭಾವದಿಂದ ಭಾವಗೀತೆ, ಸಣ್ಣಕಥೆ, ಜೀವನ ಚರಿತ್ರೆ, ಆತ್ಮ ಚರಿತ್ರೆ, ಪ್ರವಾಸ ಸಾಹಿತ್ಯ ನಂತರ ಸಂಶೋಧನಾ ಗ್ರಂಥಗಳು ಹುಟ್ಟಿದಂತೆ ಇಂಗ್ಲೀಷಿನ ನಾವೆಲ್ ಎಂಬ ಪ್ರಕಾರದಿಂದ 'ಕಾದಂಬರಿ' ಎಂಬ ಹೆಸರಿನಿಂದ ಪ್ರಚುರವಾಯಿತು.

ಪ್ರತಿಯೊಂದು ಸಾಹಿತ್ಯವು ಕೂಡ ಅಂದಂದಿನ ಸಮಕಾಲೀನ ಜೀವನವನ್ನು ಪ್ರತಿಬಿಂಬಿಸುತ್ತದೆ. ಹಾಗೂ ಬದಲಾವಣೆಯ ಆಶಯವನ್ನು ಒಳಗೊಂಡಿರುತ್ತದೆ. ಇಂತಹ ಸಾಹಿತ್ಯಕೃತಿಗಳು ಅಂದಂದಿನ ಕಾಲಮಾನದ ಜನಜೀವನದ ಎಲ್ಲಾ ಮುಖಗಳನ್ನು ಒಳಗೊಂಡಿರುತ್ತದೆ. ಸಮಗ್ರವಾಗಿ ಅಲ್ಲದಿದ್ದರೂ ಕೆಲವೊಂದು ಅಂಶಗಳನ್ನು ಬರಿ ಉಲ್ಲೇಖಗಳಿಂದಲೋ, ಇಲ್ಲವೇ ಅಲ್ಲಲ್ಲಿ ಕೃತಿಗಳಲ್ಲಿನ ಪಾತ್ರಗಳಿಂದಲೋ, ವ್ಯಂಗ್ಯದಿಂದಲೋ ಇಲ್ಲವೇ ಮೌನವಾಗಿ ಎಲ್ಲವನ್ನು ಒಪ್ಪಿಕೊಳ್ಳುವುದರಿಂದಲೋ ಒಟ್ಟಿನಲ್ಲಿ ಆಯಾ ಜನ ಜೀವನವನ್ನು, ಪ್ರಾದೇಶಿಕತೆಯನ್ನು ಪ್ರತಿಬಿಂಬಿಸುತ್ತದೆ. ಇಪ್ಪತ್ತೊಂದನೇ ಶತಮಾನದ ಉತ್ತರಾರ್ಧದಲ್ಲಿ ಟಿ.ಕೆ.ರಾಮರಾವ್ ಅವರು ಕನ್ನಡ

ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದರು. ಇದಕ್ಕಿಂತ ಮೊದಲು ಮನೆ ಪಾಠದ ಶಿಕ್ಷಕರಾಗಿ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡುದು ಒಂದು ಅಚ್ಚರಿಯೇ ಸರಿ.

ಟಿ.ಕೆ.ರಾಮರಾವ್ ಅವರು ನಿರಂತರವಾಗಿ ಸಾಹಿತ್ಯಾಭಿರುಚಿಯಲ್ಲಿ ತೊಡಗಿ ಮನೆಯ ವಾತಾವರಣವು ಶ್ರೀಮಂತಿಕೆಯಿಂದ ಕೂಡಿರಲಿಲ್ಲವಾದರೂ ತೀರಾ ಬಡತನದಿಂದ ಬಾಳಿದವರಾಗಿರಲಿಲ್ಲ. ಇವರು ವೈಚಾರಿಕವಾಗಿ, ವೈಜ್ಞಾನಿಕವಾಗಿ ಮತ್ತು ಸಾಮಾಜಿಕವಾಗಿ ಚಿಂತಿಸುತ್ತಿದ್ದರು. ಅವರು ಎಲ್ಲಾ ಕೃತಿಗಳಲ್ಲಿನ ಉದ್ದೇಶ ವ್ಯಕ್ತಿಯ ಪರಿವರ್ತನೆಯೊಂದಿಗೆ ಸಮಾಜದ ಪರಿವರ್ತನೆಯಾಗಬೇಕೆಂಬುದೇ ಆಗಿತ್ತು.

ಟಿ.ಕೆ. ಟಿ.ಕೆ.ರಾಮರಾವ್ ಅವರು ಎಂದೂ ಗುಂಪು ಕಟ್ಟಿಕೊಂಡು ಬಾಳಿದವರಲ್ಲ ಮತ್ತು ಸಾಹಿತ್ಯ ರಚನಾ ಕಾರ್ಯದಲ್ಲಿ ಮತ್ತೊಬ್ಬರನ್ನು ಅನುಸರಿಸಿದವರಲ್ಲ. ಎಂಬುದನ್ನು ನಾವು ಮರೆಯಬಾರದು. ತಾವಾಗಿ ಮುಂದೆ ಬಂದು ಹಕ್ಕು ಸ್ಥಾಪಿಸಿದವರೂ ಅಲ್ಲ. ಸಾಮಾಜಿಕ ಕಳಕಳಿಯೊಂದಿಗೆ ತಮ್ಮ ಕಾದಂಬರಿಗಳನ್ನು ರಚನೆಮಾಡಿದ್ದಾರೆ. ಅವರ ಕೆಲವು ಕಾದಂಬರಿಗಳು ರೋಮಾಂಚನಕಾರಿಯಾಗಿಯೂ, ನಿಗೂಢ ಸನ್ನಿವೇಶದಲ್ಲಿ ಸರಳವಾಗಿ ಹಾಸ್ಯ ಮಿಶ್ರಿತವಾಗಿಯೂ ಕಂಡು ಬಂದು, ಓದುಗರಿಗೆ ಹೆಚ್ಚು ಕುತೂಹಲವನ್ನುಂಟು ಮಾಡಿ ಸಾಮರಸ್ಯದೊಂದಿಗೆ ಅಂತ್ಯ ಮಾಡಿ ಸಮಾಜದಲ್ಲಿ ಸಮಾನತೆ ಮತ್ತು ಸಾಮರಸ್ಯವಿರಬೇಕೆಂದು ತಮ್ಮ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಟಿ.ಕೆ.ರಾಮರವ್ ಅವರು ಕಾದಂಬರಿಗಳು ಮತ್ತು ಸಣ್ಣ ಕಥೆಗಳನ್ನು ರಚನೆ ಮಾಡಿದ್ದಾರೆ. ರಾಮರಾಯರ ಸಾಮಾಜಿಕ ಕಳಕಳಿಯುಳ್ಳ ಕಾದಂಬರಿ 'ಬಂಗಾರದ ಮನುಷ್ಯ'. ಇದು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆ ಎನ್ನಬಹುದು ಯಾವುದೇ ಲೇಖಕನೊಬ್ಬನು ತನ್ನ ಸಾಮಾಜಿಕ ಕೃತಿಯೊಂದು ಬರೆದ ಸಂದರ್ಭದಲ್ಲಿ ಹೆಚ್ಚು ಗೌರವಾಧಾರಗಳನ್ನು ಪಡೆದಿರುವುದೇ ಅಪರೂಪವಾದ ವಿಷಯವಾಗಿದೆ.

ಪ್ರಸ್ತುತ ಕಾದಂಬರಿ 'ಬಂಗಾರದ ಮನುಷ್ಯ' ದಲ್ಲಿ ಕಂಡು ಬರುವ ಸಾಮಾಜಿಕ, ಸಾಂಪ್ರದಾಯಿಕ, ಧಾರ್ಮಿಕ ಆಚರಣೆಗಳು ಮಾನವ ಕುಲಕ್ಕೆ ಸಾಧಕ-ಬಾಧಕಗಳನ್ನು ಸೃಷ್ಟಿಸುತ್ತಿವೆ ಮತ್ತು ಅವುಗಳಿಂದಾಗುತ್ತಿರುವ ಪರಿಣಾಮಗಳೇನು ಎಂಬುದನ್ನು ಸೂಕ್ಷ್ಮವಾಗಿ ತಿಳಿಸುವ ಪ್ರಯತ್ನವನ್ನು ಮಾಡಿದ್ದಾರೆ. ಕೃತಿಯಲ್ಲಿನ ರಾಜೀವ ಪಾತ್ರದ ಅನಾವರಣದಿಂದ ವಾಸ್ತವ ಬದುಕಿನ ವಿವಿಧ ಸ್ಥರಗಳನ್ನು ವಿವರಿಸುವುದರ ಜೊತೆಗೆ ಗ್ರಾಮ್ಯ ಬದುಕಿನ ಮತ್ತು ಮಾನವ ಸಂಬಂಧಗಳ ಸೊಗಸಾದ ಚಿತ್ರಣವನ್ನು ತಮ್ಮ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

'ಆಸರೆಯ ಬೊಂಬೆ' ಕಾದಂಬರಿಯಲ್ಲಿ ಲೇಖಕರು ಪುರುಷನ ಅವಕಾಶವಾದಿತನವನ್ನು ನರಸಿಂಹರಾವ್ ಮತ್ತು ಅರುಣನ ಪಾತ್ರದ ಮೂಲಕ ಸ್ಪಷ್ಟಪಡಿಸಿದ್ದಾರೆ ಈ ಒಂದು ಅವಕಾಶವಾದಿತನದಿಂದ ಒಂದು ಕುಟುಂಬ ಮತ್ತು ಒಂದು ಸಮುದಾಯದ ಮೇಲಾಗುವ ಪರಿಣಾಮವನ್ನು ತುಂಬಾ ಸೂಕ್ಷ್ಮವಾಗಿ ಗ್ರಹಿಸಿದ್ದಾರೆ. ಮತ್ತು ಸೇವಾ ಮನೋಭಾವನೆ ಸ್ತ್ರೀಯರಲ್ಲಿ ಹೆಚ್ಚು, ಪುರುಷರಲ್ಲಿ ಸ್ವಾರ್ಥ ಹೆಚ್ಚಿದ್ದು ಸಮಾಜಕ್ಕೆ ಇದು ಮಾರಕವಾದದ್ದೆಂದು ತಿಳಿಸುವ ಪ್ರಯತ್ನ ಮಾಡಿದ್ದಾರೆ.

'ಆಕಾಶದೀಪ' ಈ ಕಾದಂಬರಿಯಲ್ಲಿ ಪುರುಷ ಪ್ರಧಾನ ಸಮಾಜದ ಅನಾವರಣ ಮತ್ತು ಅವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿ ಪಿತೃಪ್ರಧಾನತ್ವವನ್ನು ಲೇಖಕರು ಅನಾವರಣ ಗೊಳಿಸಿದ್ದಾರೆ. ಪುನರ್ ವಿವಾಹ ಮತ್ತು ವರ್ಗ ಭಾವನೆಯ ಹಿಂದೆ ಬಿದ್ದಿರುವ ಕೃತಿಯನ್ನು ಲೇಖಕರು ಕಿರಣ-ಶಿವಶಂಕರ ಸಂಬಂಧದೊಂದಿಗೆ ಸ್ಪಷ್ಟಪಡಿಸುತ್ತಾರೆ.

'ಮೂರನೇ ಕೀಲಿಕೈ' ಕಾದಂಬರಿಯು ಟಿ.ಕೆ.ರಾಮರಾವ್ ಅವರ ಮೊದಲ ಪತ್ತೇದಾರಿ ಕಾದಂಬರಿ ಇದು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ವಿಶಿಷ್ಟವಾದ ಕೊಡುಗೆ ಎನ್ನಬಹುದು. ಯಾವುದೇ ಲೇಖಕನೊಬ್ಬನು ತನ್ನ ಕೃತಿಯೊಂದು ಬರೆದ ಸಂದರ್ಭದಲ್ಲಿ ಹೆಚ್ಚು ಜನಪ್ರಿಯತೆಯನ್ನು ಪಡೆದಿರುವುದು ಅಪರೂಪದ ವಿಷಯವಾಗಿದೆ.

'ಮರಳು ಸರಪಣಿ' ಪತ್ತೇಧಾರಿ ಕಾದಂಬರಿಯಲ್ಲಿ ಲೇಖಕರು ಪತ್ತೇದಾರನ ಪಾತ್ರವನ್ನು ಪರಿಚಯಿಸುತ್ತಾ ಅಂದಿನ ಸಾಮಾಜಿಕ ಜೀವನ ಪದ್ಧತಿಯಲ್ಲಿನ ಚಿತ್ರಣವನ್ನು ಅನಾವರಣಗೊಳಿಸಿದ್ದಾರೆ. ಜೀವನಾವಶ್ಯಕತೆಗೆ ಬೇಕಾಗುವ ಸಂಪತ್ತನ್ನು ಕಷ್ಟಪಟ್ಟು ದುಡಿಯದೆ ವಾಮ ಮಾರ್ಗಗಳನ್ನು ಹಿಡಿದು, ಕೊನೆಗೆ ತನ್ನನ್ನು ತಾನೇ ನಿಂದಿಸಿಕೊಂಡು ಆತ್ಮ ಹತ್ಯೆಗೆ ಶರಣಾಗುವ ಒಂದು ಪ್ರಕ್ರಿಯೆಯನ್ನು ಲೇಖಕರು ವಿಮರ್ಶಿಸಿತ್ತಾರೆ.

ದುಡಿದು ದೊಡ್ಡವನಾಗಬೇಕು ಎಂಬ ಗಾದೆ ಮಾತನ್ನು ಲೇಖಕರು ಪರಿಚಯಿಸುತ್ತಾ ಕಾಲ, ದೇಶ, ಸಮಾಜ ಯಾವುದೇ ಆಗಿರಲಿ ಪ್ರಾಮಾಣಿಕತೆ ಮತ್ತು ಪರಿಶ್ರಮ ನಮ್ಮದಾಗಿದ್ದರೆ ಬದುಕು ಸುಂದರವಾಗಿರುತ್ತದೆ. ಎಂಬ ಯೋಚನೆ ಅರ್ಥಪೂರ್ಣವೂ ಸಮಯೋಚಿತವೂ ಆಗಿರುತ್ತದೆ. ಮತ್ತು ಬದಲಾಗಬೇಕಾದ ಆಶಯವನ್ನು ತಮ್ಮ ಕಾದಂಬರಿಗಳ ಪಾತ್ರಗಳಲ್ಲಿ ವ್ಯಕ್ತಪಡಿಸುತ್ತಾರೆ.

ಹೀಗಾಗಿ ಕನ್ನಡ ಸಾಂಸ್ಕೃತಿಕ ಕ್ಷೇತ್ರಕ್ಕೆ ಗ್ರಾಮೀಣ ಪ್ರದೇಶದಿಂದ ಬಂದು ತಮ್ಮದೇ ಆದ ಛಾಪು ಮೂಡಿಸಿರುವ ಟಿ.ಕೆ.ರಾಮರಾವ್ ಅವರು ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಇತ್ಯಾದಿ ಕ್ಷೇತ್ರಗಳಲ್ಲಿ ಅಧ್ಯಯನ ಮಾಡಿದ್ದಾರೆ. ಈ ಎಲ್ಲಾ ಕ್ಷೇತ್ರಗಳಲ್ಲೂ ಸಂಸ್ಕೃತಿಗೆ

ಮತ್ತು ಸಾಮಾಜಿಕತೆಗೆ ಉಪಕಾರಿ ಮನೋಭಾವ ಹೊಂದಿರುವ ಸಮಾಜಮುಖಿಯಾಗಿದ್ದಾರೆ. ಇವರ ಉತ್ತಮ ಬರವಣಿಗೆಗಳು ಮತ್ತು ಕೃತಿಗಳು ಅರ್ಹವಾಗಿರುವುದರಿಂದ ನಿಬಂಧನೆಗೆ ಈ ಅಧ್ಯಯನವನ್ನು ಕೈಗೊತ್ತಿಕೊಂಡಿದ್ದೇನೆ.

ಒಂದು ಸಾಹಿತ್ಯ ಕೃತಿ ಏನಾಗಿದೆ ಎನ್ನುವುದಕ್ಕಿಂತ ಓದುಗನ ಅಂತರಂಗದಲ್ಲಿ ಅದು ಯಾವ ರೀತಿಯ ಪರಿಣಾಮ ಉಂಟುಮಾಡುತ್ತದೆ ಎಂಬ ಅರಿವು ಮುಖ್ಯವಾಗುತ್ತದೆ. ಒಂದು ಕೃತಿಗೆ ಎಷ್ಟು ಓದುಗರಿರುವರೋ ಅಷ್ಟು ಅರ್ಥಾವತಾರಗಳಿವೆ. ಓದುಗರಿಂದ ಪ್ರತ್ಯೇಕವಾದ ಅರ್ಥವೊಂದು ಇಲ್ಲವೇ ಇಲ್ಲ ಗಟ್ಟಿಮುಟ್ಟಾದ ಕಥನದ ನೆರವಿನಿಂದ ಕಾದಂಬರಿಗಳು ಓದುಗರೊಡನೆ ನಿರಂತರವಾದ ಸಂವಾದ ನಡೆದಾಗ ಮಾತ್ರ ಈ ಕೃತಿ ಉಳಿಯಲು ಸಾಧ್ಯವಾಗುತ್ತದೆ.

ಟಿ.ಕೆ.ರಾಮರಾವ್‌ಅವರ ಕಾದಂಬರಿಗಳು ಎಂಬ ಶೀರ್ಷಿಕೆಯಡಿಯಲ್ಲಿ ಈ ಅಧ್ಯಯನ ಕೈಗೊಳ್ಳಲಾಗಿದೆ. ರಾಮರಾವ್ ಅವರ ಕೃತಿಗಳ ಅಧ್ಯಯನ ಇದಾಗಿದ್ದು ಇಲ್ಲಿ ಕಥಾವಸ್ತು, ಪಾತ್ರ ಚಿತ್ರಣ ಸನ್ನಿವೇಶ ವರ್ಣನೆ, ನಿರೂಪಣೆ, ಶೈಲಿ, ಲೇಖಕರ ಜೀವನ ದೃಷ್ಟಿಗಳನ್ನು ಸಂಸ್ಕೃತಿ ಜೀವನ ಚಿತ್ರಣ ಸಾಂಸ್ಕೃತಿಕ ಚಟುವಟಿಕೆಗಳು ಸಮಾಜದೊಡಗಿನ ಸಂಬಂಧ ಮತ್ತು ರಾಯರ ವ್ಯಕ್ತಿತ್ವ ಈ ಎಲ್ಲಾ ಅಂಶಗಳನ್ನು ಸಮಗ್ರ ರೀತಿಯಲ್ಲಿ ಅಧ್ಯಯನ ಮಾಡುವ ಪ್ರಯತ್ನ ವನ್ನು ದೂರ ದೃಷ್ಟಿಯಿಂದ ಕೈಗೊಂಡಿದ್ದಾರೆ.

ಅಧ್ಯಾಯ-೨

ಟಿ.ಕೆ.ರಾಮರಾವ್ ಅವರ ಬದುಕು ಮತ್ತು ಬರಹ

'ಪ್ರತಿಯೊಬ್ಬರ ಜೀವನವೂ ಒಂದು ಕಾದಂಬರಿ' ಎಂಬ ಆಂಗ್ಲ ಗಾದೆಯೊಂದಿಗೆ, ತನ್ನ ಹೆಜ್ಜೆಯ ಗುರುತುಗಳನ್ನು ಕಾಲದ ಮರಳಿನ ಮೇಲೆ ಬಿಟ್ಟು ಹೋಗುವ ಮಾನವನ ಜೀವನವು ನಿಜವಾಗಿಯೂ ಒಂದು ಕಾದಂಬರಿ, ಅಂತೆಯೇ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಛಾಪು ಮೂಡಿಸಿದೆ. ಟಿ.ಕೆ.ರಾಮರಾವ್ ಅವರ ಬದುಕೇ ಒಂದು ಅದ್ಭುತ ಕಾದಂಬರಿ.

ಲೇಖಕನೊಬ್ಬನ ಬದುಕಿನ ವಿಶ್ಲೇಷಣೆ ಎಂದರೆ ಒಂದರ್ಥದಲ್ಲಿ ಅವನ ಕೃತಿಯ ವಿಶ್ಲೇಷಣೆಯೇ ಆದಂತೆ, ಬುದ್ಧಿ ಬಂದಂದಂದಿನಿಂದ ಒಡನಾಡಿದ ಪರಿಸರ, ಪಡೆದುಕೊಂಡ ಜೀವನಾನುಭವ ಸಾಹಿತ್ಯ ರಚನೆಯ ಮೇಲೆ ಪ್ರಭಾವ ಬೀರುತ್ತದೆ. ಹಾಗಾಗಿ ಕಾದಂಬರಿಗಳಲ್ಲಿ ಬರುವ ಘಟನೆಗಳು ಸತ್ವಯುತವಾಗಿ ಪಾತ್ರಗಳು ಜೀವಂತಿಕೆಯಿಂದ ಪ್ರತಿಬಿಂಬಿಸುತ್ತವೆ.

ಟಿ.ಕೆ.ರಾಮರಾವ್ ಅವರು ತಮ್ಮ ಕೌಟುಂಬಿಕ, ಸಾಂಪ್ರದಾಯಿಕ ಬದುಕಿನ ತೆಕ್ಕೆಯಲ್ಲಿಯೇ ಸಾಗುತ್ತಾ ಬಂದು ತಮ್ಮ ಎಲ್ಲಾ ಎಡರು-ತೊಡರುಗಳನ್ನು ದಾಟಿ, ಸ್ವೀಕರಿಸಿ, ಎದುರಾದ ಸಾಂಪ್ರದಾಯಿಕ ಕ್ರಿಯೆ-ಪ್ರಕ್ರಿಯೆಗಳನ್ನು ಖಂಡಿಸುತ್ತಲೇ ತಮ್ಮ ವ್ಯಕ್ತಿತ್ವವನ್ನು ರೂಢಿಸಿಕೊಂಡುದ್ದು ಒಂದು ಸವಾಲೇ ಸರಿ, ಆ ಸವಾಲಿಗೆ ತನ್ನನ್ನು ಒಡ್ಡಿಕೊಳ್ಳುತ್ತಲೇ ಕೃತಿ ರಚನೆಗೆ ತೊಡಗಿಸಿಕೊಂಡಿದ್ದೇ ಒಂದು ಸಾಧನೆ. ಸಾಂಪ್ರದಾಯಿಕ ಮನೆತನದಲ್ಲಿ ಹುಟ್ಟಿ ಸಾಹಿತ್ಯ ಪ್ರೀತಿಯನ್ನು ಮೈಗೂಡಿಸಿಕೊಂಡು, ಸಾಹಿತ್ಯ ರಚನೆಗೆ ತಮ್ಮನ್ನು ತಾವು ತೊಡಗಿಸಿಕೊಂಡು ಬಂದು ಹೊಸ ಸಾಹಿತ್ಯ ಪ್ರಕಾರದ ಬೆಳವಣಿಗೆಗೆ ಸಹಕಾರಿಯಾದರು.

ಶ್ರೀ ಟಿ.ಕೆ.ರಾಮರಾವ್ ಅವರು ಕೋಲಾರ ಜಿಲ್ಲೆಯ ಹೊಸದುರ್ಗದಲ್ಲಿ ಅಕ್ಟೋಬರ್ ೭, ೧೯೩೧ರಲ್ಲಿ ಕೃಷ್ಣಮೂರ್ತಿ ಮತ್ತು ಇಂದಿರಾ ದಂಪತಿಗಳ ೨ನೇಯ ಪುತ್ರನಾಗಿ, ಒಂದು ಮಾಧ್ವ (ಬ್ರಾಹ್ಮಣ) ಕುಟುಂಬದಲ್ಲಿ ಜನಿಸಿದರು. ಇವರು ಪ್ರಾಥಮಿಕ ಶಿಕ್ಷಣವನ್ನು ಹೊಸದುರ್ಗ, ಕೋಲಾರದಲ್ಲಿ ಪಡೆದರು. ಮತ್ತು ಇವರು ಬಿ.ಎಸ್ಸಿ ಪದವೀಧರರಾಗಿದ್ದರು.

ರಾಯರು ೧೮ವರ್ಷದವರಿದ್ದಾಗ ಅವರ ತಂದೆ ಹೃದಯಾಘಾತದಿಂದ ಸಾವನ್ನಪ್ಪಿದರು. ಇವರ ತಂದೆ ರೈಲ್ವೇ ಆಡಾಳಿತಾಧಿಕಾರಿಯಾಗಿದ್ದರು. ತಂದೆಯ ಸಾವಿನ

ನಂತರ ಇಡೀ ಸಂಸಾರದ ಜವಾಬ್ದಾರಿಯನ್ನು ತಮ್ಮ ಹೆಗಲಿಗೇರಿಸಿಕೊಂಡರು. ಇವರು ಪದವಿ ಮುಗಿಸಿಕೊಂಡರು ಎಲ್ಲೂ ಉದ್ಯೋಗಕ್ಕೆ ಸೇರಿರಲಿಲ್ಲ. ತಮ್ಮಂದಿರ-ತಂಗಿಯರ ಸಂಸಾರದ ಜವಾಬ್ದಾರಿ ಹೆಗಲ ಮೇಲೆ ಹೊತ್ತು ಹೊಸದುರ್ಗದಿಂದ ಚನ್ನಪಟ್ಟಣಕ್ಕೆ ಬಂದು ಸೇರಿದರು. ಚನ್ನಪಟ್ಟಣಕ್ಕೆ ಬಂದು ಸೇರಿದ ಘಟ್ಟದಲ್ಲಿ ಅಲ್ಲೇ ಒಂದು ಖಾಸಗಿ ಟ್ಯುಟೋರಿಯಲ್ ಶಾಲೆ ಪ್ರಾರಂಭಿಸಿದರು. ಇವರ ಶಿಕ್ಷಣವು ಅತ್ಯಂತ ಜನಪ್ರಿಯವಾಗಿ ಅತ್ಯುತ್ತಮ ಉಪಾಧ್ಯಾಯರೆನಿಸಿಕೊಂಡರು. ಇವರ ಟ್ಯುಟೋರಿಯಲ್ ಶಾಲೆಗೆ ಕಲಿಯಲು ವಿದ್ಯಾರ್ಥಿಗಳು ಬೆಂಗಳೂರಿನಿಂದಲೂ, ಚನ್ನಪಟ್ಟಣದ ಅಕ್ಕ-ಪಕ್ಕ ಊರು-ಜಿಲ್ಲೆಗಳಿಂದಲೂ ಬರುತ್ತಿದ್ದರು. ಜೊತೆಗೆ ಇವರು ಚನ್ನಪಟ್ಟಣದ ಮುಖ್ಯ ಹೆದ್ದಾರಿಯಲ್ಲೇ ಔಷಧ ಅಂಗಡಿಯೊಂದನ್ನು ತೆರೆದರು ರಾಯರು ಚನ್ನಪಟ್ಟಣದಲ್ಲಿ ಪ್ರಪ್ರಥಮ ಬಾರಿಗೆ ಟ್ಯುಟೋರಿಯಲ್ ಶಾಲೆ ಮತ್ತು ಔಷಧದ ಅಂಗಡಿಯನ್ನು ತೆರೆದವರಾಗಿದ್ದಾರೆ. ಬಹುಶಃ ಶಿಕ್ಷಣ ಮತ್ತು ವ್ಯಾಪಾರ ಕ್ಷೇತ್ರಗಳೆರಡರಲ್ಲೂ ಅವರ ಭಾಗ್ಯವನ್ನು ತೆರೆದಿರಬೇಕು.

ಇವರು ತಮ್ಮ ಸಹೋದರ-ಸಹೋದರಿಯರಿಗೆ ವಿದ್ಯಾಭ್ಯಾಸ, ಮದುವೆ ಜವಾಬ್ದಾರಿಯನ್ನು ಸಂಪೂರ್ಣವಾಗಿ ಹೊತ್ತು ಸೋದರರಿಗೆ ಉತ್ತಮವಾದ ವಿದ್ಯಾಭ್ಯಾಸ ನೀಡಿದರು. ಸಹೋದರಿಯರಿಗೆ ವಿವಾಹ ಮಾಡಿದರು. ಇವರ ಸಹೋದರರಾದ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ರಾಯರಿಗೆ ಸಾಂಸಾರಿಕಜೀವನದಲ್ಲಿ ಸಹಾಯಕರಾಗಿದ್ದರು. ಮನೆಯ ಒಳಗೆ-ಹೊರಗೆ ರಾಯರಿಗೆ ಪತ್ನಿ ಶ್ರೀಮತಿ ಶಕುಂತಲಾದೇವಿ ಹಾಗೂ ಸಹೋದರರಾದ ಶ್ರೀ ಟಿ.ಕೆ. ಗುಂಡೂರಾವ್, ಶ್ರೀಪಾದರಾಯರು, ಸಂಸಾರದ ಹೊರೆಯನ್ನು ಆದಷ್ಟು ಕಡಿಮೆ ಮಾಡಿದರು. ಇವರ ಔಷಧದ ಅಂಗಡಿಯನ್ನು ಅವರ ಮೊದಲ ತಮ್ಮ ನೋಡಿಕೊಳ್ಳುತ್ತಿದ್ದರು. ಶ್ರೀಪಾದರಾಯರಿಗೆ ವೈದ್ಯಕೀಯ ಶಿಕ್ಷಣವನ್ನು ಕೊಡಿಸಿ, ಅವರು ಇಂದಿಗೂ ಕೂಡ ವೈದ್ಯಕೀಯ ಸೇವೆಯನ್ನು ಅಮೇರಿಕಾದಲ್ಲಿ ಸುಪ್ರಸಿದ್ಧ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮತ್ತೊಬ್ಬ ಸಹೋದರರಾದ ಗೂಂಡುರಾವ್ ಅವರು ಔಷಧದ ಅಂಗಡಿಯ ಜೊತೆಗೆ ಕೆಲವು ಪತ್ರಿಕೆಗಳಾದ ಸುಧಾ, ಪ್ರಜಾವಾಣಿ, ಮಯೂರದಲ್ಲಿ ಕೆಲಸ ಮಾಡಿದ್ದಾರೆ. ರಾಯರಿಗೆ ಬೆನ್ನೆಲುಬಾಗಿ ಸಂಸಾರದ ಒಳಗೆ-ಹೊರಗೆ ಅತ್ಯುತ್ತಮವಾದ ಯಶಸ್ಸಿಗೆ ಶಕುಂತಲಾದೇವಿ ಪ್ರಮುಖ ಕಾರಣರಾಗಿದ್ದಾರೆ. ರಾಯರ ಪತ್ನಿ ಶಕುಂತಲದೇವಿಯವರು ಗಂಡನ ಏಳಿಗೆಗಾಗಿ ಮನೆಯ ಹೊರಗೆ ಮತ್ತು ಒಳಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕಾರಿಯಾಗಿದ್ದರು.

ಶ್ರೀಮತಿ ಶಕುಂತಲದೇವಿಯವರು ಯಜಮಾನರಾದ ರಾಮರಾಯರ ಎಲ್ಲಾ ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡು ಬೆನ್ನೆಲುಬಾಗಿ ನಿಂತರು. ರಾಯರ ಕೃತಿ ರಚನಾ ಕಾರ್ಯದಲ್ಲಿ ಸಲಹೆ–ಸೂಚನೆಗಳನ್ನು ಕೊಟ್ಟು, ಮುದ್ರಣ, ಮಾರಾಟ ಮತ್ತು ಪ್ರಚಾರದ ಕಾರ್ಯದಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಯಶಸ್ಸಿನ ಕಡೆ ಕೊಂಡೊಯ್ಯುವಲ್ಲಿ ಪ್ರಮುಖ ಪಾತ್ರವಹಿಸಿದರು ಎಂದರೆ ಬಹುಶಃ ತಪ್ಪಾಗಲಾರದು. ಒಂದು ಗಂಡಿನ ಯಶಸ್ಸಿನ ಹಿಂದೆ ಒಬ್ಬ ಸ್ತ್ರೀ ಇರುತ್ತಾಳೆ ಎಂಬ ಗಾದೆ ಮಾತಿಗೆ ಶಕುಂತಲಾರವರೇ ಉದಾಹರಣೆಯೇನೋ ಎನ್ನುವಂತಿದೆ. ಇವರಿಬ್ಬರ ನಡುವಿನ ಸಾಮರಸ್ಯವೂ ಸಾಮಾಜಿಕ ಜೀವನ ಪದ್ಧತಿಯಲ್ಲಿ ಒಂದು ಮೈಲುಗಲ್ಲಾಗಿದೆ.

ರಾಯರು ಕೃತಿ ರಚನೆ ಮಾಡುತ್ತಿದ್ದ ಸಂದರ್ಭದಲ್ಲಿ ಹೆಣ್ಣುಮಕ್ಕಳು ಹೆಚ್ಚು ಓದುವಂತಿರಲಿಲ್ಲ. ಹೆಣ್ಣುಮಕ್ಕಳು ಮನೆಯ ಹೊರ ಹೋಗಿ ದುಡಿಯುವುದು ಅಪರಾಧವಾಗಿದ್ದ ಸಂದರ್ಭದಲ್ಲಿ ಓದಿ, ವಿದ್ಯಾವಂತರಾಗಿ ಸಾಮಾಜಿಕ ಪರಿವರ್ತನೆಗಾಗಿ ಅವನ ಮನಸ್ಸು ತುಡಿಯುತ್ತಿದ್ದದ್ದನ್ನು ನಾವು ಗಮನಿಸಿ ಅವರ ಚಿಂತನೆ ಮತ್ತು ಕಾರ್ಯಕ್ಕೆ ತಲೆಬಾಗಿ ಗೌರವಿಸಲೇ ಬೇಕಾಗಿದೆ.

ರಾಯರು ತಮ್ಮ ಬದುಕಿನಲ್ಲಿ ಬಂದಂತಹ ಅನೇಕ ಕಷ್ಟಗಳನ್ನು ದಾಟಿ ತಮ್ಮ ಸಹೊದರ ಸಹೋದರಿಯರಿಗೆ ಉತ್ತಮವಾದ ಭವಿಷ್ಯವನ್ನು ನೀಡಿ, ಅವರ ಜೀವನ ಸಫಲವಾಗಲು ಕಾರಣಕರ್ತರಗಿದ್ದಾರೆ.

ಟಿ.ಕೆ.ರಾಮರಾವ್ ಅವರ ಮನೆಯೊಳಗಿನ ಪರಿಸ್ಥಿತಿ ಹಾಗೂ ಮನೆಯಾಚೆಯ ಬದುಕಿನಲ್ಲಿ ಕಂಡು ಬರುವ ಸಂಘರ್ಷಗಳು ಅವರಿಗೆ ಉತ್ತಮ ಜೀವನ ರೂಪಿಸಿಕೊಳ್ಳಲು ಕಾರಣವಾದವು. ಅವರು ಮುಂದೆ ಬೆಂಗಳೂರು ಬನಶಂಕರಿಯಲ್ಲಿ ಒಂದು ಸುಂದರವಾದ ಮನೆಯೊಂದನ್ನು ನಿರ್ಮಿಸಿಕೊಂಡು ಪತ್ನಿಯೊಂದಿಗೆ ಶಾಂತವಾದ ಬದುಕು ಸಾಗಿಸಿದರು.

ಶ್ರೀಯುತರು ಕನ್ನಡ ಪತ್ತೇದಾರಿ ಸಾಹಿತ್ಯ ಪ್ರಕಾರದಲ್ಲಿ ಅತಿದೊಡ್ಡ ಹೆಸರು. ಇವರು ಕಾದಂಬರಿಗಳನ್ನು ಬರೆಯುತ್ತಿದ್ದಾಗ ಅತ್ಯಂತ ಬೇಡಿಕೆಯಲ್ಲಿದ್ದು ಬೇಡಿಕೆ ಪೂರೈಸಲು ಸಾಧ್ಯವಾಗದಿದ್ದ ಅತಿದೊಡ್ಡ ಓದುಗರ ಬಳಗವನ್ನು ಗಳಿಸಿಕೊಂಡಿದ್ದ ಅಪರೂಪದ ಸಾಧನಶೀಲರು ಈ ಟಿ.ಕೆ.ರಾಮರಾವ್‌ರವರು ಕನ್ನಡ ಪುಸ್ತಕಗಳನ್ನು ಪ್ರಕಟಿಸಲು ಪುಸ್ತಕ ಪ್ರಕಾಶಕರು ಹಿಂದೇಟು ಹಾಕುತ್ತಿದ್ದ ಕಾಲದಲ್ಲಿ ಕನ್ನಡ ಪುಸ್ತಕ ಪ್ರಕಾಶಕರು ಇವರ ಮನೆಗೆ ಎಡತಾಕುತ್ತಿದ್ದರು. ಅಡ್ವಾನ್ಸ್ ನೀಡಿ, ಸದ್ಯ ಬರೆಯುತ್ತಿರುವ

ಹಸ್ತಪ್ರತಿಯನ್ನು ನಮಗೆ ಕೊಡಿ ಎಂದು ದುಂಬಾಲು ಬೀಳುತ್ತಿದ್ದರು. ಅವರು ಕೇಳಿದಷ್ಟು ಗೌರವಧನ ನೀಡುತ್ತಿದ್ದರು. ಬಹುಶಃ ಕನ್ನಡ ಸಾಹಿತ್ಯದಲ್ಲಿ ಹೆಚ್ಚಿನ ಸಂಭಾವನೆ ಪಡೆಯುತ್ತಿದ್ದ ಇಬ್ಬರು-ಮೂವರು ಲೇಖಕರಲ್ಲಿ ಇವರೊಬ್ಬರಾಗಿದ್ದಿರಬೇಕು.

ಇದು ಹೇಗೆ ಸಾಧ್ಯವಾಯಿತು ಎಂದು ಅಲೋಚಿಸಿದರೆ ಅವರ ಕೃತಿಗಳಲ್ಲಿ ಕೆಲವು ಅಂಶಗಳು ಎದ್ದು ಕಾಣಿಸುತ್ತವೆ. ಅಂದರೆ ಸೊಗಸಾದ ಶೈಲಿಯ ಬರವಣಿಗೆ, ಆತ್ಮೀಯತೆ ಸರಳ ಚೌಕಟ್ಟು, ಮೊದಲಿನಿಂದ ಕೊನೆಯವರೆವಿಗೂ ಕುತೂಹಲವನ್ನು ಉಳಿಸಿಕೊಂಡು ಹೋಗುವುದು ಜೊತೆಗೆ ಪರಿಪೂರ್ಣವಾಗಿ ಸ್ಥಳೀಯ ಮೆರಗು, ಸ್ಥಳೀಯ ಭಾಷೆ, ಸುಪರಿಚಿತ ಸ್ಥಳ ನಾಮಗಳ ಬಳಕೆ ಮತ್ತೆ ಖಚಿತವಾದ ತಾಂತ್ರಿಕ ಮತ್ತು ಕಾನೂನು ವಿವರಗಳು, ಎಲ್ಲೂ ಅಧ್ಯಾಯಗಳನ್ನು, ಆಗು-ಹೋಗುಗಳನ್ನು ಎಳೆಯುತ್ತಿರಲಿಲ್ಲ. ಚೊಕ್ಕವಾದ -ಸುಂದರವಾದ, ಒಂದೇ ಅಳತೆಯ ಅಧ್ಯಾಯಗಳು ಕಂಡುಬರುತ್ತವೆ. ಅವರ ಕಾದಂಬರಿಗಳಲ್ಲಿ ಯಾವುದೊಂದು ಸಿಕ್ಕೂ ಇರಲಿಲ್ಲ. ಓದುಗರಿಗೆ ಕುತೂಹಲ ತಣಿಸುವ, ಮನರಂಜನೆ ನೀಡುವ ಪತ್ತೇದಾರಿ ಕಾದಂಬರಿಗಳನ್ನು ಅವರು ರಚಿಸಿದರು.

ಟಿ.ಕೆ.ರಾಮರಾವ್ ಅವರಿಗೆ ಯಾವುದಾದರೊಂದು ವಸ್ತು ಅವರ ತಲೆ ಹೊಕ್ಕಿದ ಕೂಡಲೇ ಅದನ್ನು ತಲೆಯಲ್ಲೇ ತುರಿಯಲು ತೊಡಗುತ್ತಿದ್ದರು. 'ಒಂದು ವಸ್ತು ಹೊಳೆದರೆ ಅದನ್ನು ಮನಸ್ಸಿನಲ್ಲೇ ಚರ್ನ್ ಔಟ್ ಮಾಡ್ತೀನಿ. ವಸ್ತುವನ್ನು ಹೇಗೆ ಪ್ರಾರಂಭಿಸಬೇಕು, ಎಷ್ಟು ಅಧ್ಯಾಯಗಳಿರಬೇಕು, ಮುಖ್ಯ ಪಾತ್ರಗಳು, ಘಟನೆಗಳು, ಅಂತ್ಯ ಇವನ್ನೆಲ್ಲ ಯೋಚಿಸುತ್ತಲೇ ಇರುತ್ತೇನೆ. ಈ ಜಗಿಯುವಿಕೆಯಲ್ಲ ಒಂದು ಹದಕ್ಕೆ ಬಂದ ಮೇಲೆ ಒಂದು ಹಾಳೆಯ ಗೀಚಿಕೊಳ್ಳುತ್ತೇನೆ, ಎಂದು ಹೇಳುತ್ತಿದ್ದರೆಂದು ತರಂಗ ಪತ್ರಿಕೆಯ ಸಂಪಾದಕರು ಹೇಳಿದ್ದಾರೆ.

ಅವರ ಒಂದೊಂದು ಗೀಚಿದ ಸಾಲು ಒಂದೊಂದು ಅಧ್ಯಾಯದ ಹೂರಣ, ಮೊದಲ ಅಧ್ಯಾಯ ಬರೆಯಲು ಪ್ರಾರಂಭಿಸಿ, ಗೀಚಿದ ಹೂರಣಗಳಿಂದ ಆರೇಳು ಅಧ್ಯಾಯಗಳನ್ನು ಬರೆದು ಮುಗಿಸಿಬಿಡುತ್ತಿದ್ದರು. ಕೂಡಲೇ ಮುಂದಿನ ಅಧ್ಯಾಯ ಬರೆಯದೇ ಕಟ್ಟಕಡೆಯ ಅಧ್ಯಾಯವನ್ನು ಯೋಚಿಸಿ, ತಮ್ಮ ಟಿಪ್ಪಣೆಯಂತೆ, ಕೊನೆ ಅಧ್ಯಾಯದ ಮುಕ್ತಾಯದ ಕರಡು ಬರೆಯುತ್ತಿದ್ದರು. ಅದನ್ನು ಬರೆದ ಮೇಲೆ ಅದಕ್ಕೆ ಹೊಂದಾಣಿಕೆ, ಪೂರಕವಾಗುವ ಹಾಗೆ, ಎಂಟನೆಯ ಅಧ್ಯಾಯದಿಂದ ಬರೆಯಲು ಪ್ರಾರಂಬಿಸಿ, ಹದಿನೈದೋ-ಇಪ್ಪತ್ತೋ ಅಧ್ಯಾಯಗಳನ್ನು ಬರೆದು ಮುಗಿಸಿ ಅದನ್ನು ಮುಕ್ತಾಯದ ಅಧ್ಯಾಯಕ್ಕೇ ಕೊಂಡಿ ಹಾಕುತ್ತಿದ್ದರು. ಕೊನೆಗೆ ಬರೀ ಕರಡು

ರಚನೆಯಾಗಿದ್ದ ಕೊನೆಯ ಅಧ್ಯಾಯವನ್ನು ಮತ್ತೊಮ್ಮೆ 'ಪಕ್ಕಾ' ಆಗಿ ಬರೆಯುತ್ತಿದ್ದರು. ಕಾದಂಬರಿ ರಚನೆ ಕೆಲಸ ಮುಗಿದು ಹಸ್ತ ಪ್ರತಿ ಸಿದ್ಧವಾಗಿರುತ್ತಿತ್ತು. ಅದೇ ದಿನ ಪತ್ರಿಕಾ ಸಂಪಾದಕರೊಬ್ಬರು ಮನೆಗೆ ಬಂದು ಆ ಹಸ್ತ ಪ್ರತಿಯನ್ನು ಕೊಂಡೊಯ್ಯುತ್ತಿದ್ದರು.

ಸ್ಫುಟವಾದ, ಚಿತ್ತಿಲ್ಲದ ಸುಂದರ ಬರವಣಿಗೆ, ಗುಂಡಾದ ಅಕ್ಷರಗಳು, ಪುಲ್‌ಸ್ಕೇಪ್ (ಸಾಲಿಲ್ಲಿದ) ಬಿಳಿಹಾಳೆಯಲ್ಲಿ ರಚನೆ ಮಾಡುತ್ತಿದ್ದರು.

ಒಂದು ಕಾದಂಬರಿ ಬರೆದು ಮುಗಿಸಿ, ಅದು ಸಂಪಾದಕರನ್ನು ತಲುಪಿದ ಮೇಲೆ, ಕಾದಂಬರಿ ಮುಗೀತು, ಒಂದಿಷ್ಟು ವಿರಾಮ ತೆಗೆದುಕೊಳ್ಳಬೇಕು, ಎಲ್ಲಾದರೂ ಸುತ್ತಿ ಬರಬೇಕು ಎಂದುಕೊಳ್ಳುತ್ತಾರೆ. ಆದರೆ ಅದು ಆಗುವುದೇ ಇಲ್ಲ. ಏಕೆಂದರೆ, ಮುಂದಿನ ಕಾದಂಬರಿಯ ವಸ್ತು ಆಗಲೇ ಮೈ ಮನಸ್ಸುಗಳನ್ನು ಗೋಳಾಡಿಸಲು ಪ್ರಾರಂಭವಾಗುತ್ತದೆ. 'ಚರ್ನಿಂಗ್ ಔಟ್' ಕೆಲಸ ಮೊದಲಾಗಿ ಬಿಟ್ಟಿರುತ್ತದೆ ಜೊತೆಗೆ ಇನ್ನೊಬ್ಬ ಸಂಪಾದಕರ ಫೋನ್ ಕರೆ–ಮನೆ ಭೇಟಿ ಪ್ರಾರಂಭವಾಗುತ್ತದೆ. ಕ್ಯೂನಲ್ಲಿ ನಿಂತ ಸಂಪಾದಕರು 'ಪ್ರೀತಿಯ' ಒತ್ತಡ ಹಾಕತೊಡಗುತ್ತಾರೆ. ರಾಯರು ಅವರಿಗೊಂದು ದಿನಾಂಕ ಕೊಟ್ಟು ಸಾಗಹಾಕುತ್ತಾರೆ. ಇಷ್ಟು ಸಾಲದು ಎಂಬಂತೆ ಹೊಸದಾಗಿ ಪ್ರಾರಂಭವಾದ ಪತ್ರಿಕೆಗಳು ಮತ್ತು ವಿಶೇಷಾಂಕ ಸಂಪಾದಕರಿಂದ ನಿರಂತರ ಫೋನ್ ಕರೆ, ವಿಶೇಷ ಪತ್ತೇಧಾರಿ ಕಥೆಗಾಗಿ! ಇದರೊಂದಿಗೆ ಸಭೆ–ಸಮಾರಂಭಗಳಿಗೆ ಅತಿಥಿಯಾಗಿ ಬರಲು ಕೋರಿಕೆ, ಸೋದರ–ಸೋದರಿಯರು, ಅವರ ಮಕ್ಕಳ ಭೇಟಿ, ಸಿನಿಮಾ ನಿರ್ಮಾಪಕ–ನಿರ್ದೇಶಕರ ಆಶೋತ್ತರಗಳು–ಇವುಗಳಿಗೂ ಅವರು ಸಮಯ ಮೀಸಲಿಡಬೇಕಾಗಿತ್ತು. ಈ ಸಮಯದ ಒತ್ತಡದ ಕಾರಣಕ್ಕಾಗಿಯೇ ಅವರು ತಮ್ಮ ಕಾದಂಬರಿಯ ಚಿತ್ರೀಕರಣದ ಹಕ್ಕುಗಳನ್ನು ಮಾತ್ರ ಚಿತ್ರ ನಿರ್ಮಾಪಕರಿಗೆ ನೀಡುತ್ತಿದ್ದರು. ಚಿತ್ರಕಥೆ–ಸಂಭಾಷಣೆ ಬರೆಯಲು ಯಾವತ್ತೂ ಒಪ್ಪಿಕೊಳ್ಳಲಿಲ್ಲ. ಆ ಸಿನಿಮಾ ಚಿತ್ರೀಕರಣಕ್ಕೂ ಹೋಗುತ್ತಿರಲಿಲ್ಲ.

ಪುಂಖಾನುಪುಂಖವಾಗಿ ಅವರ ಕಥೆ, ಕಿರುಕಾದಂಬರಿಗಳು ಪ್ರಕಟವಾಗುತ್ತಲೇ ಇದ್ದುದನ್ನು ನೋಡಿದಾಗ, ಅವರು ಅತಿ ವೇಗದ ಲೇಖಕರು ಎಂದೇ ಅನ್ನಿಸುತ್ತದೆ. ಆದರೆ, "ಅವರು ಖಂಡಿತ ನನ್ನದು ವೇಗದ ಬರವಣಿಗೆ ಅಲ್ಲ, ಅತಿ ನಿಧಾನದ ಬರವಣಿಗೆ, ನಾನು ಬರೆಯುವುದು ಬಹಳ ಕಡಿಮೆ. ದಿನಕ್ಕೆ ಐದು ಪುಟದಷ್ಟು ಉತ್ತಮ ಪ್ರತಿ ಸಿದ್ಧಪಡಿಸಲೂ ನನ್ನಿಂದಾಗುವುದಿಲ್ಲ" ಎಂದು ಹೇಳುತ್ತಿದ್ದರು. ವರ್ಷಕ್ಕೆ ಎರಡು ಪೂರ್ಣ ಉತ್ತಮ ಪ್ರತಿ ಸಿದ್ಧಪಡಿಸಲೂ ನನ್ನಿಂದಾಗುವುದಿಲ್ಲ" ಎಂದು ಹೇಳುತ್ತಿದ್ದರು.

ವರ್ಷಕ್ಕೆ ಎರಡು ಪೂರ್ಣ ಕಾದಂಬರಿಗಳನ್ನೂ, ಒಂದೋ-ಎರಡೊ ಕಾದಂಬರಿಗಳನ್ನೂ ಬರೆಯಲು ಸಾಧ್ಯಾವಾಗಬಹುದು ಎಂದು ಹೇಳುತ್ತಿದ್ದರು. ಕಾದಂಬರಿಯ ಪಾತ್ರಗಳು ಚೆನ್ನಾಗಿ ಮೂಡಿ ಬರಬೇಕು, ಅಧ್ಯಾಯಗಳು ಓಟ ಅತ್ಯಂತ ಕುತೂಹಲವಾಗಬೇಕು ಎಂದೆಲ್ಲಾ ನಿರ್ಧರಿಸಿ ಬರೆಯತೊಡಗುವಾಗ ವೇಗದ ಬರವಣಿಗೆ ಸಾಧ್ಯಾವಾಗುವುದಿಲ್ಲವೆಂದು ರಾಯರು ಹೇಳುತ್ತಿದ್ದರು.

ರಾಯರು ಅತ್ಯಂತ ವ್ಯವಸ್ಥಿತ ಬರಹಗಾರ. ಪತ್ರಿಕಾ ಓದುಗರನ್ನು ಬಹಳ ಚೆನ್ನಾಗಿ ಅರ್ಥಮಾಡಿಕೊಂಡಿದ್ದವರು. ಆದರೆ ಎಂದಿಗೂ ತಮ್ಮ ಪುಸ್ತಕಗಳು ತಾವು ಜನಪ್ರಿಯವಾಗಬೇಕು ಎಂದು ಸಾಮಾನ್ಯ ಮಟ್ಟದ ಬರವಣಿಗೆ ಮಾಡಲಿಲ್ಲ. ಅಶ್ಲೀಲ ವಿವರಗಳು, ಗಂಡು-ಹೆಣ್ಣಿನ ತೀವ್ರ ಸಂಬಂಧ ಇವನ್ನು ಚಿತ್ರಿಸಲಿಲ್ಲ. ಸುಂದರವಾದ ಶುದ್ಧ ಅಭಿರುಚಿಯ, ಉತ್ತಮ ಭಾಷೆಯ ಸೃಷ್ಟಿ ಅವರದಾಗಿತ್ತು.

ಅವರು ಬರೆದದ್ದೆಲ್ಲ ಜನಪ್ರಿಯವಾಯಿತು. ಪುಸ್ತಕ ಪ್ರಕಾಶಕರು, ಪತ್ರಿಕಾ ಸಂಪಾದಕರು ಮತ್ತು ಓದುಗರ ನಡುವೆ ಅವರದೊಂದು ಗಟ್ಟಿಯಾದ ಬಾಂಧವ್ಯ-ಬೇಡಿಕೆ ಸೃಷ್ಟಿಯಾಯಿತು. ಕಾದಂಬರಿಯೊಂದನ್ನು ಬರೆದುಕೊಡಲೇ ಮೊದಲು ಪತ್ರಿಕಾ ಸಂಪಾದಕರನ್ನು ತಲುಪುತ್ತಿತ್ತು. ಪತ್ರಿಕೆಯಲ್ಲಿ ಧಾರವಾಹಿಯಾಗಿ ಪ್ರಕಟವಾಗುತ್ತಿರುವಾಗಲೇ ಪುಸ್ತಕ ಪ್ರಕಾಶಕರು ಅಡ್ವಾನ್ಸ್ ಕೊಡಲು ಬರುತ್ತಿದ್ದರು. ಧಾರವಾಹಿ ಮುಗಿದು, ಪುಸ್ತಕ ರೂಪ ಪ್ರಕಟವಾಗಿ ಕೆಲವೇ ದಿನಗಳಲ್ಲಿ ಮಾರಾಟವಾಗಿ ಹೋಗುತ್ತಿತ್ತು. ಎರಡನೇ ಆವೃತ್ತಿ ಪ್ರಕಟಿಸಲು ಬೇರೊಬ್ಬ ಪ್ರಕಾಶಕರು ಬರುತ್ತಿದ್ದರು. ಎಲ್ಲರೂ ಗೌರವಧನ ಮುಂದಿಟ್ಟು ಕೃತಜ್ಞತೆಗಳೊಂದಿಗೆ ಅನುಮತಿ ಪತ್ರ ಸಮೇತ ಹಿಂದಿರುಗಿ ಹೋಗುತ್ತಿದ್ದರು. ಕೆಲವು ಮಂದಿ ಉತ್ಸಾಹಿಗಳು, ಇವರ ಪುಸ್ತಕ ಪ್ರಕಟಿಸುವುದರೊಂದಿಗೆಯೇ ಹೊಸ ಪ್ರಕರಣ ಸಂಸ್ಥೆ ಪ್ರಾರಂಭಿಸಿರುವುದುಂಟು.

ಅವರ ಮನೆಗೆ ಭೇಟಿ ನೀಡಿದ ಸಂಪಾದಕರಿಗೆ ಟಿ.ಕೆ. ರಾಮರಾವ್ ದಂಪತಿ ಅತ್ಯಂತ ಸ್ನೇಹ-ವಿಶ್ವಾಸಗಳಿಂದ ತಿಂಡಿ-ಕಾಫಿ ನೀಡಿ ಉಪಚರಿಸುತ್ತಿದ್ದರು. ಅವರು ಬನಶಂಕರಿಯಲ್ಲಿ (ಬೆಂಗಳೂರಿನ) ಒಂದು ಸುಂದರವಾದೊಂದು ಮನೆ ಕಟ್ಟಿಕೊಂಡಿದ್ದರು. ಅವರಲ್ಲಿ ಒಂದು ಸ್ಕೂಟರ್ ಇತ್ತು. ಅದರಲ್ಲೇ ಬೆಂಗಳೂರಿನ ಎಲ್ಲ ಕಡೆಗೂ ಓಡಾಡುತ್ತಿದ್ದರು.

ಇಂಥ ಸಾಧನೆ, ಜನಪ್ರಿಯತೆ, ಬಹುಬೇಡಿಕೆ, ಹಣಸಂಪಾದನೆ, ಕೀರ್ತಿಗಳ ನಡುವೆಯೂ ಅವರು ಅತ್ಯಂತ ಸರಳ ವ್ಯಕ್ತಿಯಾಗಿದ್ದರು. ಎಲ್ಲರೊಂದಿಗೆ ಬಹಳ ಚೆನ್ನಾಗಿ

ನಗುನಗುತ್ತ ಸುಲಭವಾಗಿ ಬರೆಯುತ್ತಿದ್ದರು. ಹಿಂದೆ ಅವರೊಬ್ಬ ಅತಿ ಯಶಸ್ವಿ ಟ್ಯುಟೋರಿಯಲ್ಸ್ ಉಪಾಧ್ಯಾಯ ಮತ್ತು ಯಶಸ್ವಿ ಔಷಧಿ ಮಾರಾಟಗಾರ, ಸೌಮ್ಯ ನಡವಳಿಕೆ, ಮೃದು ಮಾತುಗಾರಿಕೆ, ಮುಖದ ಮೇಲೆ ಯಾವಾಗಲೂ ಮಂದಹಾಸ, ಪತ್ನಿಯೊಂದಿಗೆ ಶಾಂತವಾದ ಬದುಕು ಸಾಗಿಸಿದ್ದರು. ಅವರ ಪೂರ್ಣಾವಧಿ ಹವ್ಯಾಸ ಬರವಣಿಗೆ ಅವರಿಗೆ ಸುಮಾರು ಮೂರು ದಶಕಗಳ ಬರವಣಿಗೆ ಸಾಗಿತು. ಕೀರ್ತಿ–ಸಂಪಾದನೆ ಶಿಖರಕ್ಕೇರಿತು.

ರಾಮರಾಯರು ಎಲ್ಲರೂ ಗುರುತಿಸುವಂತೆ ಭಾವುಕಜೀವಿ, ಬುದ್ಧಿಜೀವಿ, ಮೂಢಿ, ಶ್ರಮಜೀವಿಯಾಗಿ ಅವರ ಜೀವನ ಒಂದು ರೀತಿಯಲ್ಲಿ ಸೀಮಿತತೆಯಿಂದ ಕೂಡಿದ್ದು ಎಂದೂ ಚೆನ್ನಪಟ್ಟಣದ ಬಯಲುಸೀಮೆ ಪತ್ರಿಕೆಯ ಸಂಪಾದಕರಾದ ಸುತಾರಾಮೇಗೌಡರು ಹೇಳುತ್ತಾರೆ. ರಾಯರು ತಮ್ಮನ್ನು ತಾವು ಎಲ್ಲೂ ಗುರ್ರುತಿಸಿಕೊಳ್ಳುವಲ್ಲಿ ಇಚ್ಛಿಸಲಿಲ್ಲ. ಅವರ ಬದುಕಿನ ಸೀಮಿತತೆ ಕೇವಲ ತಮ್ಮ ಕಾದಂಬರಿಗಳನ್ನು ರಚಿಸುವುದು, ತಮ್ಮ ಟ್ಯುಟೋರಿಯಲ್ ಶಾಲೆಯ ಶಿಕ್ಷಣವೇ ಆಗಿದ್ದಿತು. ಅವರನ್ನು ಗೌರವಿಸಲು ಯಾವುದೇ ಸಮಾರಂಭಗಳಲ್ಲಿ ಭಾಗವಹಿಸಲು ಆಹ್ವಾನವಿಟ್ಟರು, ಅವರು ಅದನ್ನು ನಿರಾಕರಿಸುತ್ತಿದ್ದರು. ಅವರು ಅವರ ಬದುಕಿನ ಬಗ್ಗೆ ಎಲ್ಲೂ ಅಷ್ಟಾಗಿ ಹೇಳಿಕೊಳ್ಳಲಿಲ್ಲ, ಬರೆದುಕೊಳ್ಳಲಿಲ್ಲ. ಇವರನ್ನು ಎಷ್ಟೋ ವೇಳೆ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷರಾಗಿ ಗೌರವಿಸಲು ಆಹ್ವಾನವಿಟ್ಟರೂ ಅವರು ಯಾವುದೇ ರೀತಿಯಲ್ಲೂ ಬರಲು ನಿರಾಕರಿಸುತ್ತಿದ್ದರು. ಆಗ ಇವರ ಬದಲು ಇವರ ಸ್ನೇಹಿತರಾದ ಸಮಕಾಲೀನರಾದ 'ರಸಿಕ ಪುತ್ತಿಗೆ' ಎಂಬ ಬಿರುದು ಪಡೆದ ಸುಬ್ರಮಣ್ಯ ಆಚಾರ್ಯರವರಿಗೆ ಸಮ್ಮೇಳನದ ಅಧ್ಯಕ್ಷರಾಗಿ ಸನ್ಮಾನಿಸಿ ಗೌರವಿಸಲಾಯಿತು.

ರಾಯರ ಸಾಹಿತ್ಯ ರಚನೆಗೆ ಸ್ನೇಹಿತರಾದ ಸುಬ್ರಮಣ್ಯ ಆಚಾರ್ಯ, ಎ.ಆರ್.ನಾಗರಾಜ್ ಅವರು ಕೂಡ ಪ್ರೇರಣೆ ಮತ್ತು ಪ್ರೋತ್ಸಾಹ ನೀಡಿದರು. ರಾಯರು ಸಾಹಿತ್ಯದಲ್ಲಿ ತುಂಬಾ ಕೃಷಿಕರಾಗಿ, ಅವರ ಕಾದಂಬರಿಗಳಲ್ಲಿ ಬರುವ ಎಲ್ಲಾ ಪಾತ್ರಗಳು ಜೀವಂತಿಕೆಯಿಂದ ಕಂಗೊಳಿಸಲು ಸಾಧ್ಯವಾಗಿರಬಹುದು ಎಂದು ಶ್ರೀಮತಿ ಶಕುಂತಲಾ ರಾಮರಾವ್‌ರ ಅಭಿಪ್ರಾಯ. ಅವರ ಕಾದಂಬರಿಯ ಸ್ತ್ರೀ ಪಾತ್ರಗಳಲ್ಲಿ ಸರಸ–ವಿರಸ, ಕೋಪ–ತಾಪ, ದುಃಖ–ಸಂತೋಷ, ಹಠ–ದ್ವೇಷ ಎಲ್ಲಾ ಭಾವನೆಗಳನ್ನು ಕಾಣುತ್ತೇವೆ. ಅವರ ಪಾತ್ರ ಸೃಷ್ಟಿಗಾಗಿ ಹಲವು ಸಂದರ್ಭಗಳನ್ನು ಒದಗಿಸಿ ಅವರಿಗೆ ಎಲ್ಲವನ್ನು ನೋಡಬೇಕು, ಯಾವುದರಲ್ಲಿ ಏನಿದೆ ಎಂಬುದನ್ನು ಅರಿಯಬೇಕು, ಸಿರಿತನ, ಬಡತನ,

ಕಷ್ಟ–ಸುಖ, ಮೃಷ್ಟಾನ್ನ ಭೋಜನ ಇಲ್ಲವೇ ಉಪವಾಸ ವಾಸ್ತವತೆ ಏನು ಎಂಬ ಅರಿವು ತಮ್ಮ ಅನುಭವಗಳನ್ನೂ ಪೂರಕವಾಗಿರಿಸಿ ಸಾಹಿತ್ಯ ರಚಿಸುತ್ತಿದ್ದರು. ಹೀಗೆ ಅಪಾರವಾದ ಜೀವನಾನುಭವ, ಆಳವಾದ ಅಧ್ಯಯನದಿಂದಾಗಿ ಕಾದಂಬರಿ ರಚನೆಗೆ ತೊಡಗಿದ ರಾಯರು ಜೀವನದ ಕೊನೆಯ ತನಕವೂ ಬರೆದರು ಹಲವು ಪ್ರಶಸ್ತಿಗಳಿಗೂ ಪಾತ್ರರಾದರೂ ರಾಮರಾವ್ ಅವರಿಗೆ 'ಕನ್ನಡ ಸಾಹಿತ್ಯ ಅಕಾಡೆಮಿ' ಮತ್ತು ಮದ್ರಾಸ್ ಸಾಹಿತ್ಯ ಅಕಾಡೆಮಿ' ಮೊದಲಾದ ಹಲವಾರು ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಇವರ ಹೆಸರನ್ನು ಚೆನ್ನಪಟ್ಟಣದ ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ 'ಟಿ.ಕೆ ರಾಮರಾವ್ ದ್ವಾರ' ಎಂಬ ಹೆಸರು ಕೊಟ್ಟಿದ್ದಾರೆ.

ಇವರ ಹಲವಾರು ಕಾದಂಬರಿಗಳು ದೂರದರ್ಶಕ ಮತ್ತು ಚಲನಚಿತ್ರಗಳಾಗಿ ಮಾರ್ಪಡಿಸಲಾಯಿತು. ಇವರ ಕಾದಂಬರಿಗಳು ಕೆಲವು ಕನ್ನಡ ಪ್ರಭ, ಸಂಯುಕ್ತ ಕರ್ನಾಟಕ, ತರಂಗ, ಸುಧಾ, ಮಯೂರ, ಪ್ರಜಾಮತ, ತುಷಾರ, ಮಲ್ಲಿಕೆ ಪತ್ರಿಕೆ ಮುಂತಾದ ದೈನಂದಿನ ಮತ್ತು ವಾರಪತ್ರಿಕೆಗಳಲ್ಲಿ ಧಾರವಾಹಿಯಾಗಿ ಮೂಡಿಬಂದಿದೆ.

ಹೀಗೆ ರಾಮರಾವ್ ಅವರು ಇಟ್ಟ ಹೆಜ್ಜೆ, ಪಟ್ಟ ಶ್ರಮ ಅವರ ಬರಹದ ಬೆಂಗಾವಲಾಗಿಯೇ ಬಂದವು. ನಿರಂತರ ಅಧ್ಯಯನ, ಚಿಂತನ–ಮಂಥನ, ಪಡೆದುಕೊಂಡ ಅಪಾರವಾದ ಜೀವನಾನುಭವ, ಬದುಕಿನ ಅನಿವಾರ್ಯತೆ, ಬರೆಯಬೇಕೆಂಬ ತುಡಿತ–ಮಿಡಿತಗಳು ರಾಮರಾವ್ ಅವರನ್ನು ಉತ್ತಮ ಲೇಖಕರನ್ನಾಗಿ ರೂಪಿಸಿದವು. ಚೆನ್ನಪಟ್ಟಣ ತಾಲ್ಲೂಕಿನಲ್ಲಿ ಪ್ರಸಿದ್ಧಿ ಪಡೆದ ಸಾಹಿತಿಯೊಬ್ಬನಿಗೆ ತಾಲ್ಲೂಕಿನ ಜನತೆ ಗೌರವಿಸಿದ್ದಕ್ಕಿನ್ನ ನಿಂದಿಸಿದ್ದೇ ಹೆಚ್ಚು. ಅಂಥಾದರಲ್ಲಿ ಬಹಳ ದಿನಗಳ ಮೇಲೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕನ್ನಡ ಸಂಘಟನಾ ಸಮಿತಿಯವರು, ಅಲ್ಲಿನ ಜನರು ಇಂದಿಗೂ ಟಿ.ಕೆ. ರಾಮರಾವ್ ಅವರನ್ನು ಸ್ಮರಿಸಿಕೊಳ್ಳುವ ಕೆಲಸ ಮಾಡಿದ್ದೊಂದು ಸ್ವಾಗತಾರ್ಹ ಹಾಗೂ ಮೈಲಿಗಲ್ಲಾದ ವಿಷಯವಾಗಿದೆ ಎಂದು ಕೂಡ್ಲೂರು ವೆಂಕಟಪ್ಪರವರು ಹೇಳಿದ್ದಾರೆ.

ಒಟ್ಟಾರೆ ರಾಮರಾಯರ ಖಾಸಗೀ ಹಾಗೂ ಸಾಹಿತ್ಯಿಕ ಬದುಕಿನ ಸ್ಥೂಲ ಚಿತ್ರಣಗಳನ್ನು ಕಟ್ಟಿಕೊಡುವ ಪ್ರಯತ್ನವನ್ನು, ಅವರ ಭಾವಗಳ ನವುರಾದ ಅಭಿವ್ಯಕ್ತಿ ಸಾಧ್ಯತೆಗಳಿಂದ ಕಾದಂಬರಿ ಕ್ಷೇತ್ರದಲ್ಲಿ ಹೊಸ–ಹೊಸ ಛಾಪು ಮೂಡಿಸುವಲ್ಲಿ ಯಶಸ್ವಿಯಾದರು.

ಅಧ್ಯಾಯ – ೩

ಟಿ.ಕೆ. ರಾಮರಾವ್‌ರವರ ಕಾದಂಬರಿಗಳ ಸಾಮಾಜಿಕ ಚಿಂತನೆ

ಸಾಮಾಜಿಕ ಕಾದಂಬರಿಗಳನ್ನು ವಿಶ್ಲೇಷಿಸುವಾಗ ಅದಕ್ಕೆ ಇರುವ ಅರ್ಥ ಮತು ವ್ಯಾಪ್ತಿಯನ್ನು ಸೂಕ್ಷ್ಮವಾಗಿ ಗ್ರಹಿಸಬೇಕು. ಸಾಮಾಜಿಕ ಕಾದಂಬರಿ ಎಂದರೇನು ಎಂಬ ಪ್ರಶ್ನೆಗೆ ಸುಲಭವಾಗಿಯೇ ಅರ್ಥ ದಕ್ಕಬಹುದಾದರೂ ಒಟ್ಟಂದದಲ್ಲಿ ವ್ಯಾಪಕವಾದ ವಿವರಣೆಯನ್ನು ಒಳಗೊಂಡಿದೆ. ಸಮಾಜ ಮತ್ತು ಸಮಾಜ ಜೀವಿಯ ಅಂತರ ಸಂಬಂಧದ ಸೂಕ್ಷ್ಮಾತಿ ಸೂಕ್ಷ್ಮ ಅಂಶಗಳು ಕೂಡ ಗಣನೆಗೆ ಬರುತ್ತವೆ.

ಇಂತಹ ಸಾಮಾಜಿಕ ಕಾದಂಬರಿಗಳ ವೈಶಿಷ್ಟ್ಯಗಳನ್ನು ಗುರುತಿಸುತ್ತಲೇ ಸಮಾಜವನ್ನು ಕುರಿತ ಆಲೋಚನೆಗಳನ್ನು ಸ್ಥೂಲವಾಗಿ ಪರಿಶೀಲಿಸಲಾಗುತ್ತದೆ. 'ವ್ಯಕ್ತಿಗಳ ಸಮೂಹವೇ ಸಮಾಜ' ಈ ಸಮೂಹದಲ್ಲಿ ವ್ಯಕ್ತಿಗಳ ಆಲೋಚನೆ, ಭಾವನೆ, ಆಶೋತ್ತರಗಳು, ಪರಂಪರಾಗತವಾಗಿ ಒಪ್ಪಿಕೊಂಡ ಮೌಲ್ಯಗಳು ಪರಸ್ಪರ ಭಿನ್ನವಾಗಿರುತ್ತವೆ. ಈ ವಿಭಿನ್ನತೆಯೇ ಸಮೂಹದಲ್ಲಿ ಸಾಮರಸ್ಯ ಮತ್ತು ಸಂಘರ್ಷಕ್ಕೆ ಈ ಸಂಘರ್ಷ ಮತ್ತು ಸಾಮರಸ್ಯ ನಡುವೆ ಬದುಕಿನ ಏರಿಳಿತಗಳಿವೆ. ಇದನ್ನು ಸಾಮಾಜಿಕ ಸಂದರ್ಭದಲ್ಲಿ ಬದುಕಿನ ಸ್ಥಿತ್ಯಂತರವನ್ನು, ಸಮಾಜದ ವಸ್ತು ಸ್ಥಿತಿಯನ್ನು ಲೇಖಕರಾದವರು ಗುರುತಿಸುತ್ತಾರೆ.

ಸಮಾಜ, ಸಮಾಜಜೀವಿ, ಸಾಮಾಜಿಕ ಪರಿಸ್ಥಿತಿ, ಅದರ ಪರಿಣಾಮ ಪ್ರೇರಣೆ ಮತ್ತು ಪ್ರಭಾವಗಳು ಕೃತಿಯ ಮುಖ್ಯ ಅಂಶವಾಗಿದೆ. ಕೃತಿಗೆ ಸಮಾಜವೇ ಕೇಂದ್ರ ಬಿಂದುವಾಗುತ್ತದೆ. ಸಾಮಾಜಿಕ ಸಂರಚನೆಗಳ ಆಯಾಮಗಳನ್ನು ಕೃತಿಯು ವಿಶ್ಲೇಷಿಸುತ್ತದೆ. ಅಂದಿನ ಸಾಮಾಜಿಕ ಜೀವನ ಪದ್ಧತಿಯನ್ನು ಆಯ್ದುಕೊಂಡು, ಅದರಲ್ಲಿದ್ದ ಮೂಢನಂಬಿಕೆ, ಸಂಪ್ರದಾಯ, ಸಂಸ್ಕೃತಿ, ಧರ್ಮ ಮತ್ತು ಸ್ಥರ ವಿನ್ಯಾಸಗಳ ಸೂಕ್ಷ್ಮ ಚಿತ್ರಣವನ್ನು ಕೊಟ್ಟು ಆಗಬೇಕಾದ ಪರಿವರ್ತನೆಯನ್ನು ಹೇಳುವ, ಸಾಮಾಜಿಕ ಕಳಕಳಿಯನ್ನು ಒಳಗೊಂಡ ಒಂದು ಕೃತಿಯನ್ನು 'ಸಾಮಾಜಿಕ ಕಾದಂಬರಿ' ಎಂದು ಕರೆಯುವರು.

ಇಂದಿನ ಸಾಮಾಜಿಕ ವ್ಯವಸ್ಥೆ 'ವೃತ್ತಿ'ಯ ಆಧಾರದ ಮೇಲೆ ಸೃಷ್ಟಿಗೊಂಡು, ವರ್ಗವಿಂಗಡಣೆ ಕಾಲಕ್ರಮದಲ್ಲಿ ಹುಟ್ಟಿಗೆ ಮಹತ್ವ ನೀಡಿತು. ಇದರಿಂದಾಗಿ ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ ವೈಶ್ಯ, ಶೂದ್ರ ಮುಂತಾದ ವರ್ಗಗಳು ಸೃಷ್ಟಿಯಾದವು. ಹೀಗೆ

ಸೃಷ್ಟಿಗೊಂಡ ಅಂದಿನ ದಿನದಿಂದ ಇಂದಿನವರೆಗೆ ಈ ವರ್ಗಗಳಲ್ಲಿ ಕಂಡುಬರುವ ವರ್ಗ ಸಂಘರ್ಷ, ವರ್ಗ ವೈಷಮ್ಯ, ಸಹಕಾರಗಳನ್ನು ಚಿತ್ರಿಸುವ ಪ್ರಯತ್ನವನ್ನು ಮಾಡಿದಾಗಲೇ ಸಾಮಾಜಿಕ ಕಾದಂಬರಿ ಅವಿರ್ಭಾವಗೊಂಡಿತು. ಬದುಕಿನ ರಮ್ಯಕ್ಷಣಗಳನ್ನು, ಸುಖ-ಸೌಂದರ್ಯಗಳನ್ನು ವರ್ಣಿಸುವ ಒಂದು ಮನಃಸ್ಥಿತಿ ಉಂಟಾದಂತೆಯೇ ವಾಸ್ತವಿಕ ಪರಿಸ್ಥಿತಿಗೆ ತಮ್ಮನ್ನು ತೊಡಗಿಸಿಕೊಳ್ಳುವ ಪ್ರವೃತ್ತಿ ಕಾದಂಬರಿಕಾರರಲ್ಲಿ ಕಾಣಿಸಿಕೊಂಡಿತು. ಜಡ್ಡುಗಟ್ಟಿದ ಸಮಾಜದ ಮೌಢ್ಯಾಚಾರಣೆಗಳನ್ನು ಬಯಲಿಗೆಳೆಯುವ, ಪರಿವರ್ತಿಸುವ, ಸಮಾಜದ ಜಾಗೃತಿಗೆ ಅನುವು ಮಾಡಿಕೊಡದ ಪ್ರಯತ್ನವನ್ನು ಕಾದಂಬರಿಗಳ ಮೂಲಕ ಮಾಡತೊಡಗಿದರು. ಸಮಾಜ ಮತ್ತು ಸಾಮಾಜಿಕ ಜೀವನದ ವಿಶ್ಲೇಷಣೆಯೇ ಮುಖ್ಯವಾಯಿತು. ಬದುಕಿನ ಹಿನ್ನೆಲೆಯಾಗಿರುವ ಸಮಾಜದ ಪಾತ್ರವನ್ನು ಗುರುತಿಸತೊಡಗಿದರ ಫಲವಾಗಿ 'ಸಾಮಾಜಿಕ ಕಾದಂಬರಿಗಳು' ಜನ್ಮತಾಳಿದವು. ಸಮಾಜ ಕೇಂದ್ರಿತ ವಸ್ತುವಿನ ನಿರೂಪಣೆಯನ್ನೊಳಗೊಂಡ ಕಾದಂಬರಿಗಳು 'ಸಾಮಾಜಿಕ ಕಾದಂಬರಿಗಳು' ಎನಿಸಿಕೊಂಡವು.

ಸೃಜನಶೀಲ ಸಾಹಿತ್ಯ ಸಾಮಾಜಿಕ ಕಾದಂಬರಿ ಪ್ರಗತಿಗೆ ಪೂರಕವಾಗಬೇಕು. ಸಾಹಿತ್ಯ, ಸಾಮಾಜಿಕ ಬದಲಾವಣೆಯ ಒಂದು ಮಾಧ್ಯಮವಾಗಬೇಕು. ಅನುಭವದ ಸರಳೀಕರಣ ಹಾಗೂ ಬದುಕನ್ನು ಸರಳೀಕರಿಸಿ ನೋಡುವಿಕೆಯಿಂದ ಪಾತ್ರಗಳ ಸೃಷ್ಟಿಯಾಯಿತು. ಕೃತಿ ವಿಚಾರಾತ್ಮಕವೂ, ಕಲಾತ್ಮಕವೂ, ವೈವಿಧ್ಯಮಯವೂ ಎಲ್ಲ ಸ್ತರದ ಬದುಕಿನ ಚಿತ್ರಣವನ್ನು ವಿಶಿಷ್ಟವಾಗಿ ರಚಿಸಿ ಅಸಂಖ್ಯಾತ ಕನ್ನಡಿಗರ ಮನಗೆದ್ದ ಉತ್ತಮ ಗುಣಮಟ್ಟದ ಸಾಮಾಜಿಕ ಕಾದಂಬರಿಗಳನ್ನು ಹೃದಯ ತಟ್ಟುವಂತೆ ರಚಿಸಿ ನಾಡಿನ ಉದ್ದಗಲಕ್ಕೂ ಮನೆಮಾತಾದ ಸಮಕಾಲೀನ ಲೇಖಕರಲ್ಲಿ ಭಿನ್ನರೂ, ಪ್ರಮುಖರಾದವರಲ್ಲಿ ಟಿ.ಕೆ. ರಾಮರಾವ್ ಅವರು ಕೂಡ ಒಬ್ಬರು.

ಸಂವೇದನಾಶೀಲನಾದ ಸಾಹಿತಿ ತಾತ್ಕಾಲದ ಸಾಮಾಜಿಕ ಆಶೋತ್ತರಗಳನ್ನು ಸ್ಪಂದಿಸುತ್ತಾನೆ. ಸಮಸ್ಯೆಗಳನ್ನು ಸೂಕ್ಷ್ಮಗ್ರಹಿತೆಯಿಂದ ವಿಶ್ಲೇಷಿಸುತ್ತಾನೆ. ತನ್ನ ಸುತ್ತಲ ಸಮಾಜದ ಬದುಕಿನ ಹಲವು ರೀತಿ-ನೀತಿಗಳನ್ನು ಹೇಗೆ ಗ್ರಹಿಸುತ್ತಾನೋ ಆ ತಾತ್ವಿಕ ನೆಲೆಯಲ್ಲಿ ಕಾದಂಬರಿ ರೂಪು ಪಡೆಯುತ್ತದೆ. ಈ ನಿಟ್ಟಿನಲ್ಲಿ ಟಿ.ಕೆ.ರಾಮರಾವ್ ಅವರ ಕಾದಂಬರಿಗಳ ವಸ್ತುನಿಷ್ಠ ಜವಬ್ದಾರಿ ವಿಶಿಷ್ಟವಾಗಿರುತ್ತದೆ. ಸಾಮಾಜಿಕ ಕಾದಂಬರಿಕಾರರಾದ ರಾಮರಾವ್‌ರು ಸಾಮಾಜಿಕ ಪರಿಸರದಲ್ಲಿ ಉದ್ಭವಿಸುವ ಸಮಸ್ಯೆಗಳು ಬಹುಮುಖಿಯಾದವು ಕಾಮ-ಪ್ರೇಮ, ಹಸಿವು-ಬಡತನ, ಲೈಂಗಿಕ ಸಮಸ್ಯೆ

ಇತ್ಯಾದಿ. ಇವುಗಳ ಹಿಂದೆ ಮನುಷ್ಯ ಸಹಜ ರಾಗ-ಭಾವಗಳ ತಾಕಲಾಟಗಳು, ಸ್ನೇಹ-ಸಜ್ಜನಿಕೆ, ಅನುಕಂಪ-ಕ್ರೌರ್ಯ, ದ್ವೇಷ-ದಬ್ಬಾಳಿಕೆಗಳ ಚಿತ್ರಣ ಅನಾವರಣಗೊಳ್ಳುತ್ತದೆ. ಸಾಮಾಜಿಕ ಆಯಾಮದಲ್ಲಿ ರೂಪುಗೊಂಡ ಸಂಕೀರ್ಣ ಸಮಸ್ಯೆಗಳನ್ನು ವಾಸ್ತವಿಕ ನೆಲೆಗಟ್ಟಿನಲ್ಲಿ ನಿರೂಪಿಸುವ ಆಶಯ ಕೃತಿಯಲ್ಲಿ ಮೈದಾಳುತ್ತದೆ. ಈ ದೃಷ್ಟಿಕೋನದಿಂದ ಟಿ.ಕೆ. ರಾಮರಾವ್ ಅವರು ಸಮಕಾಲೀನ ಲೇಖಕರಿಗಿಂತ ವಿಶಿಷ್ಟರೆನಿಸುತ್ತಾರೆ.

ರಾಮರಾಯರು ಸಾಮಾಜಿಕ ಹಿನ್ನೆಲೆಯ ಕತೆಯಿದ್ದು ಕುತೂಹಲದ ಕ್ಷಣಗಳನ್ನು ಸೃಷ್ಟಿಸಬಲ್ಲ ಅಪೂರ್ವ ಸಾಮರ್ಥ್ಯದಿಂದ 'ಸಾಮಾಜಿಕ-ಪತ್ತೇದಾರಿ ಕಾದಂಬರಿ ಸಾಮ್ರಾಟ್' ಎನ್ನುವ ಮಾತಿಗೆ ಅಕ್ಷರಶಃ ನಿಜವಾಗಿದ್ದಾರೆ.

ಕನಸಿನ ಗೋಪುರದಿಂದ ವಾಸ್ತವಿಕತೆಗೆ ಮರುಳುವ ಧೋರಣೆಯೊಂದಿಗೆ ರಾಯರು ಸಾಮಾಜಿಕ ಕಾದಂಬರಿಗಳನ್ನು ರಚಿಸಿದರು.

ಪರಿಸರದ ಬದುಕನ್ನು ನಿಚ್ಚಳ ದೃಷ್ಟಿಯಲ್ಲಿ ಕಂಡು ಪಡೆದ ಸಂವೇದನೆಯನ್ನು ಆಕರ್ಷಕ ಶೈಲಿಯಲ್ಲಿ ಅಭಿವ್ಯಕ್ತಗೊಳಿಸುವ ಪ್ರಬುದ್ಧ ಕಲೆ ರಾಮರಾವ್ ಅವರಿಗೆ ಇತ್ತು.

ಹೃದಯ ಸ್ಪರ್ಶಿ ಸನ್ನಿವೇಶದಲ್ಲಿ ಆಕರ್ಷಕ ಕಥೆಗಾರಿಕೆಯಲ್ಲಿ ಮನ ಸೆಳೆಯುವ ತ್ಯಾಗ, ಅನುಕಂಪ, ಆತ್ಮೀಯತೆ ಬದುಕಿನ ಮೌಲ್ಯವನ್ನು ಹೆಚ್ಚಿಸುವಂತೆ ಒಂದು ಸ್ಪಷ್ಟವಾದ ರೂಪವನ್ನು ಮೂಢಿಸುವ ಕಲೆ ರಾಮರಾಯರಿಗಿದೆ.

ಇವರ ಕಾದಂಬರಿಗಳ ಹೆಸರುಗಳೇ ಓದುಗರಿಗೆ ಮೋಡಿ ಮಾಡುವಂತಿರುತ್ತದೆ. ದೂರಗಗನ, ಪಚ್ಚತೋರಣ, ಆಸರೆಯಗೊಂಬೆ, ಆಕಾಶದೀಪ, ಬಂಗಾರದ ಮನುಷ್ಯ, ಮಣ್ಣಿನದೋಣಿ, ಕಹಳೆಬಂಡೆ, ಲಂಗರು, ಮುಂತಾದ ಕಾದಂಬರಿಗಳಲ್ಲಿ ಮನುಷ್ಯನ ಜೀವನ ಸೂಕ್ಷ್ಮ ಎಳೆಗಳನ್ನು ಬಿಡಿಸಿ ತೋರಿಸಿದ್ದಾರೆ. ರಾಯರು ಸಾಮಾಜಿಕ ಸ್ಪಂದನೆಯುಳ್ಳ ವ್ಯಕ್ತಿಯಾಗಿದ್ದು, ವೈಚಾರಿಕ ಪ್ರಜ್ಞೆಯನ್ನು ಮೂಡಿಸುತ್ತಿರುವುದರ ಬಗ್ಗೆ, ಪ್ರಗತಿ ಪರ ಆಲೋಚನೆಯನ್ನು ಎತ್ತಿಹಿಡಿಯುವುದರ ಮೂಲಕ, ಪರಿವರ್ತನಾಶೀಲ ಸಮಾಜವನ್ನು ಉತ್ತಮವಾಗಿ ಕಟ್ಟಬೇಕೆಂಬ ಅವರ ಭಾವನೆಯನ್ನು ಸಂವಹನ ಸಮನ್ವಯ ಮತ್ತು ವಿಮರ್ಶಾ ವಿಧಾನವನ್ನು, ವಿಚಾರಗಳನ್ನು, ವೈಶಿಷ್ಟ್ಯಗಳನ್ನು ಕಾಣಬಹುದು.

ರಾಯರು ಕಾದಂಬರಿಯಲ್ಲಿ ಸಮಾಜ ಪ್ರತ್ಯೇಕ್ಷ ಅಥವಾ ಪರೋಕ್ಷವಾಗಿ ಸಾಮಾಜಿಕ ಸುಧಾರಣೆಯೇ ಗುರಿಯಾದ ಕಾದಂಬರಿಯಲ್ಲಿ ಸಮಾಜ ಪ್ರಮುಖವಾಗುತ್ತದೆ. ಈ ಉದ್ದೇಶ ಸ್ಪಷ್ಟವಾಗಿರದಿದ್ದರೂ ಸಾಮಾಜಿಕ ಕಟ್ಟುಪಾಡುಗಳು

ಬರುತ್ತವೆ. ಕಾದಂಬರಿಯಲ್ಲಿ ವೈಯಕ್ತಿಕ ಚಿತ್ರಣದೊಂದಿಗೆ ಕೌಟುಂಬಿಕ ಚಿತ್ರಣವೂ ಬರುತ್ತದೆ. ಇಂಥ ಕಡೆ ಸಮಾಜದ ಪಾತ್ರ ಚಿತ್ರಣವನ್ನು, ಅದರ ವೈಶಿಷ್ಟ್ಯವನ್ನು ಅವರ ಕಾದಂಬರಿಗಳಲ್ಲಿ ಅವಲೋಕಿಸಲಾಗಿದೆ.

ಇವರ ಕಾದಂಬರಿಗಳು ಮಾನವ ಸ್ವಭಾವದ ಎಲ್ಲ ಮುಖಗಳನ್ನು ವಾಸ್ತವತೆಯ ಹಿನ್ನೆಲೆಯಲ್ಲಿ ಚಿತ್ರಿಸುತ್ತವೆ. ಆದುದರಿಂದ ಒಂದಲ್ಲ ಒಂದು ಬಗೆಯ ಸಾಮಾಜಿಕ ಹಿನ್ನೆಲೆಯಲ್ಲಿ ವ್ಯಕ್ತಿಗಳ ಹೋರಾಟವನ್ನು, ಸಮಸ್ಯೆಯನ್ನು ಬೆಳವಣಿಗೆಯನ್ನು ಒಳಗೊಂಡಿರುವುದು ಅನಿವಾರ್ಯವಾಗಿರುತ್ತದೆ. ಹಾಗಾಗಿ ವ್ಯಕ್ತಿ ಮತ್ತು ವ್ಯಕ್ತಿಯನ್ನೊಳಗೊಂಡ ಸಮಾಜ ಎರಡು ಮುಖ್ಯವಾಗುತ್ತದೆ. ಆದ್ದರಿಂದ ಲೇಖಕನ ಜವಬ್ದಾರಿ ಹೆಚ್ಚಿನದಾಗಿರುತ್ತದೆ. ಆತ ಸಮಾಜ ಶಾಸ್ತ್ರಜ್ಞನೂ, ಮನಃಶಾಸ್ತ್ರಜ್ಞನು ಆಗಿರಬೇಕಾಗಿರುತ್ತದೆ. ಸಮಾಜ ರಚನೆ, ಸಾಮಾಜಿಕ ಅವಸ್ಥಾಂತರಗಳನ್ನು ಸೂಕ್ಷ್ಮವಾಗಿ ಅವಲೋಕಿಸುವಾಗ ಸಮಾಜಶಾಸ್ತ್ರಜ್ಞನಾಗಬೇಕಾಗುತ್ತದೆ. ಘಟಿಸಿದ ಘಟನಾವಳಿಗಳಲ್ಲಿ, ಸಂಕೀರ್ಣ ಪರಿಸ್ಥಿತಿಯಲ್ಲಿ, ಸಂಘರ್ಷಣೆಯ ವಾತಾವರಣದಲ್ಲಿ, ಭಾವನಾತ್ಮಕ ಸಂದರ್ಭಗಳಲ್ಲಿ ವ್ಯಕ್ತಿಯ ಮನಸ್ಸಿನ ಸೂಕ್ಷ್ಮಪದರಗಳನ್ನು ಬಿಂಬಿಸುವಾಗ ಮನಃಶಾಸ್ತ್ರೀಯ ದೃಷ್ಟಿಕೋನ ಬೇಕಾಗುತ್ತದೆ. ಎರಡರ ಅರಿವು ಇದ್ದಾಗ ಮಾತ್ರ ಯಶಸ್ವಿ ಕಾದಂಬರಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. ಕಾದಂಬರಿ ಒಂದು ವಿಧವಾದ ಮೃತ್ಯು, ಅದು ಬದುಕನ್ನು ವಿಧಿಯಾಗಿ, ಸ್ಮರಣೆಯನ್ನು ಉಪಯುಕ್ತ ಕೃತಿಯಾಗಿ ವೇಳೆಯನ್ನು ನಿರ್ಧಿಷ್ಟವಾದ ಮತ್ತು ಅರ್ಥಪೂರ್ಣವಾದ ಕಾಲವನ್ನಾಗಿ ಪರಿವರ್ತಿಸುತ್ತದೆ. ಆದರೆ ಈ ಪರಿವರ್ತನೆ ಸಾಧ್ಯವಾಗುವುದು ಸಮಾಜದ ಸಮ್ಮುಖದಲ್ಲಿಯೇ ಎಂದು ರಾಯರು ಹೇಳುತ್ತಾರೆ.

ಸಾಮಾಜಿಕ ಚಿಂತನೆ ಸಮಾಜದಲ್ಲಿದ್ದ ಗೊಡ್ಡು ನಂಬಿಕೆಗಳನ್ನು, ಅರ್ಥರಹಿತ ಸಂಪ್ರದಾಯಗಳನ್ನು, ವಿಚಾರರಹಿತ ಆಚರಣೆಗಳನ್ನು ಬಯಲಿಗೆಳೆಯುವ ಸಾಮಾಜಿಕ ಪ್ರಜ್ಞೆ ಕಾದಂಬರಿಯಲ್ಲಿ ವ್ಯಕ್ತಿಯಷ್ಟೇ ಸಮಾಜವೂ ಮುಖ್ಯವಾಗುತ್ತದೆ. ಆಯಾ ಸಮಾಜದ ಚೌಕಟ್ಟಿನಲ್ಲಿ ವ್ಯಕ್ತಿಯ ಬದುಕನ್ನು ನೋಡುವುದು, ವ್ಯಕ್ತಿಗೂ-ಸಮಾಜಕ್ಕೂ ಇರುವ ಸಂಬಂಧವನ್ನು ವಿಶ್ಲೇಷಿಸುವುದು ಮುಖ್ಯವಾಗುತ್ತವೆ. ಇಂತಹ ಕಾದಂಬರಿಗಳನ್ನು ಓದಿ ಮುಗಿಸಿದಾಗ ಅದರಲ್ಲಿನ ಪಾತ್ರಗಳಂತೆ ಸಮಾಜವೂ ನಮ್ಮ ಮನಸ್ಸಿನ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಬೇಕು. ವ್ಯಕ್ತಿಯಂತೆಯೇ ಸಮಾಜವೂ ಒಂದು ಪ್ರಮುಖ ಪಾತ್ರವಾಗಬೇಕು. ವ್ಯಕ್ತಿ ಮತ್ತು ಸಮಾಜಗಳ ನಡುವೆ ಕ್ರಿಯೆ ಮತ್ತು

ಪ್ರತಿಕ್ರಿಯೆಗಳೆರಡು ಮುಖ್ಯವಾಗಬೇಕು. ಕಾದಂಬರಿಕಾರನಿಗೆ ಸಮಕಾಲೀನ ಚಿಂತನೆಯು ಅವಶ್ಯವಾಗಿರುತ್ತದೆ. ಪ್ರಸ್ತುತ ಸಮಾಜದ ಆಗು-ಹೋಗುಗಳಿಗೆ ಆತ ಸಂವೇದಿಸಬೇಕಾಗುತ್ತದೆ. ಸಾಮಾಜಿಕ ಧೋರಣೆಗೆ ಸಾಹಿತಿ ಬದ್ಧನಾಗಿದ್ದರೂ ಅದರೊಂದಿಗೆ ತನ್ನ ಧೋರಣೆಯು ಒಂದಾಗಿರಬೇಕೆಂದೇನೂ ಇಲ್ಲ. ಆತನ ಬದ್ದತೆ ಸಮಾಜದ ಆಗು-ಹೋಗುಗಳನ್ನು ವಸ್ತುನಿಷ್ಠವಾಗಿ ಪರಿಶೀಲಿಸುವಂತಿರಬೇಕು. ಆಗ ಮಾತ್ರ ಸಾಮಾಜಿಕ ಪ್ರಜ್ಞೆ ರೂಪ ಪಡೆಯುತ್ತದೆ.

ಟಿ.ಕೆ. ರಾಮರಾವ್‌ರವರ ಸಾಮಾಜಿಕ ಸ್ಪಂದನೆಯುಳ್ಳ ವ್ಯಕ್ತಿಯಾಗಿದ್ದು ಸಾಮಾಜಿಕ ಆಯಾಮದಲ್ಲಿ ರೂಪುಗೊಂಡ ಸಂಕೀರ್ಣ ಸಮಸ್ಯೆಗಳನ್ನು ವಾಸ್ತವಿಕ ನೆಲೆಗಟ್ಟಿನಲ್ಲಿ ನಿರೂಪಿಸುವ ಆಶಯ ಕೃತಿಯಲ್ಲಿ ಮೈತಾಳುವ ಅನೇಕ ಸಾಮಾಜಿಕ ಪರಿಸರದಲ್ಲಿ ಉದ್ಭವಿಸುವ ಸಮಸ್ಯೆಗಳು ಬಹುಮುಖವಾದವು. ಅವರ ಕೃತಿ ವಿಚಾರಾತ್ಮಕವೂ, ಕಲಾತ್ಮಕವೂ ಆಗುವತ್ತ ಗಮನ ಹರಿಸಿದ ಸಮಕಾಲೀನ ಲೇಖಕರಿಗಿಂತ ವಿಶಿಷ್ಟರೆನಿಸುತ್ತಾರೆ. ಇವರ ಕಾದಂಬರಿಗಳ ವಸ್ತುನಿಷ್ಠ ದೃಷ್ಟಿಕೋನ ಗಮನಾರ್ಹವಾದುದು.

ಗುಪ್ತಗಾಮಿಯಾಗಿ ಸಂಚರಿಸಿ ವ್ಯಕ್ತಿಯನ್ನು ಪ್ರಚೋದಿಸುವ ಹಾಗೂ ಜಾಗೃತಾವಸ್ಥೆಯಲ್ಲಿ ಕಾಡುವ ದೈಹಿಕ ಕಾಮನೆಗಳು ಮನುಷ್ಯನ ಬದುಕಿನ ನಿರ್ಣಾಯಕ ಅಂಶಗಳಾಗುತ್ತವೆ. ಅದು ಮಾನವ ಸಹಜ ಪ್ರವೃತ್ತಿಗಳಲ್ಲಿ ಕಾಮವೂ ಒಂದು. ಅದಕ್ಕೆಂದೇ ಅದನ್ನು ಪುರುಷಾರ್ಥಗಳ ಜೊತೆಗಿಟ್ಟು ಗೌರವದ ಸ್ಥಾನ ಕೊಡಲಾಗಿದೆ. ಪುರುಷಾರ್ಥಗಳ ಹಿನ್ನೆಲೆಯಲ್ಲಿರುವುದು ವೈವಾಹಿಕ ಕಾಮ ವಂಶದ ಮುಂದುವರಿಕೆಗೆ ಮಾತ್ರ ಅಗತ್ಯವೆಂದು ಪರಿಗಣಿಸಲ್ಪಟ್ಟದ್ದು, ವಿವಾಹಬಾಹಿರವಾದ ಕಾಮ ಸಂಬಂಧಕ್ಕೆ ಸಮಾಜದಲ್ಲಿ ಮಾನ್ಯತೆಯಿಲ್ಲ. ಸೃಜನಶೀಲ ಕಲೆಗಳಲ್ಲಿ ಕಾಮವೂ ಒಂದು ಲೈಂಗಿಕತೆಯ ಪ್ರಧಾನ ವಸ್ತುವಾಗಿದೆ. ಕಾದಂಬರಿ ಸಾಹಿತ್ಯದಲ್ಲಿ ಕಾಮದ ಚಿತ್ರಣದ ಬಗೆಗಿದ್ದ ಮಡಿವಂತಿಕೆಯನ್ನು ತೊಡೆದದ್ದು ನವ್ಯ ಚಳುವಳಿ ವೈಯಕ್ತಿಕ ಬದುಕನ್ನು ಕಾಮದ ಹಿನ್ನೆಲೆಯಲ್ಲಿ ಅರ್ಥೈಸುವ ಪ್ರಯತ್ನ ಮಾಡಿದ ನವ್ಯಕಾದಂಬರಿಗಳು ತನ್ಮೂಲಕ ಕಾಮದ ಚಿತ್ರಣಕ್ಕೆ ಬೇರೆಯದೇ ಆಯಾಮಗಳನ್ನು ತರಲು ಶಕ್ತಿಯಾದವು. ಇವುಗಳ ಹೊರತಾಗಿ ಹೆಚ್ಚಾಗಿ ಇದು ಕ್ರೌರ್ಯದಿಂದ ತುಂಬಿದ್ದು, ಇದು ಅಭೀಪ್ಸೆಯ ಈಡೇರಿಕೆಯ ಪ್ರಯತ್ನ ಕೌಟುಂಬಿಕ ವಿಂಘಟನೆಗೆ ವಿರಸ-ವಿಕೋಪಗಳಿಗೆ ಕಾರಣವಾಗುತ್ತದೆ. ಇದಕ್ಕೆ ಬಲಿಯಾದವರ ದುಃಖ ಹೆಚ್ಚಾಗಿ ಕಾರ್ಯಕರಣ ಸಂಬಂಧಗಳನ್ನು ಪರಿಣಾಮಗಳನ್ನು

ಕುರಿತು ಗಂಭೀರವಾಗಿ ಚಿತ್ರಿಸುವ, ಚಿಂತಿಸುವ ಕಾರ್ಯ ಮಾತ್ರ ಬಹಳ ತೊಡಕಿನದು. ಸ್ವಲ್ಪ ಎಚ್ಚರ ತಪ್ಪಿದರೂ ಅಶ್ಲೀಲವಾಗಿಬಿಡಬಹುದಾದ ಇದರ ನಿರೂಪಣೆ ಸವಾಲಿನ ಕೆಲಸವೇ ಸರಿ. ಸಮಸ್ಯೆಗಳನ್ನು ಕೇಂದ್ರಬಿಂದುವಾಗಿ ಅದರ ಸುತ್ತ ಉಳಿದ ಘಟನಾವಳಿಗಳು ಥಳುಕು ಹಾಕುವುದನ್ನು ಗಮನಿಸಬಹುದು.

ಪ್ರಗತಿಶೀಲತೆಯ ಕೂಗು ಎಲ್ಲೆಡೆ ಕೇಳಿಬರುತ್ತಿದ್ದ ಸಂದರ್ಭದಲ್ಲಿ ರಚಿತವಾದ 'ಪಚ್ಚತೋರಣ' ರಾಯರ ಸಾಮಾಜಿಕ ಕಾದಂಬರಿ. ಇವರ ಕಾದಂಬರಿಯ ನಾಮ ಫಲಕವೇ ವಿಶಿಷ್ಟವಾದುದು. ಸುಂದರವಾದ ಪರಿಸರ ಮತ್ತು ಅಲ್ಲಿಯ ನೆಮ್ಮದಿಯ ಜೀವನ ಇದು ಚೆನ್ನಪಟ್ಟಣದ ಸುತ್ತಮುತ್ತಲ ಪ್ರಕೃತಿಯನ್ನು ತಾವು ಇದ್ದ ಕಂಡ ಊರು, ಕಣ್ವನದಿ, ಬೆಟ್ಟ-ಗುಡ್ಡಗಳನ್ನು ತಮ್ಮ ಹಲವು ಕಾದಂಬರಿಗಳಲ್ಲಿ ಸೊಗಸಾಗಿ ವರ್ಣಿಸಿದ್ದಾರೆ. ಎಂಬುದಕ್ಕೆ ನಿದರ್ಶನ ಈ ಕಾದಂಬರಿ ಪಚ್ಚತೋರಣ. ಪಚ್ಚತೋರಣದ ಕನಸು ಕಂಡ ಶಂಕರಪ್ಪ ನಿರಾಶೆಯ ಕಡಲಿಗೆ ಬಿದ್ದು, ಮರೀಚಿಕೆಯ ಬೆನ್ನು ಹಿಡಿಯುವುದೇ ಈ ಕಾದಂಬರಿಯ ವೈಶಿಷ್ಟ್ಯ. ಪಚ್ಚತೋರಣ ಎಂದರೆ ಹಸಿರು ತೋರಣ, ಇದು ಶುಭದ ಸಂಕೇತ.

ಶಂಕರಪ್ಪ ಚೆನ್ನಪಟ್ಟಣದ ಜಮೀನುದಾರ, ಒಬ್ಬ ಲಂಪಟ, ಕುಡುಕ, ಜೂಜುಕೋರ ಇಂತಹ ದೋಷಗಳನ್ನೆಲ್ಲಾ ಹೊಂದಿದ್ದರೂ, ಅದರಲ್ಲೇ ಒಂದು ತತ್ವ ಇಟ್ಟಿರುವ ಮನುಷ್ಯ. ಇವನಿಗೆ ಬುದ್ಧಿಹೇಳುವ ಸಾಮರ್ಥ್ಯ ಆತನ ಹೆಂಡತಿ ಪಾರ್ವತಿಗಾಗಲೀ, ಆಕೆಯ ಸಹೋದರನಾದ ರಾಮಸ್ವಾಮಿಗಾಗಲೀ, ಮಗನಾದ ಚಂದ್ರಶೇಖರ್‌ಗಾಗಲೀ ಇಲ್ಲ. ಇವನು ತನ್ನ ತಂದೆಯ ಜೀವಿತ ಕಾಲದಲ್ಲಿ ಪುಂಡಾಟ ನಡೆಸಿ, ತಂದೆಯನ್ನು ದುಃಖಿತನಾಗಿ ಮಾಡಿ, ಅವರು ಅದರ ಯೋಜನೆಯಲ್ಲಿ ದುಃಖತಡೆದು ಪಯಣಗೈದರು. ಇನ್ನೂ ಮುಗ್ಧ ಮುಖದ ಪತ್ನಿ ಪಾರ್ವತಿ ಪ್ರಪಂಚವನ್ನೇ ಅರಿಯದಕಾಲದಲ್ಲಿ ಇವನ ವಿವಾಹವಾಗಿ ಒಂದು ದಿನವೂ ಶಂಕರಪ್ಪನ ದುರ್ವ್ಯಾಪಾರದ ಬಗ್ಗೆ ಪ್ರಶ್ನೆ ಮಾಡಲಿಲ್ಲ. ಒಂದೊಂದು ಸಲ ಪ್ರಶ್ನೆ ಹಾಕುತ್ತಿದ್ದಳು. ಆ ಪ್ರಶ್ನೆಯಲ್ಲಿ ತೀಕ್ಷ್ಣತೆ, ವಿಷಗಳ ಸೋಂಕು ಇರಲಿಲ್ಲ. ಆ ಪ್ರಶ್ನೆಗಳಿಗೆಲ್ಲಾ ಕುಹಕ ಉತ್ತರವನ್ನು ನೀಡುತ್ತಿದ್ದ. ಒಟ್ಟಾರೆ "ದಬ್ಬಾಳಿಕೆಯಿಂದ ಬಾಯಿ ಮುಚ್ಚಿದ ಮುಗ್ಧ ಹೆಣ್ಣು" ಪಾರ್ವತಿ.

ಇವನ ಪ್ರತಿಸ್ಪರ್ಧಿ ಸುಬ್ಬರಾಯಪ್ಪ ಇವನಂತೆಯೇ ನಾಲ್ಕು ದಿನಗಳ ಶ್ರೀಮಂತ ವೇಷದಲ್ಲಿ ನಾಟಕ ಆಡಿ, ಬಹುಮುಂಚೆಯೇ ಬಾಳಿನ ಯಾತ್ರೆ ಮುಗಿಸಿದ.

ಚಂದ್ರಶೇಖರ ಶಂಕರಪ್ಪನ ಒಬ್ಬನೇ ಮಗ, ಈತ ಹುಟ್ಟಿದಂದಿನಿಂದ ಸಂತಸ ನೀಡಿದ. ತನ್ನ ಮಗನ ಬಾಳು ಒಂದು ಕನಸು, ಬೆಳೆಯ ಮೇಲೆ ವಿಷಾದಕ್ಕೆ ಬಲಿ ಸಿಕ್ಕಿದ ಅವನ ಹಣೆಬರಹಕ್ಕೆ ಈತ ಶಿಲ್ಪಿ. ಮಗ ಕಾಲೇಜು ವಿದ್ಯೆಯನ್ನು ಹಂತ–ಹಂತವಾಗಿ ಮುಗಿಸಿದಂತೆ ಸಂತಸದ ಮೆಲುಕನ್ನು ನಿಶ್ಯಬ್ದವಾಗಿ ಹಾಕಿದ ತಂದೆಯಾಗಿ ಕರ್ತ್ಯವ್ಯವನ್ನು ಒಂದು ದಿನವಾದರೂ ತೋರಲಿಲ್ಲ. ಮಗನ ಕಾಲೇಜು, ಹಾಸ್ಟೆಲ್, ಮೆಸ್, ಕವನಗಳು ಒಂದು ದಿನವೂ ಅವುಗಳ ದಿಕ್ಕಿಗೆ ತಲೆ ಹಾಕಲಿಲ್ಲ, ನೋಡಿ ನಲಿಯಲಿಲ್ಲ. ತನ್ನ ಸ್ವಾರ್ಥ ಹಟದಿಂದ ಇಷ್ಟಾದರೂ ತನ್ನ ಜೀವನ ಕಲುಷಿತ, ಕಾಮುಕ ಜೀವನ, ಬ್ರಾಂದಿ, ವಿಸ್ಕಿ, ಬೀರ್, ಪಾಂಪೇನ್ ಒಂದರ ಮೇಲೊಂದು ಶೀಷೆಗಳು ಖಾಲಿಯಾಗಿ ಉರುಳಿದವೂ ಎಷ್ಟೋ ಕುದುರೆಗಳ ಸಾಲುಗಳ ಕಣ್ಣಿಗೆ ಹಚ್ಚಿನ ಚಿತ್ರದಂತೆ ಹಾಕುಹೋದವು. ಎಷ್ಟೋ, ಹೆಣ್ಣುಗಳು ವರ್ಣ–ವರ್ಣಗಳಲ್ಲಿ ನಡೆದು ಬಂದವು. ಎಷ್ಟೋ, ದೈವ–ಭಕ್ತಿ, ಪೂಜೆ, ಸಂತರ್ಪಣೆಗಳು, ದೇಗುಲಗಳ ಭೇಟಿ ಪ್ರಪಂಚದ ಕಣ್ಣುಗಳಿಗೆ ಹಾಕಿದ ಪಟ್ಟಿಗಳು ಎಷ್ಟೋ ಹೇಳಲಾಗದು.

ಬೆಳ್ಳಿ ಅವಳೊಂದು ಮಾಯೆ, ನಿಕೃಷ್ಟ ಜಾತಿಯಲ್ಲಿ ತನ್ನ ಜಮೀನಿನ ಗುತ್ತಿಗೆದಾರನಾದ, ಮೆಚ್ಚಿನ ಆಳಾದ ಚಾಮಿ ಕೆಂಪನ ತಂಗಿಯಾಗಿ ಜನಿಸಿದ ಆ ರೂಪವನ್ನು ಅದೇಕೇ ಪಡೆದಳೋ? ಅವಳ ರೂಪು–ಲಾವಣ್ಯವೇ ಅವಳ ಬದುಕಿಗೆ ಮುಳುವಾಗಿತೋ ಏನೋ ಅವಳಲ್ಲಿ ಶಂಕರಪ್ಪನಿಗೆ ಜನಿಸಿದ ಮೋಹ–ಕಾಮ ಹೊಲತಿಯೊಂದಿಗೆ ಆಜನ್ಮ ಸಂಬಂಧ ಪಡೆದೂ, ಆಕೆಗೆ ಮೋಸಮಾಡಿ ಅದನ್ನು ಆಕೆಗೆ ಮದುವೆ ನಿಶ್ಚಯವಾಗಿದ್ದ ಗುರುವನ ಮೇಲೆ ಹೊರಿಸಿ ಊರಿನಿಂದ ಓಡಿಸಿ, ಆಕೆಯು ಸಮಾಜದ ನಿಂದನೆಗೆ ಗುರಿಯಾಗಿ ಮಾಡಿದ ಮುಂಗೋಪಿ ಅಣ್ಣ ಮದುವೆಯಾಗಲು ಹೃದಯ ಪೂರ್ವಕವಾಗಿ ಆಶಿಸಿದ್ದ ಗುರುವ ಅವಳನ್ನು ತಿರಸ್ಕರಿಸಿ ಹೊರಟುಹೋದನು. ಒಬ್ಬರು ಈಕೆಗೆ ಸಮಾಧಾನದ ಒಂದು ಮಾತನ್ನೂ ಆಡಲಿಲ್ಲ. ಬೆಳ್ಳಿಯ ಶೂನ್ಯ ಭವಿಷ್ಯ ಭೀಕರವಾಗಿ, ಬೃಹದಾಕಾರವಾಗಿ ಕೆಣಕಿ ಭೀತಿಯನ್ನು ಹುಟ್ಟಿಸಿ ಗರ್ಭವನ್ನು ಹೊತ್ತುಕೊಂಡು ಊರು ಬಿಟ್ಟುಹೋದ ಬೆಳ್ಳಿ ಬೆಂಗಳೂರು ನಗರಕ್ಕೆ ಸೇರಿ ಅನೇಕ ಕಷ್ಟಗಳನ್ನು ಎದುರಿಸಿ ಮಗುಗೆ ಜನ್ಮನೀಡಿ ಜುಲಿಯಾ ಎಂಬ ಹೆಸರಿನಲ್ಲಿ ಚರ್ಚಿನಲ್ಲಿ ಕೆಲಸ ಮಾಡಿಕೊಂಡು ನಂತರ ತನ್ನ ಮಗನನ್ನು ಕಸದ ತೊಟ್ಟಿಯಲ್ಲಿ ಮಲಗಿಸಿ ಓಡಿ ಹೋಗಿ ನಂತರ ಕರುಳಕರೆಯಿಂದ ಹೊರಬಂದಾಗ ಮಗು ಅನಾಥಶ್ರಮ ಸೇರಿ ನಂತರ ಒಂದು ಕುಟುಂಬವನ್ನು ಸೇರಿತು. ಅಲ್ಲಿಂದ ಆಕೆಯೂ ಕೂಡ ತನ್ನ ಮಗಳಿಗೆ ತಾನು

ತಾಯಿಯೆಂದು ಹೇಳಿಕೊಳ್ಳದೇ ಅವಳ ಭವಿಷ್ಯಕ್ಕಾಗಿ ಹೃದಯವನ್ನು ಒತ್ತಿಹಿಡಿದು ಹಿತಮಿತವಾಗಿ ದೂರದಿಂದಲೇ ಪ್ರೀತಿಸುತ್ತಿದ್ದ ಬೆಳ್ಳಿಯ ಮಗಳೇ ಕಲ್ಪನಾ.

ಮಗನ ಮದುವೆಗೆ ಅವನು ಆರಿಸಿದ ಹೆಣ್ಣಿಗೆ ತನ್ನ ಜಾತಿವಾದದ ಅಡ್ಡಗೋಡೆಯಾಗಿ ನಿಂತ ಶಂಕರಪ್ಪ ಇದರಿಂದ ಚಂದ್ರಶೇಖರ್ ತಂದೆಯಿಂದ, ಪ್ರಿಯತಮೆಯಿಂದ ದೂರವಾಗಲು ಹಿಡಿದ ದಾರಿ ನಿರುಪಾಯವಾದ ದಾರಿ. ಹೆಚ್ಚಿನ ವಿದ್ಯಾಭ್ಯಾಸದ ನೆಪದ ವಿದೇಶಯಾತ್ರೆ ಇದರಿಂದ ಪಶ್ಚಾತ್ತಾಪ ಪಡೆದ ಮಗನನ್ನು ಉಳಿಸಿಕೊಳ್ಳಲು ಶಂಕರಪ್ಪನ ಭಗೀರಥಯತ್ನ ಮನಮೆಚ್ಚಿನ ಹೆಣ್ಣನ್ನು ಮಗನಿಗೆ ಸೇರಿಸಲು ಎಲ್ಲಿಲ್ಲದ ಉತ್ಸಾಹ ತೋರುತ್ತಾನೆ.

ಆದರೆ ವಿಧಿ ಉತ್ಸಾಹಕ್ಕೆ ಸಿಡಿಮದ್ದು ಹಾಕಿ ಸ್ಫೋಟಿಸಿತು. ಆಶಾಸೌಧ ನುಚ್ಚು ನೂರಾಯಿತು. ಚಂದ್ರ-ಕಲ್ಪನ, ಅಣ್ಣ-ತಂಗಿ ಜನ್ಮ ನಂಟಿನ ಗಂಧವರಿಯದೆ ಅದೆಷ್ಟೋ ಗಾಢವಾದ ಪ್ರೀತಿಯನ್ನು ಸೃಜಿಸಿದರು. ಒಂದೇ ಆತ್ಮಸಂಗಮಕ್ಕೆ ಎರಡು ದೇಹಗಳ ವಿಶ್ವಾಸ ಪೂರ್ವಕ ಸಾಧನೆ, ಅಸಾಧ್ಯ ವಿವಾಹವಾಗಿ ಪರಿಣಮಿಸಿ, ಸ್ಫೋಟಗೊಂಡ ಚೂರುಗಳಿಂದ ಮೂಲಕ ರಚನೆ ಅಸಾಧ್ಯ. 'ಪಚ್ಚತೋರಣ' ಮರೀಚಿಕೆ ಮಗನ ಮಂಗಳ ವಿವಾಹದ ಪ್ರಥಮಚಿಹ್ನೆ ಕನ್ನಡಿಯಂತೆ ಹೊಡೆದು ಚೂರಾಯಿತು. ಪಚ್ಚತೋರಣ ಮನದ ಮೋಹದ ಆಸೆ. ಅದು ವಾಸ್ತವತೆಯಲ್ಲಿ ಕಾಣಲಾರೆ ಎಲ್ಲವೂ ಬಿಸಿಲ್ಗುದುರೆ ಎಂದು ಪಶ್ಚಾತ್ತಾಪ ಪಡುತ್ತಾನೆ.

ಹರಿಯುವ ನದಿ, ಅದರ ಮೇಲಿನ ಧೀರ್ಘ ಸೇತುವೆ ಅದರ ನಂತರ ಇಕ್ಕೆಲೆಗಳಲ್ಲೂ ಇಳಿಯ ಹೋದ ಭೂಪ್ರಪಾತ, ಅಂದರೆ ಬಾಳಿನ ಪೂರ್ಣ ದುಃಖ-ದುಮ್ಮಾನಗಳನ್ನು ಕೊನೆಗಾಣಿಸೋದು. ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಶಂಕರಪ್ಪನಂತಹ ಕಲ್ಲು ಎದೆಯ ಮನುಷ್ಯನಿಂದ ಕ್ಷಣಿಕ ಬಂದ ಯೋಚನೆಯನ್ನು ತಡೆಗಟ್ಟಿ, ಪಶ್ಚಾತ್ತಾಪಪಟ್ಟು, ಶಾಂತಿಗಾಗಿ ಚೆಂಗನೂರಿನ ಶಾಂತಿಕುಟೀರಕ್ಕೆ ಸ್ವಾಮಿ ನಿತ್ಯಾನಂದರ ದರ್ಶನಪಡೆಯಲು ಬಂದಾಗ ಹೊಸ ಜನ್ಮ ಪಡೆದವನಂತ್ತೆ ಬಂದಾಗ ಶಾಂತಿ ಕುಟೀರದ ಹೆಬ್ಬಾಗಿಲಿಗೆ ಸೊಗಸಾದ ದೊಡ್ಡ ಹಸಿರು ತೋರಣವನ್ನು ಕಟ್ಟಿದ್ದರು. ಅದನ್ನು ನೋಡಿದ ಶಂಕರಪ್ಪನ ಮುಂದೆ ಅವನ ಬದುಕಿನ ಚಿತ್ರಣವೇ ಮಂಕಾಗಿ ನಿಲ್ಲುವ ಶೂನ್ಯದೃಷ್ಟಿಯನ್ನು ಕಾಣಬಹುದು.

ಮಗನ ಮಂಗಳ (ಶುಭ) ವಿವಾಹದ ಪಚ್ಚತೋರಣಕ್ಕೆ ತಿಲಾಂಜಲಿ ಕೊಟ್ಟು ಬಂದವನಿಗೆ ಇಲ್ಲಿ ಅದರ ದರ್ಶನ-ಮೃಗಜಲ ಎಂಬಂತ್ತೆ ಮನಸ್ಸಿನ ಗೊಂದಲವನ್ನು

ಒತ್ತಿಹಿಡಿದ ಶಾಂತಿ ಕುಟೀರದಲ್ಲಿ ಸ್ವಾಮಿ ದರ್ಶನ ಪಡೆದು ಶಾಂತಿ ಬಯಸಿ ಜೀವನದ ಕೊನೆಯ ಕಾಲವನ್ನೆಲ್ಲಾ ಅಲ್ಲೇ ಕಳೆಯಬೇಕೆಂದು ಬಂದವನಿಗೆ ಸ್ವಾಮಿ ದರ್ಶನ ಪಡೆದವನಿಗೆ ಮುಖದಲ್ಲಿ ಕ್ಷಣಕಾಲ ಶಾಂತಿ ಗಂಭೀರನಾದ ನಂತರ ಸ್ಫೋಟಗೊಂಡ ಅಗ್ನಿ ವರ್ಷವನ್ನು ಸಾವರಿಸಿಕೊಂಡು ತನ್ನ ಅಧ್ಭುತ ಸ್ಮರಣಶಕ್ತಿಯ ಅಗಾಧ ಪ್ರಶಂಸೆಯ ನಂತರ ಸ್ವಾಮಿ ನಿತ್ಯಾನಂದರು ಭಕ್ತಿಕೋಟಿಯ ನಲ್ಮೆಯ ವಿಭೂತಿ ಸ್ವಾಮಿ ಬೇರೆ ಯಾರೂ ಅಲ್ಲ ಇಪ್ಪತ್ತು ವರ್ಷಗಳ ಹಿಂದೆ ಶಂಕರಪ್ಪನ ವಿಧೇಯ ಗುತ್ತಿಗೆದಾರ, ದರೋಡೆಯಿಂದ ತಲೆತಪ್ಪಿಸಿಕೊಂಡಿದ್ದ ಹೊಲೆಯ ಚಾಮಿ ಕೆಂಪ ಆಗಿದ್ದ. ಶಂಕರಪ್ಪ 'ಪಚ್ಚತೋರಣ'ದ ಮತ್ತೆ ಕನಸು ಕಂಡು ನಿರಾಶೆಯ ಕಡಲಿಗೆ ಬಿದ್ದಿದ್ದ ಮತ್ತೊಮ್ಮೆ ಮರೀಚಿಕೆಯ ಬೆನ್ನು ಹಿಡಿದಿದ್ದ ಎಂಬುದೇ ಈ ಕಥೆಯ ಕಥಾವಸ್ತುವಾಗಿದೆ.

ಬದುಕಿನ ಎಲ್ಲಾ ಹಂತದಲ್ಲೂ ಎದುರಿಸುವ ತೊಂದರೆಗಳನ್ನು 'ಆಕಾಶದೀಪ' ಕಾದಂಬರಿಯಲ್ಲಿ ಯಶಸ್ವಿಯಾಗಿ ನಿರೂಪಿಸಲಾಗಿದೆ. ಪತ್ರಿಕೋದ್ಯಮಿಯೊಬ್ಬನ ಬದುಕಿನ ನಿಷ್ಠುರಗಳನ್ನು, ಜೀವನದ ಅಭದ್ರತೆಯನ್ನು ಬಣ್ಣಿಸುತ್ತದೆ. ಶಿವಕುಮಾರ ಈ ಕೃತಿಯ ಕೇಂದ್ರಬಿಂದು. ಆತನ ವೃತ್ತಿ ಜೀವನದೊಂದಿಗೆ ಉಳಿದೆಲ್ಲರ ವೃತ್ತಿ ಜೀವನದ ವೈಖರಿಯು ಅರಿವಿಗೆ ಬರುತ್ತದೆ. ಆಶಾವಾದಿಯಾದ ಶಿವಕುಮಾರ ಆದರ್ಶವಾದಿಯೂ ಹೌದು, ಹೊಟ್ಟೆಪಾಡಿಗಾಗಿಯೇ ಪತ್ರಿಕಾ ರಂಗವನ್ನು ಪ್ರವೇಶಿಸಿದರೂ ಅದೊಂದೇ ಆತನಿಗೆ ಮುಖ್ಯವಾಗುವುದಿಲ್ಲ. ಪತ್ರಿಕೆಯ ಮೂಲಕ ಸಾಮಾಜಿಕ ಬದಲಾವಣೆಯನ್ನು ಮಾಡುವ ಉದ್ದೇಶ ಆತನದ್ದು. 'ಕಹಳೆ' ಪತ್ರಿಕೆಯ ಎಡಿಟರ್, ಮೊಗಸಾಲೆಯ ಅಸಿಸ್ಟೆಂಟ್ ಶಿವಕುಮಾರ್, 'ತುರಾಯಿ–ತೋಪು' ಶೀರ್ಷಿಕೆಯಲ್ಲಿ ಬರೆದ ಕಟುವಾದ ಬರಹಗಳು, ಪ್ರಭಾವ ಶಾಲಿ ಶ್ರೀಮಂತನ ತಲೆ ಕೆಡಿಸಿ ತಾಳ್ಮೆಯ ಜೇನುಗೂಡಿಗೆ ಕಿಚ್ಚು ಸೋಕಿಸುವ ಸಾಲುಗಳು 'ಕಿರಣ್ ಫಾರ್ಮಸ್ಯೂಟಿಕಲ್ಸ್ ಸಂಸ್ಥೆಯ' ಕೀರ್ತಿಗೆ ಕಪ್ಪು ಲೇಪನ ಅದರಿಂದ ಮಾಲೀಕ ಮೋಹನ್‌ರಾಯ್‌ನಿಂದ ಉಪಸಂಪಾದಕನಿಗೆ ತುರ್ತುಕರೆ. ಆದರೆ ತಿಳಿಸಿದ ಕಾಲದಲ್ಲಿ ರಾಯರು ಸಿಗಲಿಲ್ಲ. ಇದರಿಂದ ಶಿವಕುಮಾರ್‌ಗೆ ನಿರಾಶೆಯೊಡನೆ, ಏರಿ ಬಂತು ನಸುಕೋಪ ಮತ್ತೆ ನಾಳೆ ಬಂದು ಭೇಟಿಮಾಡಿ ಎಂದು ರಾಯರ ಸಹಾಯಕಿ ಹೇಳಿದಾಗ ನಾಳೆ ನನಗೆ ಬರೋದು ಸಾಧ್ಯವಿಲ್ಲ, ಕೋರ್ಟ್ ಕೆಲಸ ಇದೆ ಎಂದು ಹೊರಡುವಾಗ, ಮಳೆ ಹೊಡೆತ ತೀವ್ರಗೊಂಡು ಅಲ್ಲೆ ಉಳಿಯುವ ಪ್ರಮೇಯ, ಮತ್ತೆ ಮಾರನೇ ದಿನ ಮೋಹನರಾಯರ ಭೇಟಿಯಿಂದ ಈ ಕಥೆ ಪ್ರಾರಂಭವಾಗುತ್ತದೆ.

ಮಳೆಯ ಕಾರಣದಿಂದ ಪ್ರಜ್ಞೆತಪ್ಪಿದ ಶಿವಕುಮಾರ ರಾಯರ ಮನೆಯಲ್ಲಿ ಉಳಿಯಬೇಕಾಗಿತ್ತು. ಪ್ರಜ್ಞೆ ತಪ್ಪಿ ಬಿದ್ದಿದ್ದ ಯುವಕನನ್ನು ಮಳೆ, ರಾತ್ರಿ ಗುಡುಗು ಮಿಂಚಿಗೆ ಸಿಕ್ಕಿ ತತ್ತರಿಸಿದ, ಕತ್ತಲೆ ಕಂಬಕ್ಕೆ ಕುಸಿದ ದೇಹ, ಅಸ್ಪಷ್ಟ ಮಾತು, ಪೋರ್ಟಿಕೋದಲ್ಲಿ ನೀರಿನ ಮಧ್ಯೆ ಬಿದ್ದು ಹೋಗಿದ್ರಿ ಅಖಿಲಾ ನಿಮ್ಮನ್ನು ಚಕ್ರದ ಕುರ್ಚಿಯಿಂದ ತಂದು ಒಳಗೆ ಸಾಗಿಸಿದಳೆಂದು ಅಂಬುಜಮ್ಮ ಹೇಳಿದರು. ಅಲ್ಲಿ ರಾಯರ ಇಬ್ಬರ ಹೆಣ್ಣುಮಕ್ಕಳು ಕಿರಣ–ಅಖಿಲಾ ಒಂದೇ ರೀತಿಯ ರೂಪುವುಳ್ಳ, ಬೇರೆ–ಬೇರೆ ಗುಣವುಳ್ಳ ಎರಡು ಧ್ರುವತಾರೆಗಳನ್ನು ಕಂಡು ಅಚ್ಚರಿಪಟ್ಟ. ಅಲ್ಲಿನ ಅಂದರೆ ರಾಯರ ಕಂಪನಿಯ ಲೆಕ್ಕಾಧಿಕಾರಿಯ ಹೆಂಡತಿ ಶೈಲಜಾರ ಪರಿಚಯವೂ ಆಯಿತು.

ಮತ್ತೆ ರಾಯರ ಭೇಟಿ ಹೇಳಿದ ಕಾಲದಲ್ಲಿ ನಾನು ಗೈರುಹಾಜರು ಕ್ಷಮಿಸಿ, ಕಾರಣ ಅಪಘಾತ ಎಂದು ಹೇಳಿದ ರಾಯರು ಒಂದು ಪೇಪರ್ ಕಟ್ಟು ಮೇಜಿನ ಮೇಲೆ ಇಟ್ಟರು. ಆಗ ಶಿವಶಂಕರ ನನ್ನ ಪತ್ರಿಕೆ ನನಗೆ ತೋರಿಸ್ತಾ ಇದೀರಿ, ಅದರಲ್ಲಿರೋದು ನನ್ನ ಲೇಖನ, ನನ್ನ ಭಾಷೆ ಮಿಸ್ಟರ್ ರಾಯ್ ನಾನು ಆತ್ಮದ ಕರೆಗೆ ಬೆನ್ನು ತೋರಿಸೋನಲ್ಲ ಬರೆಯೋದು ಸತ್ಯ ಚಿತ್ರ ಎಂದಾಗ ರಾಯರು ಕರೆಕೊಡುವ ಆತ್ಮಕ್ಕೆ ಸತ್ಯದ ಮನವರಿಕೆ ಆಗಿರ್ಬೇಕು ಎಂದರು. ನಾವು ತೆರೆದ ಕಡಾಯಿನಲ್ಲಿ ವಿಟಮಿನ್ ಕುದಿಸೋದು, ಮಲ್ಟಿವಿಟಮಿನ್ ಸಿರಪ್‌ಗೆ ಹೊರ ಪಟ್ಟಿಯಲ್ಲಿ ಕಾಣಿಸಿದ ಘಟಕಗಳನ್ನು ಸೇರಿಸದೆ ಇರೋದು ಕೆಮ್ಮಿನ ಎಕ್ಸ್‌ಪೆಕ್ಟೊರೆಂಟ್‌ನಲ್ಲಿ ಆಲ್ಕೋಹಾಲ್ ಅಂಶ ಜಾಸ್ತಿ ಸೇರಿರೋದು ಇವೆಲ್ಲಾ ಸತ್ಯ ಅಂತ ತಿಳಿದ್ರೇನು ಬರೀ ಕಲ್ಪನೆ, ಉತ್ಪ್ರೇಕ್ಷೆ ಎಂದರು. ವಿಟಮಿನ್ 'ಬಿ' ಕೂಪಿಯಲ್ಲಿ ನೊಣ ಸೇರಿದ್ದು ಎರಡು ಸಾರಿ ಭಟ್ಟಿ ಇಳಿಸದೆ ನೀರು ಬಳಸಿದ್ದು ಕಲ್ಪನೆಯೇ ಎಂದು ಶಂಕರ ರಾಯರಿಗೆ ಪ್ರಶ್ನೆಮಾಡಿದಾಗ ಅವರು ವಿಚಲಿತರಾಗಲಿಲ್ಲ.

"ಲೇಖನಿ ಅಷ್ಟೊಂದು ಹರಿತವಾಗೋ ಅಗತ್ಯ ಇರ್ಲಿಲ್ಲ ಇದೆಲ್ಲಾ ಹಗುರ ವಿಷಯ ಅಂತ ನಾನು ಹೇಳ್ತಾ ಇಲ್ಲ, ಕಣ್ಣು ತಪ್ಪಿ ಅಚಾತುರ್ಯ ನಡೆದಿದೆ, ಔಷಧಿ ತಯಾರಿಸೋನಿಗೂ ಹೃದಯ ಇದೆ" ಎಂದು ರಾಯರು ರಿಸೆಪ್ಷನಿಸ್ಟ್‌ನ್ನು ಕರೆದು, ಎಡಿಟರ್ ಸಾರ್ ಒಂದು ಸಾರಿ ನೀವು ನನ್ನ ತಯಾರಿಕಾ ವಿಭಾಗಗಳನ್ನು ನೋಡಿ ಬನ್ನಿ ಧರಮ್‌ಶೀಲಾನ ಜೊತೆ ಎಂದು ಹೇಳಿದರು. ಒಂದೊಂದು ವಿಭಾಗವನ್ನೂ ತೋರಿಸುತ್ತಾ ನಡೆದಳು ಒಂದು ಗಂಟೆ ವೀಕ್ಷಣೆ ನಡೆಸಿದ ಮೇಲೆ ತಯಾರಿಕೆಯ ಅಚ್ಚುಕಟ್ಟು, ಕ್ರಮಬದ್ಧತೆ, ಶುಚಿತ್ವ ಅವನಿಗೆ ಮನವರಿಕೆ ಆದವು. ಆಗ ಅವನ ಒಳದನಿ ತಾನು ಬರೆದುದು ಕಟುಲೇಖನ ಎಂಬುದು ಅರಿವು ಶಿವಶಂಕರ್‌ಗೆ ಆಯಿತು.

ನಂತರ ಮೋಹನರಾಯರು ಜೇಬಿನಿಂದ ಒಂದು ಪತ್ರವನ್ನು ತೆಗೆದು ಶಿವಶಂಕರ್‌ನಿಗೆ ಕೊಟ್ಟರು. ಅದು ಮೊಗಸಾಲೆ ತನ್ನನ್ನು ತಾತ್ಕಾಲಿಕವಾಗಿ ಬಿಡುಗಡೆ ಮಾಡಿದ ಪತ್ರ ಅದನ್ನು ನೋಡಿದ ಶಂಕರ್‌ಗೆ ಆಘಾತವಾಯಿತು. ಇದು ಅನ್ಯಾಯ ಎಂದು ಹೇಳಿದ. ಆಗ ರಾಯರು ನಿಮ್ಮ ವೈಯಕ್ತಿಕ ವಿಷಯದ ಬಗ್ಗೆ ನನಗೆ ಆಸಕ್ತಿ ಇಲ್ಲ. ಆದರೆ ವಿಷಯ ಇಷ್ಟೇ ಭಾಷಾ ವೈಖರಿ, ಹತ್ತು ಮಂದಿಯನ್ನು ಸೆರೆ ಹಿಡಿಯೋ ಬುದ್ಧಿಶಕ್ತಿ, ಆಕರ್ಷಕ ವ್ಯಕ್ತಿತ್ವ ಇವೆಲ್ಲಾ ಅಗ್ಗದ ವಸ್ತು ಅಲ್ಲ. ಭವಿಷ್ಯದಲ್ಲಿ ನೂರು ಆಸೆ ಇಟ್ಟು ನುಗ್ಗಿದ ಪ್ರಾಮಾಣಿಕ ಯುವಕನಿಗೆ ಒಂದು ಸಾಮಾನ್ಯ ಪತ್ರಿಕಾಲಯದಲ್ಲಿ ಕಡಿಮೆ ವೇತನ. ಇದರಿಂದ ಉಪ್ಪರಿಗೆಯಶೋಷಕ ವರ್ಗವನ್ನು ಬುಡಮಟ್ಟ ಅಲ್ಲಾಡಿಸಿದ ದೇಹಕ್ಕೆ ಕೊಳಚೆ ಆವರಣ ಮೇಧಾವಿತನಕ್ಕೂ-ಉದರ ಘೋಷಣೆಗೂ ನಡುವೆ ದೊಡ್ಡ ಕಂದಕ. ನೀವು ಅನುಭವಿಸೋ ಸ್ವಾತಂತ್ರ್ಯ, ಆತ್ಮತೃಪ್ತಿ, ಹತ್ತು ಕೀಳು ಹೃದಯ ತಣಿಸೋದಿಕ್ಕೆ ಒಬ್ಬ ಬಂಡವಾಳಗಾರನ ದೋಷದ ಸುದ್ದಿಗಾಗಿ ಬೇಟೆ, ಅಕ್ಷರ ವ್ಯಭಿಚಾರ, ಪತ್ರಿಕೆ ಪ್ರಸಾರಕ್ಕೆ ಆತ್ಮವಂಚನೆ, ದಿನವೆಲ್ಲಾ ಬಿಸಿಲು ಸ್ನಾನ, ಸಿಗರೇಟು ಹೊಗೆಯಿಂದ, ರುಚಿಗೆಟ್ಟ ಚಹಾದ ಸೇವನೆಯಿಂದ ಹೊಟ್ಟೆ ತುಂಬಿಸಿ ರಾತ್ರಿ ನಿದ್ದೆಗಾಗಿ ಹಾತೊರೆಯುವ ನಿರ್ಜೀವ ದೇಹ, ನಿಮ್ಮ ಲೇಖನವನ್ನು ಹೊಗಳಿ ಅಟ್ಟಕ್ಕೇರಿಸೋ ಜನಕ್ಕೆ ನಿಮ್ಮ ಹೊಟ್ಟೆ ಕಡೆ ದೃಷ್ಟಿ ಏಕಿಲ್ಲ. ನಾಲ್ಕು ದಿನದ ನಾಯಿಕೊಡೆಗಳು ನಿಮಗೆ ಗೊತ್ತೇನು ಪ್ರಸಿದ್ಧ ಸಂಪಾದಕ ಹಾರ್ನಿಮನ್‌ನ ಕಡೆದಿನಗಳು ಎಂದೂ ನಿಮ್ಮಲ್ಲಿರುವ ಸುಪ್ತ ಪ್ರತಿಭೆಯನ್ನು ತಟ್ಟಿ ಎಬ್ಬಿಸ್ತಾ ಇದ್ದೀನಿ ಎಂದರು. ರಾಯರು ಶಿವಶಂಕರ್‌ಗೆ ಆರು ತಿಂಗಳ ಕಾಲಾವಧಿಯ ಕೆಲಸದಲ್ಲಿ ನಿಮಗೆ ಇಷ್ಟ ಬಂದಷ್ಟು ದಿನ ಇರಬಹುದು. ಈ ಆರು ತಿಂಗಳ ಪ್ರಯೋಗದಲ್ಲಿ ಉತ್ತಮವಾದ ಸಂಬಳ, ಇರೋದಕ್ಕೆ ಮನೆ, ಊಟ ಎಲ್ಲದರ ವ್ಯವಸ್ಥೆ ಇತ್ತು.

ಶಿವಕುಮಾರನನ್ನು ರಾಯರು ಸಂಸ್ಥೆಗೆ ಸೇರಿಸೋದ್ರಲ್ಲಿ ಯಾವುದೇ ರೀತಿಯ ಸ್ವಾರ್ಥ ಇರಲಿಲ್ಲ. ಅವರು ಇಬ್ಬರು ಹೆಣ್ಣುಮಕ್ಕಳಲ್ಲಿ ಒಬ್ಬಳನ್ನು ನಿಮಗೆ ಗಂಟು ಹಾಕೋ ವಿಚಾರ ಕನಸಿನಲ್ಲೂ ನೆನಸಿಕೊಳ್ಳಲೂ ಸಾಧ್ಯವಿಲ್ಲ. ನಿಮ್ಮ ಬುದ್ಧಿ ರೂಪಕ್ಕೆ ಮಾರುಹೋಗಿ ನಿಮಗೆ, ಆಮಿಷ, ಆಕರ್ಷಣೆ ಒಡ್ಡಲಿಲ್ಲ, ನಾನು ಕರೆಸಿದ್ದು, ಕೆಲಸಕೊಟ್ಟಿದ್ದು ನನ್ನ ಸ್ನೇಹಿತ ಗಂಗೂಲಿ ಸೂಚನೆ ಮೇಲೆ. ಆತನ ಸಾಕುಮಗಳನ್ನು ಮದುವೆ ಮಾಡಿಸೋ ಉದ್ದೇಶದಿಂದ ನಿಮ್ಮನ್ನು ಇಲ್ಲಿಗೆ ಸೇರ್ಸಿದ್ದು. ಆದರೆ ನೀವು ಕಲ್ಪನೆಯ ಸೌಧ ಗಗನಕ್ಕೇರಿಸಿ ಈ ಹಂತದವರೆಗೆ ಬಂದಿದ್ದು ನಿಮ್ಮ ಮೂರ್ಖತನ. ಕನಸು ಕಾಣೋವಾಗಲು ಅಂತಸ್ತಿನ ಅರಿವು ಇರಬೇಕು ಕನಸು ಕನಸಾಗಿಯೇ ಉಳಿದರೆ ಚೆಂದ. ಅದರ ಮೇಲೆ ಮನುಷ್ಯನಿಗೆ

ಆವರಣದ ಪ್ರಜ್ಞೆಯೂ ಇರಬೇಕು. ನನ್ನ ಮಗಳು ಕಿರಣ ಆಕಾಶದೀಪ ಮರೆತುಬಿಡಿ ಎಂದು ಹೇಳುತ್ತಾರೆ. ಅದೇರೀತಿ ತಮ್ಮ ಮಗಳಿಗೂ ಅವನನ್ನು ಮರೆಯುವಂತ್ತೆ ಹೇಳುತ್ತಾ ಇಲ್ಲವೆಂದರೆ ಅವನ ಬದುಕು ಕೊನೆಗಾಣಿಸುತ್ತೇನೆಂದು ಹೇಳುತ್ತಾರೆ. ಅವನನ್ನು ಮರೆತರೆ ಅವನು ಬದುಕಿಕೊಳ್ತಾನೆ ಎಂದಾಗ ಕಿರಣ, ಶಿವಶಂಕರ ಗಗನದೀಪ ನಾನು ಶಿವೂನ ಮದುವೆ ಆಗೋದಿಲ್ಲ ಅವರನ್ನ ಮರೆತುಬಿಟ್ಟೆ ಎಂದು ಹೇಳುತ್ತಾಳೆ.

ಮೋಹನ್‌ರಾಯ್ ಮಗಳಿಗೆ ಧೈರ್ಯ ಹೇಳಿ ಅವನಿಗೆ ನಿನ್ನ ಮರೆತು ಬಿಡೋಕೆ ಹೇಳಿ ಬಂದ್ಬಿಡು. ಇದೇ ನಿಮ್ಮಿಬ್ಬರ ಕಡೇ ಭೇಟಿ ಅಂತ ಹೇಳೋದು ಮರೀಬೇಡ ಅಲ್ಲಿಗೆ ನಿನ್ನ-ಅವನ ಋಣ ಮುಗಿತು ನನಗೆ ನೆಮ್ಮದಿ ಎಂದು ಹೇಳಿದರು. ಕಿರಣ ಇಬ್ಬರ ಮಧ್ಯದಲ್ಲಿ ನಿಂತು ಎರಡು ಕಡೆ ನೋಡುತ್ತಾ ನಿಲ್ಲುತ್ತಾಳೆ. ಎಡಕ್ಕೆ ತನ್ನ ಹೆಸರಿನಿಂದ ಮೆರೆಯುತ್ತಾ ಭವ್ಯವಾಗಿ ನಿಂತ ಕಾರ್ಖಾನೆಯ ಸರಹದ್ದು, ತಾನು ಹುಟ್ಟಿ ಬೆಳೆದು, ಬಾಳ ಚದುರಂಗದಲ್ಲಿ ಹಾಯಾಗಿ ಹೊರಳಿದ ಹಾಸುಗಳು, ಬಲಕ್ಕೆ ತನ್ನ ಸರ್ವಸ್ವವನ್ನೂ ಕೊಂಡೊಯ್ಯುತ್ತಿರುವ ತನ್ನ ಐದಾರು ತಿಂಗಳ ಆದರ್ಶ ಸಂಗಾತಿ.

"ಅಷ್ಟೈಶ್ವರ್ಯದ ತಾಣ ಅತ್ತ, ಪ್ರಶ್ನಾಕಾರದ ಭವಿಷ್ಯತ್ ಇತ್ತ." ಎಂದು

ಕೊನೆಗೆ ಪ್ರಿಯತಮನ ಕಡೆ ನೋಡಿದಳು. ಅಷ್ಟು ದೂರಕ್ಕೂ ನಾಲ್ಕು ಕಣ್ಣುಗಳು ಒಂದುಗೂಡಿದವು. ಇಬ್ಬರೂ ಮೇಲಕ್ಕೆ ತಲೆ ಎತ್ತಿದರು. ಇನ್ನೂ ನಕ್ಷತ್ರ ಮೂಡದ ಶುಭ್ರ ಆಕಾಶ. ಅಲ್ಲಿ ಯಾವ ಆಕರ್ಷಣೆಯ ದೀಪವೂ ಕಾಣಲಿಲ್ಲ. ಇಬ್ಬರ ದೃಷ್ಟಿ ನೆಲಕ್ಕಿಳಿಯಿತು. ಶಿವು ನನಗೆ ಆ ಹಣದ ಜಗತ್ತು ಬೇಡ ನಿಮ್ಮ ಜೊತೇಲಿ ಸಂತೋಷದ ಬಡತನದ ಬದುಕೇ ಸಾಕೆಂದು, ಬಿಲ್ಲಿನಿಂದ ಚಿಮ್ಮಿದ ಅಂಬಿನಂತ್ತೆ ಶಿವಶಂಕರನ ಕಡೆಗೆ ಧಾವಿಸಿದಳು. "ಆಕಾಶದೀಪ ಧರೆಗಿಳಿಯಿತು".

ಸಂಸಾರ ಸುಖದ ಸುಪ್ಪತ್ತಿಗೆಯಲ್ಲ ನೋವು-ನಲಿವು, ಸುಖ-ದುಃಖ, ಸೋಲು-ಗೆಲುವುಗಳ ಸಂಗಮ. ವ್ಯಕ್ತಿಯೊಂದಿಗೆ ಹೆಣ್ಣಾಗಲೀ-ಗಂಡಾಗಲೀ ಅವನ ಬದುಕಿನ ಎಲ್ಲಾ ಹಂತದಲ್ಲೂ ಕೌಟುಂಬಿಕ ವರ್ಗ ಹಾಗೂ ಸುತ್ತಮುತ್ತಲಿನ ಪರಿಸರ ತಮ್ಮ ಅಸ್ತಿತ್ವವನ್ನು, ಧೋರಣೆಗಳನ್ನು ಹೇರುತ್ತಲೇ ಬರುತ್ತದೆ. ಈ ಸಮಾಜದಲ್ಲಿ ವ್ಯಕ್ತಿಯ ಬದುಕು ಅವನದ್ದು ಮಾತ್ರವೇ ಅಲ್ಲ. ಉಳಿದವರದ್ದೂಕೂಡ ಆಗುತ್ತದೆ. ಈ ಅಂಶವನ್ನು ವಸ್ತುವಾಗಿಟ್ಟುಕೊಂಡು ಟಿ.ಕೆ. ರಾಮರಾವ್ ಅವರು 'ಬಂಗಾರದ ಮನುಷ್ಯ' ಸಾಮಾಜಿಕ ಕಾದಂಬರಿಯ ಕಥಾವಸ್ತು ವಿಭಿನ್ನವಾಗಿದ್ದು ಬೆಳವಣಿಗೆಯ ಆಶಯವನ್ನು ಹೊಂದಿದೆ.

ಈ ಕಾದಂಬರಿಯ ವೈಶಿಷ್ಟ್ಯವೇ ಆಕರ್ಷಕವಾಗಿದೆ. ರಾಯರ ಬಂಗಾರದ ಮನುಷ್ಯ ಬಹುಕಾಲ ಅಂತಃಕರಣದಲ್ಲಿ ನಿಲ್ಲಬಲ್ಲ ಸೃಷ್ಟಿ. ಬಂಗಾರದ ಮನುಷ್ಯ ಕಾದಂಬರಿಯ ನಾಮಫಲಕವೇ ವಿಶಿಷ್ಟವಾದುದು. ರಾಜೀವ್ ಪದವಿ ಮುಗಿಸಿದರೂ ಯಾವ ಕೆಲಸಕ್ಕೂ ಸೇರದೇ ತನ್ನ ಅಕ್ಕನ ಮಕ್ಕಳಿಗಾಗಿ ಹಗಲು-ರಾತ್ರಿಯನ್ನದೇ ದುಡಿದು ಅವರ ಜೀವನಕ್ಕೊಂದು ದಾರಿ ಮಾಡಿಕೊಟ್ಟ ಸುಂದರ ಸುಪ್ರಷ್ಟ ಆಕಾರದ ಬಂಗಾರಮನುಷ್ಯ. ಹಾಲಿನಂತಹ ಹೃದಯ. ಮನೆತನಕ್ಕೆ ಮೀಸಲಿರಿಸಿರುವ ತನು ಹೊತ್ತ ಕರ್ಮಟಯಾಗಿದ. ಪರಿಸರದ ಬದುಕನ್ನು ನಿಚ್ಚಳ ದೃಷ್ಟಿಯಲ್ಲಿ ಕಂಡು ಪಡೆದ ಸಂಪಾದನೆಯನ್ನು ಆಕರ್ಷಕ ಶೈಲಿಯಲ್ಲಿ ಅಭಿವ್ಯಕ್ತಗೊಳಿಸುವುದು ಪ್ರಭುದ್ಧ ಲೇಖಕರಿಗೆ ಮಾತ್ರ ಸಾಧ್ಯ. ಈ ಕಾದಂಬರಿ ತ್ಯಾಗ, ಅನುಕಂಪ, ಆತ್ಮೀಯತೆ ಬದುಕಿನ ಮೌಲ್ಯವನ್ನು ಹೆಚ್ಚಿಸುವಂತೆ ಒಂದು ಸ್ಪಷ್ಟ ರೂಪನ್ನು ಮೂಡಿಸುತ್ತದೆ. ಹೃದಯಸ್ಪರ್ಶ ಸನ್ನಿವೇಶದಲ್ಲಿ ಆಕರ್ಷಕ ಕಥೆಗಾರಿಕೆಯಲ್ಲಿ ಮನಸೆಳೆಯುವ ಕಾದಂಬರಿಯೇ ಈ ಬಂಗಾರದ ಮನುಷ್ಯ. ರಾಜೀವ್ ಈ ಕಥಾನಾಯಕ. ಗ್ರಾಮ್ಯ ಬದುಕಿನ ಮತ್ತು ಮಾನವ ಸಂಬಂಧಗಳ ಸೊಗಸಾದ ಚಿತ್ರಣವಿದ್ದ ಸಾರ್ವತ್ರಿಕವಾದ ಮೆಚ್ಚುಗೆ ಗಳಿಸಿದ ಸಾಮಾಜಿಕ ಕಾದಂಬರಿ ರಾಯರ ಬಂಗಾರದ ಮನುಷ್ಯ.

ರಾಜೀವ ಈ ಕಾದಂಬರಿಯ ಕೇಂದ್ರ ಬಿಂದು. ಅವನೇ ಕಥೆಯ ಜೀವಾಳ ವ್ಯಕ್ತಿಯಾಗಿದ್ದು, ತನ್ನ ಅಕ್ಕನ ಸಂಸಾರ ಸಂಪೂರ್ಣ ಹೊಣೆಯು ರಾಜೀವನ ಮೇಲೆ ಬೀಳುತ್ತದೆ. ರಾಜೀವ್‌ನ ಕೊನೆಯ ವರ್ಷದ ಪದವಿ ಮುಗಿಯುವ ಹಂತದಲ್ಲಿದ್ದಾಗ ತನ್ನ ಅಕ್ಕನಾದ ಶಾರದೆಯ ಗಂಡ ಅನಾರೋಗ್ಯದಿಂದ ಸಂಸಾರದ ಹೊಣೆಯನ್ನೆಲ್ಲಾ ಬದಿಗಿಟ್ಟು ತುಯ್ದಾಟದಲ್ಲಿ ಮಲಗಿದ್ದರು. ಕೃಷ್ಣರಾಯರು ಶಿರಸ್ತೇದಾರರಾಗಿ ಸೇವೆ ಸಲ್ಲಿಸುತ್ತಿದ್ದರು. ಇವರು ಬದುಕಿದ್ದಾಗ ಅವರು-ಇವರು ಎಂಬ ವ್ಯತ್ಯಾಸವಿಲ್ಲದೇ ಬಂದವರೆಲ್ಲರಿಗೂ ಸಹಾಯ ನೀಡಿದರು. ಆದರೆ ತಮ್ಮ ದೊಡ್ಡ ಸಂಸಾರವನ್ನು ನಡುನೀರಿನಲ್ಲಿ ಬಿಟ್ಟು ಹೋಗಲು ಸ್ವಲ್ಪವೂ ಮನಸ್ಸಿಲ್ಲದೆ ಕಣ್ಣುಗಳಲ್ಲಿ ತಮ್ಮ ಬಗ್ಗೆ ಕಾತುರ ಮೂಡಿಸಿದ್ದರು. ಕೃಷ್ಣರಾಯರು ದೊಡ್ಡಜೀವ, ಅವರ ದೇಹವನ್ನು ನಾಳೆಯವರೆಗೆ ಇಟ್ಟು ಕಾಯುವುದು ಉಚಿತವಲ್ಲ, ಬಂಧುಗಳ ಆಕ್ಷೇಪಣೆ ನಾಳೆಗೆ ಇರಲಿ ಎಂದು ರಾಜೀವನ ಹೃದಯ ಧೈರ್ಯವಾಗಿ ಹಾಗೆ ಹೇಳಿತು. ಯಾರ ಬರುವಿಕೆಗೂ ಕಾಯದೆ, ಎದೆ ಕಲ್ಲುಮಾಡಿ ಭಾವನ ದೇಹವನ್ನು ದಹಿಸಿ ಬಂದಮೇಲೆ ಮನದಣಿಯ ಅತ್ತ.

ರಾಜೀವನ ಎಳೆಯ ಹೃದಯ ಬೆಂದು ಹೋಗಿತ್ತು. ಸೂರ್ಯ ನಿರಾಂತಕವಾಗಿ ಮತ್ತೆ ಏರಿ ಬಂದ ಕೃಷ್ಣರಾಯರ ನೆಂಟರು ಬಂದಿಳಿದರು ದೊಡ್ಡ ಬಾವಮೈದ ರಾಮಚಂದ್ರ ಹಾಗೇ 'ಆತ್ಮಿಯತೆ' ತೋರಿದ್ದ ಎಲ್ಲರಿಂದಲೂ ಅದೇ ಪ್ರಶ್ನೆ ರಾಜೀವನ ತಲೆ ಚಿಟ್ಟು ಹಿಡಿದು ಹೋಯ್ತು. ಆದರೆ ಒಬ್ಬರಿಂದಲೂ ಪ್ರಶ್ನೆ ಬಂದಿರಲಿಲ್ಲ "ಈ ವಿಧವೆ, ಈ ನಾಲ್ಕು ಮಕ್ಕಳ ಮುಂದಿನ ಗತಿ ಏನು ಎಂದು. ಇಂತಹ ಸ್ವಾರ್ಥ ಚೌಕಟ್ಟಿನಲ್ಲಿ ಒಂದು ಕ್ಷಣ ಇರಬಾರದು ದಿಕ್ಕು ಕಾಣದಂತೆ ಕತ್ತಲು ಕವಿದ ಈ ಪರಿಸ್ಥಿತಿಯಲ್ಲಿ ಒಂದು ಸಹಾನುಭೂತಿಯ ಮಾತೂ ಇಲ್ಲದ ಈ ಸಮುದಾಯದ ಸಂಪರ್ಕ ತನಗೇಕೆ" ಎಂದು.

ಭಾವ ಬದುಕಿದ್ದಾಗ ಮಾಡಿದ್ದು ಮಹಾತಪ್ಪು ಕಂಡ ಕಂಡ ದೇವರಿಗೆ ಅಷ್ಟೊಂದು ಭಕ್ತಿ ತೋರಬಾರದಿತ್ತು. ಕಾಣಿಕೆಗಳು ಅರ್ಪಿಸಬಾರದಿತ್ತು. ಭಾವ ಮೈದುನನಿಗೆ ಆಶ್ರಯ ನೀಡಿ ಅವರ ಓದು ಪೂರೈಸುವಂತೆ ಮಾಡಿ ತಾನೂ ಖಾಲಿಯಾಗಿದ್ದೇಕೆ? ನಿರ್ಗತಿಕನಾಗಿ ಹೀಗೆ ಸಾಯಲೆಂದೇ ನಿರಾಸೆ ಮನದ ಆತಂಕ, ಭೀತಿ ಹಾಗೂ ಭವಿಷ್ಯದ ಚಿಂತನೆ ಸುತ್ತಿ ಹೋಗುತ್ತಿದೆ ಗತಿಯಲ್ಲಿ ಮುಂದೆ ಎತ್ತಣ ದಾರಿ? ಪರೀಕ್ಷೆ ಮುಗಿದು ಕೆಲಸ ಮುಗಿಯುವವರೆಗೆ ಒಂದು ತಾಣದ ಅಗತ್ಯವಿತ್ತು.

ತನ್ನದೇ ಅಲ್ಲವೆಂಬುವಷ್ಟು ನಿರಾಶೆ ಮೂಡಿಸಿದ್ದ ಹೊನ್ನಬಾವಿಯ ಎರಡು ಎಕರೆಭೂಮಿ ಗತ್ಯಂತರವಿಲ್ಲದೆ ಸಂಸಾರ ಹೊನ್ನಬಾವಿಗೆ ಸಾಗಿತ್ತು. ಅಲ್ಲಿನ ಮನೆಯ ಸ್ಥಿತಿ ಅಸ್ತವ್ಯಸ್ತವಾಗಿತ್ತು. ನೆಲ ಹಳ್ಳಬಿದ್ದು, ಹೆಂಚುಗಳು ಚೂರಾಗಿ, ಅರ್ಧ ಅಡಿ ದಪ್ಪದ ಕಸದಿಂದ ಕೂಡಿತ್ತು ಹಳ್ಳಿಯ ಮನೆ. ಬಂಧುವಲ್ಲದ ನರಹರಿರಾಯರು ಮತ್ತು ಅವರ ಪತ್ನಿ ಶಾಂತಮ್ಮ ಮನೆಯವರಲ್ಲಿ ಒಬ್ಬರಾಗಿ ಕೆಲಸದಲ್ಲಿ ಕೈಗೂಡಿಸಿ ಒಂದು ದಿನದಲ್ಲಿ ಮನೆ ವಾಸಮಾಡುವಂತಾಯಿತು.

ಹೊನ್ನಬಾವಿಯ ರಾಚೂಟಪ್ಪ, ಮಂಡ್ಯದ ಡಾಕ್ಟರು ಮಂಜುನಾಥ್ ಭಾವಮೈದುನರಿಬ್ಬರು ಇಲಾಖೆಯ ಸಹೋದ್ಯೋಗಿಗಳು ಅವರಿಂದ ಪಡೆದ ಸಹಕಾರಗಳಿಂದ ತಲೆ ಎತ್ತಿದ್ದರು. ಅವರ ಪತ್ನಿ-ನಾಲ್ಕು ಮಕ್ಕಳನ್ನು, ರಾಜೀವನನ್ನು ಒಟ್ಟು ಈ ಲೋಕವನ್ನು ತ್ಯಜಿಸಿದರು. ಇನ್ನೂ ಹತ್ತುವರ್ಷಗಳ ಸರ್ವಿಸ್ ಬಿಟ್ಟು ನಲವತ್ತೈದನೆಯ ವಯಸ್ಸಿಗೆ ತೆರಳಿಹೋದ ತುಂಬು ಜೀವನದ ವ್ಯಕ್ತಿಯನ್ನು ನೋಡಲು ಜನಜಾತ್ರೆ ಸೇರಿದರು. ತಹಶೀಲ್ದಾರರನ್ನು ಹಿಂಬಾಲಿಸಿ ರೆವಿನ್ಯೂ ಹಾಗೂ ಟ್ರೆಷರಿ ಆಫೀಸಿನವರು ಬಂದರು. ನಡುನೀರಿನಲ್ಲಿ ನಿಂತಿದ್ದ ಸಂಸಾರವನ್ನು ನೋಡಿ ಕಣ್ಣೀರು

ಮಿಡಿದರು. ಕೃಷ್ಣರಾಯರ ನಿಸ್ಪೃಹಜೀವನ, ಅದರಿಂದ ಅವರು ಪಡೆದಿದ್ದ ಬವಣೆ ಅರಿತಿದ್ದ ಹಿತೈಷಿಗಳು ನೀರವತೆಯಿಂದ ಅತ್ತರು.

ರಾಜೀವ ತನ್ನ ಅಕ್ಕನ ಸಂಸಾರಕ್ಕಾಗಿ, ಆಕೆಯ ಮಕ್ಕಳನ್ನು ಹೊನ್ನಬಾವಿಗೆ ಕರೆತಂದನು. ನೊರಜು ಕಲ್ಲುಗಳಿಂದ ಮೆರೆದ ಧೂರ್ತ ರಕ್ಕಸಭೂಮಿಯ ಗರ್ಭವನ್ನು ಭೇದಿಸಿ ಹಸನು ಮಾಡಿದ. ಅದಕ್ಕೆ ತುಂಬಿದ್ದು ಅವನ ರಟ್ಟೆ ಬಲ, ಆರುದ್ರ ನೆಲವನ್ನು ಹಸಿರು ಮಾಡಿ ಮನೆತನ ಕಟ್ಟಿದ. ತನ್ನ ಹೃದಯ ಕಣ್ಣುಗಳಿಗೆ ಶಾಂತತೆ ತುಂಬಿಕೊಂಡ ಆ ಕರುಣಾಮಯಿ ಶಾಂತತೆ ತನ್ನ ಸ್ವಾರ್ಥಕ್ಕಲ್ಲ. ಮನೆ–ಮಕ್ಕಳು ಬದುಕಿ ಹೋದರೆಂಬ ತೃಪ್ತಿಯಿಂದ ಹೊರಬಂದಿತು ಶಾಂತತೆ. ಜಮೀನು ಉತ್ತು ಬಿತ್ತಿದ ಹೆಮ್ಮೆಯ ಸುಗ್ಗಿ ಸೃಷ್ಟಿಸಿದ. ಭವ್ಯವಾದ ಮನೆಕಟ್ಟಿಸಿ, ತೋಟಮಾಡಿಸಿದ. ಮಕ್ಕಳಿಗೆಲ್ಲಾ ಕನಸಿಗೂ ಮಿರಿದ ಕಾರ್ಯರಂಗ ಬಿಚ್ಚಿಹಾಕಿದ. ನಾವು ತುಳಿಯುವ ಹಾದಿಗಳಿಗೆಲ್ಲಾ ನವುರಾದ ಜಮಖಾನೆ ಹಾಸಿಕೊಟ್ಟ, ತಾನು ಹೇಗೆ ಬದುಕಿದೆ? ಆ ಊಟ, ಬಟ್ಟೆ, ಕೋಟೆ, ಮಾತುಗಳು ಒಂದೊಂದು ಭೈರಾಗಿಯದೇ, ಜಮೀನುಗಳ, ಮನೆ, ಹಣ ಎಲ್ಲವೂ ಶಾರದೆಯ ಹೆಸರಿನಲ್ಲಿ, ಕಾರು ಕೇಶವನ ಹೆಸರಿಗೆ ಮಾಡಿದ ಶ್ರಮಜೀವಿ ಜೀವಶವವಾದ. ರಾಜೀವ ತನಗಾಗಿ ಪಡೆದ ಹಣ ತಿಂಗಳಿಗೆ ಸರಾಸರಿ ಇನ್ನೂರಕ್ಕೂ ಕಡಿಮೆ. ಅದೂ ಕೂಡ ನಿರ್ಭಾಗ್ಯ ತಂಗಿ ಶರಾವತಿಯ ಪೋಷಣೆಗೆ.

ನೇರಳೆಗುಡ್ಡದ ಬುಡಕ್ಕೆ ಪಿಕ್ ಅಪ್ ಹಾಕುವ ಸಾಹಸ ಅವನಿಗಲ್ಲದೇ ಮತ್ತಾರಿಗೆ ಬಂದೀತು. ಈ ಕಟ್ಟೆಯಿಂದ ಜಮೀನನ್ನು ಬಂಗಾರ ಮಾಡಿದ ಸರಸಿಯ ಆ ಡೊಂಕು ಕಾಲುಗಳು, ಶಾರದೆಯ ಬೋಳು ಹಣೆ, ಹೊನ್ನನ ಮಗ ಭೈರನಕತ್ತಿಗೆ ಎದುರಾದ ಕಂಗೆಟ್ಟ ರಾಜೀವನ ಮುಖ ಯೌವನದ ಭದ್ರತೆಯಲ್ಲಿ ಲಕ್ಷ್ಮಿಯನ್ನು ದೂರವಾಗಿಡಲು ಯತ್ನಿಸಿದ್ದು, ಮಾಧುರ್ಯ ತುಂಬಿ ಹೊಳೆಯುವ ದ್ರಾಕ್ಷಿ ಗೊಂಚಲು, ಗೊನೆ–ಗೊನೆಯಾಗಿ ಜಗ್ಗಿನಿಂತ ಮಾಗಿದ ಬಾಳೆಹಣ್ಣು, ನಾಲ್ಕು ವರ್ಷ ಕುಳಿತು ತಿಂದರೂ ಸವೆಯದ ಸಮೃದ್ಧ ಭತ್ತದ ಗ್ರಾಸ, ಈ ನಮ್ಮ ಜೀವತೋಟ. ಇವೆಲ್ಲಾ ಬಿಟ್ಟು ಹೋಗಲು ಮಾವನಿಗೆ ಮನಸ್ಸಾದರೂ ಹೇಗೆ ಬಂತು.

ಈ ಕಾದಂಬರಿಯು ಕೌಟುಂಬಿಕ ಸಾಮಾಜಿಕ ಕಾದಂಬರಿ. ರಾಜೀವ ತನ್ನ ಇಡೀ ಜೀವನವನ್ನೇ ತನ್ನ ಕುಟುಂಬಕ್ಕಾಗಿ ತ್ಯಾಗ ಮಾಡಿದ್ದನು. ಪದವಿ ಮುಗಿಸಿ ಹಳ್ಳಿಯಲ್ಲೇ ದುಡಿದು ವಿದ್ಯಾವಂತರು ಕೂಡ ನಗರ ಬಿಟ್ಟು ಪೂರ್ವಜರು ಬಿಟ್ಟ ಜಮೀನಿನಲ್ಲಿ

ದುಡಿಯುವುದಕ್ಕೆ ಯುವಕರಿಗೆ ಸ್ಫೂರ್ತಿಯಾದ ಕಾದಂಬರಿ. ತಾಳ್ಮೆ, ಸಹನೆ, ಅನುಕಂಪ, ಪ್ರೀತಿಯ ಸಾಗರ ಈ ಕಥೆಯ ನಾಯಕ ರಾಜೀವ್.

ಟಿ.ಕೆ. ರಾಮರಾವ್ ಅವರ ಕಾದಂಬರಿಗಳಲ್ಲಿ ಕಂಡು ಬರುವ ಎಲ್ಲಾ ಸನ್ನಿವೇಶ ಮತ್ತು ಸಂಗತಿಗಳು ಸಾಮಾಜಿಕ ಚಿಂತನೆಯ ಭಾಗವೇ ಆಗಿವೆ. ಅವರು ಸುಮಾರು ವಿವಿಧ ಸ್ತರಗಳಲ್ಲಿ ನಿಂತು ನೋಡಿ ಸಾಮಾಜಿಕ ಕಳಕಳಿಯೊಂದಿಗೆ ಪರಿವರ್ತನಾಶೀಲ ಸಮಾಜವನ್ನು ಉತ್ತಮವಾಗಿ ಪ್ರಜ್ಞಾಪೂರ್ವಕವಾಗಿ ಕಟ್ಟಬೇಕೆಂಬ ಪ್ರಯತ್ನವೊಂದನ್ನು ಮಾಡಿದ್ದಾರೆ.

ಅಧ್ಯಾಯ –೪

ಕನ್ನಡದ ಕಾದಂಬರಿ ಪ್ರಕಾರದ ಬೆಳವಣಿಗೆಗೆ ಟಿ.ಕೆ. ರಾಮರಾವ್ ಅವರ ಕೊಡುಗೆ

'ಕಾದಂಬರಿ' ಭಾರತೀಯ ಸಾಹಿತ್ಯಕ್ಕೆ ಹೊಸದಾದದ್ದು. ಸಂಸ್ಕೃತ ಮತ್ತು ಇತರ ಪ್ರಾದೇಶಿಕ ಭಾಷೆಗಳಲ್ಲಿ ಅದುವರೆಗೆ ಕಾದಂಬರಿ ಸ್ವರೂಪದ ಕೃತಿ ರಚನೆಯಾಗಿರಲಿಲ್ಲ. ಸಂಸ್ಕೃತದಲ್ಲಿ ಬಾಣರಚಿತ 'ಕಾದಂಬರಿ' ಗದ್ಯದಲ್ಲಿದ್ದುದು ಒಂದು ವಿಶೇಷ. ಜೊತೆಗೆ ಈ ಕಾದಂಬರಿ ಸ್ವತಂತ್ರವಾದ ಒಂದು ಪ್ರೇಮಕತೆಯಾಗಿದ್ದು ಈಗ ಕಾದಂಬರಿ ಎಂದು ಗುರುತಿಸುವ ಪ್ರಕಾರದ ಹಲವು ಲಕ್ಷಣಗಳನ್ನು ಹೊಂದಿತ್ತು. ಆದರೆ ಈ ಪರಂಪರೆ ಹೆಚ್ಚಾಗಿ ಬೆಳೆಯದಿದ್ದರು ದುರ್ದೈವ ಬಹುಶಃ ಆ ಕಾಲದ ಪಂಡಿತರಲ್ಲಿ ಗದ್ಯದ ಬಗೆಗೆ ಇದ್ದಿರಬಹುದಾದ ತಾತ್ಸಾರವೇ ಇದಕ್ಕೆ ಕಾರಣವಿರಬಹುದು. ಹೀಗೆ ಕಾರಣವೇನೇ ಇದ್ದರೂ ಗದ್ಯ ಪ್ರಚಲಿತದಲ್ಲಿ ಇರಲಿಲ್ಲವೆಂಬುದೇ ವಾಸ್ತವ.

ಹೀಗಿರುವಾಗ ಭಾರತದಲ್ಲಿ ಹತ್ತೊಂಬತ್ತನೇ ಶತಮಾನದ ಮಧ್ಯಭಾಗಕ್ಕೆ ಕಾದಂಬರಿ ತನ್ನ ಮೊದಲ ಹೆಜ್ಜೆಗಳನ್ನು ಇಡತೊಡಗಿತು. ಈ ಬದಲಾವಣೆಯನ್ನು ಹಲವು ಅಂಶಗಳು ಪ್ರಭಾವಿಸಿದೆ. ಆಂಗ್ಲ ವಿದ್ಯಾಭ್ಯಾಸ ಈ ಮಹತ್ವದ ಬದಲಾವಣೆಗಳಿಗೆ ಮುಖ್ಯ ಕಾರಣ..ಆಂಗ್ಲರೂ ಭಾರತಕ್ಕೆ ಬಂದ ನಂತರವೇ ಭಾರತೀಯರಲ್ಲಿ ಹೊಸ ಎಚ್ಚರ ಮೂಡಿತೆನ್ನಬಹುದು. ಅವರ ವಿದ್ಯಾಭ್ಯಾಸ ಪದ್ಧತಿ, ಸಾಹಿತ್ಯ, ಇತಿಹಾಸ, ರಾಜಕೀಯ ಚಿಂತನೆಗಳು ಮತ್ತು ಅವರ ಕ್ರಾಂತಿಗಳು ಬಲವಾಗಿ ಪ್ರಭಾವಿಸಿದವು. "ಭಾರತೀಯ ಕಾದಂಬರಿ ಭಾರತೀಯ ಅಭಿಜಾತ ಪರಂಪರೆಗಿಂತ ಪಾಶ್ಚಾತ್ಯ ನಮೂನೆ ಮತ್ತು ಪ್ರಭಾವಗಳಿಗೆ ಹೆಚ್ಚು ಋಣಿಯಾಗಿವೆ ಎಂಬುದು ಸಾಹಿತ್ಯ ಚರಿತ್ರಾಕಾರರು ಒಪ್ಪಿದ ಅಭಿಪ್ರಾಯ" ಆದರೆ ಆ ವಾದವನ್ನು ಪೂರ್ತಿಯಾಗಿ ಒಪ್ಪಲಾಗುವುದಿಲ್ಲ.

ಭಾರತೀಯ ಕಾದಂಬರಿ ರೂಪದಲ್ಲಷ್ಟೇ ಪಾಶ್ಚಾತ್ಯರ ಪ್ರಭಾವ ಉಂಟಾದಂತೆ ಎನಿಸುತ್ತದೆ. ಸ್ವಲ್ಪ ವಿಸ್ತರಿಸುವುದಾದರೆ, ಸಮಸ್ಯೆಯ ನಿರ್ಣಯಕ್ಕೆ ಪಾಶ್ಚಾತ್ಯ ಚಿಂತನೆಗಳು ಪ್ರಭಾವ ಬೀರಿರುವುದನ್ನು ಗಮನಿಸಬಹುದು. ಅದರ ಹೊರತಾಗಿ ಭಾರತೀಯ ಅಭಿಜಾತ ಪರಂಪರೆಯ ವಸ್ತುವಿನಲ್ಲಿ, ಪಾತ್ರ ಪೋಷಣೆಯಲ್ಲಿ, ಕೊನೆಗೆ ತೀರ್ಮಾನದ ಸಮಯದಲ್ಲಿ ತನ್ನತನ ಕಾಯ್ದುಕೊಂಡಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಕಾದಂಬರಿಗಳಲ್ಲಂತೂ ಪಾಶ್ಚಾತ್ಯ ಚಿಂತನೆಯ ಪ್ರಭಾವ ಗಣನೀಯವಾಗಿದೆ ಆದರೆ

ಜಾಗತೀಕರಣದ ಹಿನ್ನೆಲೆಯಲ್ಲಿ ಹೊರಟಿರುವ ಹಲವು ಚಿಂತನೆಗಳು ಸಮಾನ ರೀತಿಯಲ್ಲಿ ರೂಪುಗೊಳ್ಳುತ್ತಿವೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕಾದಂಬರಿಯ ಉಗಮ ಮಹತ್ವದ ಮೈಲಿಗಲ್ಲಾಗಿವೆ. ಪ್ರಾಚೀನ ಕನ್ನಡ ಸಾಹಿತ್ಯ ಹಲವು ಪ್ರಯೋಗಗಳನ್ನು ಕಂಡರು ಗದ್ಯವನ್ನು ಅತ್ಯಲ್ಪ ಪ್ರಮಾಣದಲ್ಲಿ ಬಳಸಿಕೊಂಡಿವೆ. ಚಂಪೂ ಕೃತಿಗಳ ಮಧ್ಯೆದಲ್ಲಿ ಬರುವ ವಚನದ ಭಾಗ ಕಾವ್ಯತ್ಮಕವಾದ ಗದ್ಯವಾಗಿರುತ್ತಿತ್ತು. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಈ ಚಂಪೂ ಯುಗದಲ್ಲಿ 'ವಡ್ಡಾರಾಧನೆ' ಯಂತಹ ಗದ್ಯ ಕೃತಿ ರಚನೆಗೊಂಡಿತ್ತು. ಆದರೂ ಗದ್ಯಕ್ಕೆ ಮಹತ್ವದ ಸ್ಥಾನವೇನು ಇರಲಿಲ್ಲ. ಸಂಸ್ಕೃತದ ನೇರ ಪ್ರಭಾವ ಕನ್ನಡ ಸಾಹಿತ್ಯದ ಮೇಲಿತ್ತು. ಪರಿಣಾಮವಾಗಿ ಕನ್ನಡದಲ್ಲಿ ಒಂದಾದರೂ ಸ್ವತಂತ್ರವಾದ ಕಥೆ ಬರಲಿಲ್ಲ. ರಾಮಾಯಣ, ಮಹಾಭಾರತದ ಕಥೆಯನ್ನೇ ಮರು ಹುಟ್ಟು ಪಡೆದಂತೆ ಚಿತ್ರಿಸುವಲ್ಲಿ ಯಶಸ್ವಿಯಾದರೆ ವಿನಃ ಸ್ವಂತವಾಗಿ ಹೊಸ ಕಥೆಯನ್ನು ಎಣೆಯುವ ಪ್ರಯತ್ನವೂ ಕಂಡುಬರುವುದಿಲ್ಲ.

ಇನ್ನೂ ವಚನಕಾರರ ಜೀವನವನ್ನು ಕುರಿತು ಹರಿಹರ ಕೃತಿ ರಚಿಸಿದನಾದರೂ ಅದು ಸಹ ಗದ್ಯದ ಸ್ವರೂಪದಲ್ಲಿರಲಿಲ್ಲ. ವಿಚಿತ್ರವೆಂದರೆ ಸಂಸ್ಕೃತದ ಗದ್ಯ ಕೃತಿಯಾದ ಕಾದಂಬರಿಯೂ ಸಹ ಕನ್ನಡಕ್ಕೆ ಚಂಪೂವಾಗಿ ಬಂತು. ಛಂದಸ್ಸಿನಲ್ಲಿ ಹಲವು ಪ್ರಯೋಗಗಳನ್ನು ಮಾಡಿದ ಪ್ರಾಚೀನ ಕನ್ನಡ ಕವಿಗಳು ಗದ್ಯದ ಬಗೆಗೆ ನಿರ್ಲಕ್ಷ ಧೋರಣೆ ತಾಳಿರುವುದು ಅಧ್ಯಯನಾರ್ಹ. ಕನ್ನಡದ ಮಟ್ಟಿಗೆ ಗದ್ಯ ಸಾಹಿತ್ಯ ವಲಯದಿಂದಾಚೆಯೆ ಉಳಿಯಿತು ಆದರೆ ಹೊಸಗನ್ನಡ ಸಾಹಿತ್ಯ ಆರಂಭವಾದಾಗ ಗದ್ಯ ಪ್ರಾಧಾನ್ಯತೆ ಪಡೆಯಿತು. ಕಥನ ಕಲೆ, ಜನಸಾಮಾನ್ಯರನ್ನು ತಲುಪುವ ಸಾಧನವಾಯಿತು. ಆಗ ಕಾದಂಬರಿ ಗದ್ಯದ ಬೆಳವಣಿಗೆಗೆ ಮಹತ್ವದ ಪ್ರಕಾರವಾಯಿತು.

ಆರಂಭದಲ್ಲಿ ಕನ್ನಡಕ್ಕೆ ಕಾದಂಬರಿ ಬಂದದ್ದು ಅನುವಾದದ ಮೂಲಕ ಈ ಅನುವಾದ ಇಂಗ್ಲೀಷ್‌ನಿಂದ ಮತ್ತು ಭಾರತೀಯ ಭಾಷೆಗಳಾದ ಬಂಗಾಳಿ,ಮರಾಠಿಯಿಂದಾಗಿತು. ಇಂಗ್ಲಿಷ್‌ನಿಂದ ಅನುವಾದವಾಗುವಾಗಲೂ ಅದು ನೇರ ಅನುವಾದವಾಗಿರಲಿಲ್ಲ. ಮಾದರಿಗಾಗಿ ಇಂಗ್ಲಿಷ್ ಕಾದಂಬರಿಗಳನ್ನಿಟ್ಟುಕೊಂಡಿದ್ದರೂ ಅದನ್ನು ಭಾರತೀಯವಾಗಿ ಪರಿವರ್ತಿಸಿಕೊಂಡು ಪುನರ್ ರಚಿಸಲಾಯಿತು. "ಪ್ರಾರಂಭದಲ್ಲಿ ಪಾಶ್ಚಾತ್ಯ ಸಂಸ್ಕೃತಿಯನ್ನು ಇದ್ದಕ್ಕಿದ್ದ ಹಾಗೆಯೇ ಯಾವ ಲೇಖಕನೂ ಕನ್ನಡಕ್ಕೆ ತರಲಿಲ್ಲ". ಈ ಪ್ರಕ್ರಿಯೆ ಕಾದಂಬರಿಗೆ ಮಾತ್ರ ಸೀಮಿತವಾಗದೇ ಸಾಹಿತ್ಯದ

ಎಲ್ಲಾ ಪ್ರಕಾರಗಳಿಗೂ ಅನ್ವೇಯವಾಗುತ್ತದೆ. ಭಾರತೀಯರಿಗೆ ಕಾದಂಬರಿಯ ವಿಷಯದಲ್ಲಿ ಕೊರತೆಯಿದ್ದುದ್ದು ಮಾದರಿಯಲ್ಲಿಯೇ ಹೊರತು, ವಸ್ತುವಿನಲ್ಲಲ್ಲ.

ಬಂಗಾಳಿ ಮತ್ತು ಮರಾಠಿಯಿಂದ ಅನುವಾದಿಸುವಾಗ ಹೆಚ್ಚಾಗಿ ಯಥಾವತ್ ತರ್ಜುಮೆ ಕಾಣುತ್ತದೆ. ಭಾಷೆ ಬೇರೆಯಾದರೂ ಸಂಸ್ಕೃತಿಯ ಸಂದರ್ಭದಲ್ಲಿ ಎರಡೂ ಹತ್ತಿರವಾದ್ದರಿಂದ ರೂಪಾಂತರ ಕಡಿಮೆಯಾಗಿ ಭಾಷಾಂತರವೇ ಮಹತ್ವ ಪಡೆಯಿತು. ಅಂದಿನ ಕಾದಂಬರಿಯ ಉದ್ದೇಶವನ್ನು ಬಿ. ವೆಂಕಟಚಾರ್ಯರು ದುರ್ಗೇಶನಂದಿಯ ಅನುವಾದದ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ. ನಾವೆಲ್ಲುಗಳ ಉದ್ದೇಶವೆಂದರೆ ಸಮಾಜದ ಮತ್ತು ಸಮಾಜದ ಅಂಗಭೂತವಾದ ಮನುಷ್ಯನ ಚರಿತ್ರೆ, ನಡುವಳಿಕೆಗಳಲ್ಲಿ ಕಂಡುಬರುವ ದುರ್ನಡತೆ ಮುಂತಾದವುಗಳನ್ನು ಉದಾಹರಣೆಗಳೊಡನೆ ಚಿತ್ರಿಸಿ, ಅವುಗಳಿಂದುಂಟಾಗುವ ವಿಪತ್ತುಗಳನ್ನು ತೋರ್ಪಡಿಸಿ ಪ್ರತಿಯೊಬ್ಬನೂ ಸಮಾಜದಲ್ಲಿ ಸದ್ಭಾವದಿಂದ ನಡೆದುಕೊಳ್ಳುವುದನ್ನು ತೋರ್ಪಡಿಸುತ್ತವೆ. ಹಾಗೇ ನೋಡಿದರೆ ಭಾರತೀಯ ಸಾಹಿತ್ಯ ಮೊದಲಿನಿಂದಲೂ ನೀತಿ ಪ್ರಧಾನವಾಗಿಯೇ ಬೆಳೆದದ್ದು. ಅದು ರಾಮಾಯಣವಿರಲೀ–ಮಹಾಭಾರತವಿರಲೀ ಒಂದೊಂದು ಉಪಕತೆಗಳ ಮುಖಾಂತರ ಒಂದೊಂದು ನೀತಿಯನ್ನು ಹೇಳುತ್ತಾ ಓದುಗರನ್ನು ನೀತಿಪರರಾಗುವಂತೆ ನೋಡಿಕೊಳ್ಳವಲ್ಲಿ ಭಾರತೀಯ ಸಾಹಿತ್ಯ ಮಹತ್ತರ ಪಾತ್ರವಹಿಸಿದೆ. 'ಕಲೆಗಾಗಿ ಕಲೆ' ಎಂಬ ನೀತಿ ಭಾರತಕ್ಕೆ ಆಮದಾದದ್ದೇ ವಿನಃ ಅಂತರ್ಯದಲ್ಲಿದ್ದುದಲ್ಲ. ಹಾಗಾಗಿಯೇ ಆರಂಭದ ಕಾದಂಬರಿಗಳಲ್ಲಿ ಇದೇ ಮಾದರಿ ಮುಂದುವರಿದುದರಲ್ಲಿ ಆಶ್ಚರ್ಯವಿಲ್ಲ.

ಕನ್ನಡದ ಮೊದಲ ಸಾಮಾಜಿಕ ಕಾದಂಬರಿ 'ಇಂದಿರಾಬಾಯಿ', 'ಸದ್ಧರ್ಮ ವಿಜಯ' ಎಂಬ ಹೆಸರು ಹೊತ್ತಿರುವುದನ್ನು ಗಮನಿಸಬಹುದು. 'ವಾಗ್ದೇವಿ', 'ಇಂದಿರಾ', 'ಮುಸುಕು ತೆಗೆಯೆ ಮಾಯಾಂಗನೆ', 'ಭಾರತಿ', 'ರೋಹಿಣಿ', 'ಸೀತೆ' ಇತ್ಯಾದಿ. ಆದರೆ ಇಲ್ಲಿ ಗುರುತಿಸಬಹುದಾದ ಅಂಶವೆಂದರೆ ಈ ಕೃತಿಗಳ ಹೆಸರುಗಳು ಸ್ತ್ರೀ ಪ್ರಾಧಾನ್ಯತೆಯನ್ನು ಹೇಳಿದರೆ ಆಂತರ್ಯದಲ್ಲಿ ಸಾಂಪ್ರದಾಯಿಕತೆಯನ್ನು ಪ್ರತಿಪಾದಿಸುತ್ತದೆ. ಜೊತೆಗೆ ಆತ್ಮವಿಮರ್ಶೆಗೆ ತೊಡಗಿದವು. ಜನಸಾಮಾನ್ಯರ ಜೀವನ ಚಿತ್ರಿತವಾದದ್ದು ಕಾದಂಬರಿ ಪ್ರಕಾರ ಬಂದ ಮೇಲೆಯೇ.

ಟಿ.ಕೆ ರಾಮರಾವ್ ಅವರು ಕನ್ನಡ ಸಾಹಿತ್ಯದ ಕಾದಂಬರಿಕಾರರು. ಇವರದು ಕನ್ನಡ ಸಾಹಿತ್ಯ ಲೋಕದಲ್ಲಿ ವಿಶಿಷ್ಟ ಹೆಸರು. ಸಾಮಾಜಿಕ ಕಾದಂಬರಿಗಳನ್ನು ಹೃದಯ ತಟ್ಟುವಂತೆ ಬರೆದು ಅಸಂಖ್ಯಾತ ಕನ್ನಡಿಗರ ಮನಗೆದ್ದ ಅವರು ಪ್ರಕಾರ ಜಾಣ್ಮೆಯ

ಗುಣಮಟ್ಟದ ಪತ್ತೇದಾರಿ ಕಾದಂಬರಿಗಳನ್ನು ರಚಿಸಿ ನಾಡಿನ ಉದ್ದಗಲಕ್ಕೂ ಮನೆಮಾತಾದರು.

ಟಿ.ಕೆ. ರಾಮರಾವ್ ಅವರ ಸಾಮಾಜಿಕ ಮತ್ತು ಪತ್ತೇದಾರಿ ಕಾದಂಬರಿಗಳನ್ನು ಓದಲು ಬಯಸುವ ದೊಡ್ಡ ಓದುವ ವರ್ಗವೇ ಇದೆ. ಕನ್ನಡ ಪತ್ತೇದಾರಿ ಸಾಹಿತ್ಯ ಪ್ರಕಾರದ ಅತಿದೊಡ್ಡ ಹೆಸರು. ಬೇಡಿಕೆ ಪೂರೈಸಲು ಸಾಧ್ಯವಾಗದಿದ್ದ, ಅತಿ ದೊಡ್ಡ ಓದುಗರ ಬಳಗವನ್ನು ಗಳಿಸಿಕೊಂಡಿದ್ದ, ಅಪರೂಪ ಸಾಧನಾ ಶೀಲರು. ಕನ್ನಡ ಪುಸ್ತಕಗಳನ್ನು ಪ್ರಕಟಿಸಲು ಪುಸ್ತಕ ಪ್ರಕಾಶಕರು ಹಿಂದೇಟು ಹಾಕುತ್ತಿದ್ದ ಕಾಲದಲ್ಲಿ, ಕನ್ನಡ ಪುಸ್ತಕ ಪ್ರಕಾಶಕರು ಇವರ ಮನೆಗೆ ಎಡತಾಕುತ್ತಿದ್ದರು. ಅಡ್ವಾನ್ಸ್ ನೀಡಿ, ಸದ್ಯ ಬರೆಯುತ್ತಿರುವ ಹಸ್ತ ಪ್ರತಿಯನ್ನು ನಮಗೆ ಕೊಡಿ ಎಂದು ದುಂಬಾಲು ಬೀಳುತ್ತಿದ್ದರು. ಅವರು ಕೇಳಿದಷ್ಟು ಗೌರವಧನ ಪಡೆಯುತ್ತಿದ್ದ ಇಬ್ಬರು–ಮೂವರು ಲೇಖಕರಲ್ಲಿ ಇವರೊಬ್ಬರಾಗಿದ್ದರು.

ಒಂದು ಕಾಲದಲ್ಲಿ ಬೀದಿ–ಬೀದಿಯಲ್ಲೂ ಇದ್ದ ಸರ್ಕ್ಯುಲೇಟಿಂಗ್ ಲೈಬ್ರರಿಗಳಲ್ಲಿ ಯಾರ ಕಾದಂಬರಿ ಇಲ್ಲದಿದ್ದರೂ ಟಿ.ಕೆ.ರಾಮರಾವ್ ಅವರ ಕಾದಂಬರಿಗಳೆಲ್ಲವು ಖಂಡಿತ ಇರುತ್ತಿದ್ದವು. ಇವರ ಸೊಗಸಾದ ಶೈಲಿಯ ಬರವಣಿಗೆ, ಆತ್ಮೀಯ ಸರಳ ಚೌಕಟ್ಟು ಮೊದಲಿನಿಂದ ಕೊನೆಯವರೆವಿಗೂ ಕುತೂಹಲವನ್ನು ಉಳಿಸಿಕೊಂಡು ಹೋಗುವುದು ಜೊತೆಗೆ, ಪರಿಪೂರ್ಣವಾಗಿ ಸ್ಥಳೀಯ ಮೆರಗು, ಸ್ಥಳೀಯ ಭಾಷೆ, ಸುಪರಿಚಿತ ಸ್ಥಳನಾಮಗಳ ಬಳಕೆ. ಮತ್ತೆ ಖಚಿತವಾದ ತಾಂತ್ರಿಕ ಮತ್ತು ಕಾನೂನು ವಿವರಗಳು. ಎಲ್ಲೂ ಅಧ್ಯಾಯಗಳನ್ನು ಆಗು–ಹೋಗುಗಳನ್ನು ಎಳೆಯುತ್ತಿರಲಿಲ್ಲ ಚೊಕ್ಕವಾದ–ಸುಂದರವಾದ, ಒಂದೇ ಅಳತೆಯ ಅಧ್ಯಾಯಗಳು. ಅವರ ಕಾದಂಬರಿಗಳಲ್ಲಿ ಯಾವುದೊಂದು ಸಿಕ್ಕು ಇರುತ್ತಿರಲಿಲ್ಲ. ಓದುಗರಿಗೆ ಕುತೂಹಲ ತಣಿಸುವ, ಮನರಂಜನೆ ನೀಡುವ ಪತ್ತೇದಾರಿ ಕಾದಂಬರಿಗಳನ್ನು ರಚಿಸಿದ ಕೀರ್ತಿ ಟಿ.ಕೆ ರಾಮರಾಯರದು.

ರಾವ್ ಅವರು ಮೊದ ಮೊದಲು ಬರೆದದ್ದು ಕನ್ನಡದ ಸಣ್ಣ ಕಥೆಗಳನ್ನು ಕೆಲವು ಸಾಮಾಜಿಕ ಕಾದಂಬರಿಗಳನ್ನು, ಅವರ ಬರವಣಿಗೆ –ಕೃತಿಗಳು ಕನ್ನಡ ಸಾಹಿತ್ಯದ ಉತ್ತಮ ಮಟ್ಟದಲ್ಲಿ ಇರಬೇಕಾಗಿತ್ತು. ತಮ್ಮ ಅಧ್ಯಯನದ ಪ್ರಯತ್ನಗಳಿಂದ ಅವರು ಮೊದಲು ಈ ಉತ್ತಮ ಸಾಹಿತ್ಯ ಶೈಲಿಯನ್ನು ಸಿದ್ಧಿಸಿಕೊಂಡರು. ಅರವತ್ತರ ದಶಕದಲ್ಲಿ ಪ್ರಾರಂಭವಾದ 'ಸುಧಾ'ವಾರಪತ್ರಿಕೆ, ಅನಂತರ ಮಯೂರ ಮಾಸ ಪತ್ರಿಕೆ ಸಂಪಾದಕರ

ಬಯಕೆಯಂತೆ ಸಾಹಸ ಕಾದಂಬರಿಗಳನ್ನು ಕ್ರೈಮ್ ಲೋಕದ ಕಥೆಗಳನ್ನು ಪತ್ತೇದಾರಿ ಕಾದಂಬರಿಗಳನ್ನು ಬರೆಯತೊಡಗಿದರು.ಕನ್ನಡ ವಿವಿಧ ಪತ್ರಿಕೆಗಳಿಗಾಗಿ ಸಾಮಜಿಕ-ಪತ್ತೇಧಾರಿ ಕಥೆಗಳನ್ನು ಬರೆದರು. ಮಕ್ಕಳಿಗಾಗಿ ಐದು ಜೀವನ ಚರಿತ್ರೆಗಳನ್ನು, ಒಂದು ಐತಿಹಾಸಿಕ ಜಗದೇವರಾಯ ಎಂಬ ಕಾದಂಬರಿಯನ್ನು ಬರೆದರು. ಗೋಳದ ಮೇಲೊಂದು ಸುತ್ತು ಎಂಬ ಕುತೂಹಲ, ಹೊಸ ತಿಳುವಳಿಕೆಯ ಪೂರೈಕೆಗಾಗಿಯೇ ಅವರ ಕೆಲವು ಸಲ ಪ್ರಪಂಚ ಸುತ್ತಿ, ಪ್ರವಾಸಾನುಭವಗಳನ್ನೆಲ್ಲ ಸೊಗಸಾಗಿ ಕಾದಂಬರಿಯಲ್ಲಿ ರಚಿಸಿದರು, ಹತ್ತು ಕಥಾ ಸಂಕಲನಗಳನ್ನು ಬರೆದರು. ಇವರ ಹಲವಾರು ಕಾದಂಬರಿಗಳು ಧಾರವಾಹಿಯಾಗಿ, ಚಲನಚಿತ್ರವಾಗಿ ಮೂಡಿಬಂದಿವೆ. ಅವರು ವರ್ಷಕ್ಕೆ ಒಂದೋ ಎರಡೋ ಮಿನಿ ಕಾದಂಬರಿಗಳನ್ನು ಬರೆಯಲು ಸಾಧ್ಯವಾಗಬಹುದು. ಅತ್ಯುತಮ ವ್ಯವಸ್ಥಿತ ಬರಹಗಾರರಾಗಿದ್ದು, ಪತ್ರಿಕಾ ಓದುಗರನ್ನು ಬಹಳ ಚೆನ್ನಗಿ ಅರ್ಥಮಾಡಿಕೊಂಡಿದ್ದವರು. ಆದರೆ ಎಂದಿಗೂ ತಮ್ಮ ಪುಸ್ತಕಗಳು, ತಾವು ಜನಪ್ರಿಯವಾಗಬೇಕು ಎಂದು ಸಾಮಾನ್ಯ ಮಟ್ಟದ ಬರವಣಿಗೆ ಮಾಡಲಿಲ್ಲ. ಅಶ್ಲೀಲ ವಿವರಗಳು, ಹೆಣ್ಣು-ಗಂಡಿನ ತೀವ್ರ ಸಂಬಂಧ ಇವನ್ನು ಚಿತ್ರಿಸಲಿಲ್ಲ. ಸುಂದರವಾದ, ಶುದ್ಧ ಅಭಿರುಚಿಯ ಉತ್ತಮ ಭಾಷೆಯ ಸೃಷ್ಟಿ ಅವರದಾಗಿತ್ತು.

ಇವರು ಕೆಲವು ಕನ್ನಡ ಕಾದಂಬರಿಗಳಾದ ಆಸರೆಯ ಗೊಂಬೆ, ಬಂಗಾರದ ಮನುಷ್ಯ ಸರ್ಪದಂಡೆ, ವರ್ಣ ಚಕ್ರ, ಕಹಳೆಬಂಡೆ, ಲಂಗರು, ನಾಲ್ಕು ರೇಖೆಗಳು ಮುಂತಾದವು ಕನ್ನಡದ ಸುಪ್ರಸಿದ್ಧ ಜನಪ್ರಿಯ 'ಕನ್ನಡಪ್ರಭ'ದಿನ ಪತ್ರಿಕೆಯಲ್ಲಿ ಧಾರವಾಹಿಯಾಗಿ ಹರಿದು ಬಂದ ಕಾದಂಬರಿಗಳಾಗಿವೆ.

'ವರ್ಣಚಕ್ರ' ಕಾದಂಬರಿಯೂ ಅಂತರ ರಾಷ್ಟ್ರೀಯ ವಿದ್ರೋಹವೊಂದರ ಕಥಾವಸ್ತುವಿನ ಕಾಲ್ಪನಿಕ ಕಾದಂಬರಿ. ಬೊಂಬಾಯಿಯ ಖಂಡಾಲಘಾಟ್‌ನಿಂದ ಪ್ರಾರಂಭವಾಗಿ ಬೆಂಗಳೂರು ಮತ್ತು ಮದ್ರಾಸಿಗೆ ಇಳಿದು, ಹಾಂಕಾಂಗ್ ಹಾಗೂ ಸಿಂಗಾಪುರ ಮೂಲಕ ಹಾದು ಒಂದು ತಿಂಗಳ ಅವಧಿಯಲ್ಲಿ ಸಂಬಂಧಿಸುವ ಘಟನೆಗಳು ಇದರಲ್ಲಿ ಚಿತ್ರಿತವಾಗಿವೆ. ಅರಿಯಲಾಗದ ವರ್ಣವ್ಯೂಹದಲ್ಲಿ ಸಿಲುಕಿದ ಯುವಕನೊಬ್ಬನು ಇದರ ಕೇಂದ್ರವ್ಯಕ್ತಿ. ಪ್ರಧಾನ ಅಥವಾ ವಿಚಾರ ಪ್ರಧಾನ ಕಾದಂಬರಿ ಅಲ್ಲ. ಓದುಗರನ್ನು ರಂಜಿಸಿ ಕೊನೆಯವರೆಗೂ ಕುತೂಹಲ ಕೆರಳಿಸಿ ರಚಿಸಿದ ಸಾಹಸಮಯ ರೋಮಾಂಚನಕಾರಿ ಕಥನವಿದು.

'ಆಸರೆಯ ಬೊಂಬೆ' ಕಾದಂಬರಿಯು ಟಿ.ಕೆ.ರಾಮರಾವ್‌ರವರ ಕನ್ನಡಪ್ರಭ ದೈನಂದಿನ ಪತ್ರಿಕೆಯಲ್ಲಿ ಪ್ರಕಟಗೊಂಡ ಮೊಟ್ಟಮೊದಲ ಧಾರವಾಹಿಯಾಗಿ ಮಾರ್ಪಾಟಾದ ಕಾದಂಬರಿಯಾಗಿದೆ. ಈ ಕಾದಂಬರಿಯಲ್ಲಿ ಸ್ತ್ರೀಮೋಹ, ಪ್ರತೀಕಾರ, ಸಮಾಜದಲ್ಲಿನ ಸ್ತರ ವಿನ್ಯಸವುಳ್ಳ ಕೌಟುಂಬಿಕ ಕಾದಂಬರಿ. ಸವಿತಾ-ಅರುಣ-ರೋಹಿಣಿ ತ್ರಿಕೋನ ಪ್ರೇಮ ಸರಣಿಯಲ್ಲಿ ರಚಿತವಾದ ಕಾದಂಬರಿ. ಈ ಆಸರೆಯ ಬೊಂಬೆ ಕಾದಂಬರಿಯಲ್ಲಿ ಒಬ್ಬಳು ಹಸಿರು ಸೀರೆಯ ಸೆರಗನ್ನು ಹಾರಿಸುತ್ತಾ ನಿಂತವಳು ಮತ್ತೊಬ್ಬಳು ಆಕರ್ಷಕ ಕೆಂಪು ದುಪ್ಪಟ ಹಾರಿಸಿ ತನ್ನನ್ನೇ ನೋಡುವವಳು. ಒಬ್ಬಳು ಮುಖ ಭೋರ್ಗರೆತವಿಲ್ಲದೆ ಸಾಗರದಂತೆ, ಮತ್ತೊಬಳ ಮುಖ ತಿಳಿ ಮೋಡಗಳನ್ನು ಹಿಡಿದ ವಿಶಾಲ ಗಗನದಂತೆ. ಇಬ್ಬರೂ ಅರಣನನ್ನು ಇಬ್ಬರಲ್ಲಿ ಯಾರು ಹೆಚ್ಚು, ಯಾರು ಕಡಿಮೆ ಎಂಬ ದ್ವಂದ್ವ ಅರುಣನಲ್ಲಿ ಪ್ರಸರಿಸಿತು.

ತಂದೆಯ ಮೇಲಿನ ಕೋಪಕ್ಕೆ ಮಗಳಿಗೆ ಶಿಕ್ಷೆಯನ್ನು ಕೊಟ್ಟು ಅರುಣ ಸವಿತಾನ ಮುದುವೆಯಾದ ದಿನವೇ ಬಿಟ್ಟು ಹೋದ ಇದರಿಂದ ಆತನ ತಾಯಿಗೆ ಆಘಾತವಾಗಿ ಅನಾರೋಗ್ಯದಿಂದ ಆಸ್ಪತ್ರೆ ಸೇರಿ ಕೊನೆಯುಸಿರೆಳುಯುತ್ತಾರೆ. ಶ್ರೀನಿವಾಸನ್ ವಕೀಲ ಎಂದರೆ ಊರಿನಲ್ಲಿ ಪ್ರಾಮಣಿಕತೆಗೆ ಎರಡನೆಯ ಹೆಸರು ಆಗಿದ್ದುದರಲ್ಲಿ ಅರ್ಥವಿತ್ತು. ಅವರು ವಹಿಸಿಕೊಳ್ಳುತ್ತಿದ್ದ ಮೊಕದ್ದಮೆಗಳೂ ಹಾಗೆಯೇ ಇರುತಿದ್ದವು. ಸತ್ಯ, ನ್ಯಾಯಗಳ ಕಣ್ಣಿಗೆ ಮಣ್ಣು ತೂರುವ ಯಾವ ಕೇಸನ್ನೂ ಅವರು ತೆಗೆದುಕೊಳ್ಳುತ್ತಿರಲಿಲ್ಲ. ಶ್ರೀನಿವಾಸರನ್ನು ನಂಬಿದವರಿಗೆ ಸೋಲು ಇಲ್ಲ ಎಂಬುದು ಊರಿನವರ ಮಾತು. ಅವರನ್ನು ಹುಡುಕಿಕೊಂಡು ಬರುವವರ ಸಂಖ್ಯೆ ದೊಡ್ಡದೇ ಆಗಿದ್ದರೂ ಅವರನ್ನು ಒಪ್ಪಿಸಿ ಕೇಸು ಕೊಟ್ಟು ಹೋಗುತ್ತಿರುವವರ ಸಂಖ್ಯೆ ಮಾತ್ರ ಅತಿ ಕಡಿಮೆ. ಅದಕ್ಕೆ ಕಾರಣ ಅವರು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದ ನಿಯಮ. ಇವರು ಸವಿತಾಳ ಪ್ರೀತಿಗಾಗಿ ಹೋರಾಡಿದ ವ್ಯಕ್ತಿ. ಒಂದು 'ಮೋಡದ ಆಚೆ' ಇನ್ನೊಂದು 'ಮರೀಚಿಕೆ' ಸವಿತಾ ಬರೆದ ವಿಷಾದದ ಕವಿತೆ.

'ನನಗೆ ಆಸರೆ"?. ಆಸರೆ ಯಾರಿಗೆ ಸಿಕ್ಕಿದೆ ಈ ಪ್ರಪಂಚದಲ್ಲಿ ಸವಿತಾ ಎಂದು ಅರುಣ ಕೇಳಿದ. 'ಒಂದು ಒರೆಯಲ್ಲಿ ಎರಡು ಕತ್ತಿಗಳಿಗೆ ಸ್ಥಾನವಿಲ್ಲ'. ಈ ಕಾದಂಬರಿಯಲ್ಲಿ ಹೆಣ್ಣಿನ ಶೋಷಣೆ ಕಾದಂಬರಿಯುದ್ಧಕ್ಕೂ ನಡೆಯುತ್ತದೆ. ಹೆಣ್ಣಿನ ಬದುಕು ಯಾರ ತೃಪ್ತಿಗಾಗಿ, ಅವರ ಗುರಿ ಎತ್ತ, ಎಲ್ಲಿಯವರೆಗೆ, ಈ ವರೆಗೆ ಹರಿದು ಬಂದ ಅನಿರ್ಧಿಷ್ಟ ಪದವೇ ಮುಂದೆಯೂ ಕಾಣಿಸುವುದಾದರೆ ಈ ದೇಹದ ಸಾರ್ಥಕತೆ

ಹೃದಯವನ್ನು ಸ್ಪಂದಿಸಿ ಅರುಣ ಎದ್ದುನಿಂತ, ನಿಸರ್ಗ ಮೈಯಲ್ಲಿ ಪ್ರೇಮವನ್ನು ಬೆಳೆಸುವ ಮೊದಲೇ ದೈವ ತನಗೆ ಅರುಣನನ್ನು ಜೋಡಿಸಿ, ಅವನ ಹೃದಯವನ್ನು ಇಬ್ಭಾಗ ಮಾಡಿದೆ ಹೆಣ್ಣಿನ ಆಸರೆಗೆ ಲೋಕವು ಕೂಡಿಸಿರುವ ಚೊಕ್ಕ ಮಾತುಗಳು ಲೋಕಕ್ಕೆ ಮಾತ್ರ ಸಮಂಜಸ, ಬಾಲ್ಯದಲ್ಲಿ ತಂದೆಯ ಆಸರೆಯೊಂದೇ ನನಗೆ ಲಭಿಸಿದ್ದು. ಅದು ಆಗೀನ ತಂದೆಯ ಹಠದ ಹೊಳೆಯಲ್ಲಿ ತಾನೂ ಕೊಚ್ಚಿಹೋದೆ. ಆಗೀನ ಸೊಗಸು ನೆನಪಿಗೂ ನಿಲುಕದು, 'ಯೌವ್ವನದಲ್ಲಿ ಪತಿಯ ಆಸರೆ' ನನ್ನ ಜೀವಿತದಲ್ಲಿ ಅದು ಮರೀಚಿಕೆ. ಅದನ್ನು ಬೆನ್ನಟ್ಟಿ ತನಗೆ ಆದುದು ಭರಿಸಲಘದ ಸೋಲು, ಮತ್ತೆ ಆಸೆಯೊಂದೆ ಮೊಳೆತು ಆಸರೆಗಾಗಿ ಕಾದು, ಹತೊರೆದು ಹಿಂದಿರುಗಿದೆ. ಹೆಣ್ಣುತನ ಅಂದೇ ಮರುಣಿಸಿತು. 'ವೃದ್ಧಾಪ್ಯದಲ್ಲಿ ಮಕ್ಕಳ ಆಸರೆ'–ಪತಿಯ ಆಸರೆಯೇ ಕಾಣದ ಮೇಲೆ ಇನ್ನು ಮಕ್ಕಳ ಆಸರೆ ಎಂತು, ಜನಿಸಿದ ಗಿಡ ನೆರಳು, ಉಳಿದುದು ಕೊನೆಯ ಮನೆಯ ಆಸರೆ, ಅದೇ ಮರಣ ತಪ್ಪು, ತನ್ನ ಹೃದಯ ಅಷ್ಟೊಂದು ದುರ್ಬಲವಲ್ಲ, ತಾನು ಹುಟ್ಟು ಆಶಾವಾಧಿ.

ಆಸರೆಗಾಗಿಯೇ ಹೆಣ್ಣು ಹುಟ್ಟುವುದೇನು ಅದನ್ನು ಪಡೆಯಲು ನಾಲ್ಕಾರು ಮಂದಿಯ ಗುಲಾಮಳಾಗುವ ಬೊಂಬೆ ಅದು. ತನಗೆ ಆಸರೆ ಉಂಟು, ನೀಲಿ ಆಗಸದ ಅಡಿ ಅದೆಷ್ಟು ಬೃಹದಾಕಾರವಾಗಿ ನಿಂತು ಕರೆಯುತ್ತಿದೆ. ಅಗೋಚರ ಆಸರೆ, ಸಂದೇಹ, ಭ್ರಮನಿರಸನಗಳ ಮೇಘ ಕೂಟದಲ್ಲಿ ಮಿಂಚು ಕಾಣಿಸಿ, ಆಸರೆ ಕೋಲು ಬೀಸಿತು ಸವಿತಾ ಬದುಕಿನಲ್ಲಿ.

ಅದು ಬ್ರಹ್ಮಚಾರಿಣಿಗೆ, ವಿಧವೆಗೆ ತಾನು ಆ ಎರಡು ಘಟ್ಟಗಳಲ್ಲೂ ಇಲ್ಲ. ಆದರೂ ಅಲ್ಲ ತನಗೆ ಸ್ವಾಗತ ಉಂಟು. ನೆನಪು ಮರುಕಳಿಸಿತು. ಎಂದಾದರೂ ಒಮ್ಮೆ ಜೀವನ ಏಕೆ, ಹೀಗೆ ಎಂಬ ಕತ್ತಲು ಕವಿದಾಗ ಇಲ್ಲಿನ ಬಾಗಿಲುಗಳ ವಿಶಾಲವಾಗಿ ತೆರೆದಿರುತ್ತವೆ. ಹಲವು ಬಾರಿ ತಲೆಯಲ್ಲಿ ಸುಳಿದು, ಹೃದಯದಲ್ಲಿ ತುಮುಲ ನಡೆಸುವ ಮಾತು ಅದು ಆ ಮಾತಿನ ಸಾಫಲ್ಯಕ್ಕೆ ಸೂಕ್ತ ಕಾಲ ಇದು. ಆಶಾಂತಿಧಾಮ ಪ್ರಿಯವ್ರತರ ನಂದನವನ.

ಸೊಂಪಾಗಿ ಬೆಳೆದ ಗಿಡಕ್ಕೆ ತಾನು ನೀಡಿದುದು ಅಗ್ನಿಘೋಷಣೆ ಚಿಕ್ಕಂದಿನ ಆ ಸ್ವಚ್ಛಂದ ಆಟಗಳು, ಅತ್ತೆಯ ಆರೈಕೆ, ತಾಯಿಯ ಮೌನಪ್ರೇಮ, ಚಾರ್ಮಾಡಿ ಘಟನೆ, ಮಂಗಳೂರು ಮರಳು ದಂಡೆಯ ಓಟ, ಪ್ರಣಯ ಮಿಲನಗಳು, ಮಂಗಳ ವಾದ್ಯ, ಮತ್ತೆ ಆ ಎಂಟು ದಿನಗಳ ಸವಿರಾತ್ರಿಗಳು, ಬಾಳುರಿಯನ್ನು ಪೂತ್ಕರಿಸಿ ದುರಂತಕ್ಕೆ ನಾಂದಿ ಹಾಡಿದ ಆ ರಾತ್ರಿಗಳು, ತನ್ನ ಆಸರೆಯ ಕೊನೆಯ ಆಸೆ ಅವಳಲ್ಲಿ ಕುಸಿದಾಗ ತನ್ನ

ಮುಂದೆಯೇ ಹರಿದ ಕಣ್ಣೀರು, ಆಸರೆಗಳ ಬೆನ್ನು ಹತ್ತಿ ಮೃಗಜಲಗಳನ್ನು ಈಜಿದ ಸವಿತಾ ಅವಳನ್ನು ಅಷ್ಟೊಂದು ಬಿಸಿಲು ಕುದುರೆಗಳ ದಿಶೆಗೆ ಅಟ್ಟಲು ತನ್ನ ಮಾರ್ತತೆ ಕಾರಣ. ಆಸರೆಯನ್ನರಿಸಿ ಬಂದ ಬೊಂಬೆಗೆ (ಸವಿತಾ) ಸಮಾಧಿ ಕಾಣಿಸಿದವನು ನಾನು (ಅರುಣ) ಎಂದು ಗೋಳಾಡುವಾಗ, ಸವಿತಾ ನಮ್ಮ ನೂತನ ಸ್ವಚ್ಛ ಬದುಕಿಗೆ ಈಗ ಹುಟ್ಟಿಬಂದೆ ಎಂದು ಈ ಸೊಬಗಿನ ಸಮಾಗಮಕ್ಕಾಗಿ ಪ್ರಿಯತಮರು ನಾಟಕ ಪಾತ್ರಕೊಟ್ಟು ಇಲ್ಲಿಗೆ ಕಳುಹಿಸಿ ನಿಮ್ಮನ್ನು ಬೇರೆ ಲೋಕಕ್ಕೆ ಒಯ್ದರು ಎಂದಳು ಸವಿತಾ. ಇದರಿಂದ ನಮ್ಮ ಮುಂದಿನ ಜೀವನ ಸುಗಮವಾದುದು. ಕೊನೆಗೆ ನಮ್ಮ ಬೊಂಬೆ ಬಯಸಿದ ಆಸರೆ ದೊರಕಿತು.

"ಕಹಳೆ ಬಂಡೆ" ಕಾದಂಬರಿಯು ಕೂಡ 'ಕನ್ನಡಪ್ರಭ' ಪತ್ರಿಕೆಯ ದೈನಂದಿನ ಧಾರಾವಾಹಿಯಾಗಿ ಹರಿದು ಬಂದಿದ್ದಾಗಿದೆ. ಇದು ಗುಜರಾತ್‌ನಲ್ಲಿದೆ. ಹಿಂದೆ ಶತ್ರುಗಳು ಸಮುದ್ರದಲ್ಲಿ ಬರೋದನ್ನು ಆ ಬಂಡೆಗಳ ಗುಡ್ಡದಿಂದ ವೀಕ್ಷಿಸಿ ಕಹಳೆ ಊದಿ ಸೈನ್ಯಕ್ಕೆ ಎಚ್ಚರಿಕೆ ಕೊಡ್ತಾ ಇದ್ರಂತೆ. ಸಾವಿರ ವರ್ಷಗಳ ಹಿಂದೆ ಘಜ್ನಿ ಮಹಮದ್ ದಂಡಯಾತ್ರೆಗೆ ಬಂದಾಗಲೂ ಕಹಳೆ ಬಂಡೆಯಿಂದ ತುತ್ತೂರಿ ಎಚ್ಚರಿಕೆ ಬಂತಂತೆ. ಅವನಂತೂ ಸೋಮನಾಥ, ದ್ವಾರಕಾ ಎಲ್ಲಾ ಲೂಟಿ ಮಾಡಿ ನೆಲಸಮ ಮಾಡಿ ಹೋದ ಕಹಳೆ ಬಂಡೆ ಎಂಬ ಐತಿಹ ಇಂದಿಗೂ ಕೂಡ ಇದೆ.

ಈ ಕಾದಂಬರಿಯಲ್ಲಿ ದಿಬ್ಬದ ಮೇಲೆ ಸಮುದ್ರದ ದಿಕ್ಕಿಗೆ ತಿರುಗಿದ ಅಚ್ಚ ಬಿಳುಪು ರಂಗಿನ ಟ್ರಂಪೆಟ್ ರಾಕ್ ಹೋಟೆಲ್‌ನಲ್ಲಿ ಮತ್ತು ಮಹುವ ಬಂದರಿನಲ್ಲಿ ಪಾರ್ಸಿ ಶ್ರೀಮಂತರು ಆಮದು-ರಫ್ತುಕಡಿಮೆ ಇದ್ರೂ ಕಳ್ಳಸಾಗಾಣೆ ವಸ್ತುಗಳ ವ್ಯವಹಾರ ಸಾಕಷ್ಟಿದೆ. ಇಲ್ಲಿ ನಡೆಯುವ ಅವ್ಯವಹಾರವನ್ನು ಮತ್ತು ಕೆಲವು ದೇಶೀಯ ರಹಸ್ಯ ಪತ್ರಗಳನ್ನು ದ್ರೋಹಿಗಳಿಂದ ವಶಪಡಿಸಿಕೊಂಡ ರಕ್ಷಣಾ ಇಲಾಖೆಯವನೇ ಈ ಕಾದಂಬರಿಯ ನಾಯಕ. ಅನಿರೀಕ್ಷಿತವಾದ ದುರಾಸೆಗಾಗಿ ಬುದ್ಧಿ ಕೆಡಿಸಿಕೊಂಡು ಆ ಪತ್ರಗಳನ್ನು ಇಲಾಖೆಗೆ ಒಪ್ಪಿಸದೇ ಪಾಕಿಸ್ತಾನಕ್ಕೆ ಮಾರಾಟ ಮಾಡಿ ಹಣ ಸಂಪಾದಿಸೋ ಸನ್ನಾಹ ನಡೆಸುತ್ತಾನೆ. ಇಂತಹವನನ್ನು ಪ್ರೀತಿಸಿದ ನಾಯಕಿಯೇ ಅವನನ್ನು ಕೊನೆಗಾಣಿಸುತ್ತಾಳೆ. ಇದು ಕೇವಲ ಐದು ದಿನಗಳಲ್ಲಿ ಕಹಳೆ ಬಂಡೆಯ ಅಡಿಯಲ್ಲಿ ಒಳಶತ್ರುವೊಬ್ಬನ ವಿಷಯದಲ್ಲಿ ದೃಢವಾಗಿ ವರ್ತಿಸಿ ಸಕಾಲದ ಎಚ್ಚರಿಕೆ ಪಡೆಯಲಿಕ್ಕೆ ಧೈರ್ಯಪಡೆಯೋದಕ್ಕೆ ಕಹಳೆ ಕೂಗು ಬಂದಿರಬೇಕೆಂದು ಈ ಕಾದಂಬರಿಯ ನಾಯಕಿ ಹೇಳುತ್ತಾಳೆ.

"ಕಹಳೆ ಬಂಡೆ! ಅದು ನನ್ನ ಪ್ರೇಮದ ತಾಣ. ನಿನ್ನ ಪಾಲಿಗೆ ಹೃದಯದ ಮೇಲೆ ಬರೆ ಎಳೆದ ಬರಡು ಬಂಡೆಗಳ ಸಮೂಹ" ಎಂದೂ ರಾಯರು ತಮ್ಮ ಕಾದಂಬರಿಯ ನಾಯಕಿಯ ಕೈಯಲ್ಲಿ ದುಃಖದಿಂದ ಹೇಳಿಸುತ್ತಾರೆ. ಆದರೂ ರಾಯರು ತಮ್ಮ ಕಾದಂಬರಿಯಲ್ಲಿ ದೇಶಾಭಿಮಾನದ ಬಗ್ಗೆ, ಸ್ತ್ರೀ ಸ್ವಾತಂತ್ರ್ಯ ಬಗ್ಗೆ ಹೇಳಿದ್ದಾರೆ.

"ಸರ್ಪದಂಡೆ" ಕಾದಂಬರಿಯ ಕನ್ನಡ ಪ್ರಭ' ಪತ್ರಿಕೆಯ ಸುಪ್ರಸಿದ್ಧ ದೈನಂದಿನ ಧಾರಾವಾಹಿಯಾಗಿದೆ. ಇದು ಕೂಡ ಪಲ್ಲವರ ಕಾಲದ ಗುಹೆಗಳುಆ ಕಾಲದ ಶಿಲ್ಪಿಗಳು ಕಡೆದ ಏಕ ಶಿಲೆಯ ಬೃಹತ್ ಚಿತ್ರ ಕೃತಿಗಳು ದಂಡೇಹ ಬೆಟ್ಟಕ್ಕೂ ನಡುವೆ ಹರಿದ ನಿರ್ಜನ ಕಾಡು ಪ್ರದೇಶ ಯಾವುದೋ ಕಾಲದಲ್ಲಿದ್ದ ದೊಡ್ಡ ಸರೋವರವೊಂದು ಈಗ ನೀರಿಲ್ಲದೇ ವಿಶಾಲ ತಗ್ಗಿನ ಪ್ರದೇಶವಾಗಿದೆ. ಅದರ ಮೇಲಿನ ವಕ್ರ ಅಂಚು ಇಂದಿಗೂ ದಂಡೆಯಾಗಿದೆ. ಸರ್ಪಾಕಾರದ ನಾಲ್ಕು ತಿರುವುಗಳಲ್ಲಿ ತೆಂಗಿನ ಛತ್ರಿಯಡಿ ಹರಡಿ ನಿಂತ ದಂಡೆಯೇ ಸರ್ಪದಂಡೆ.

ಈ ದಂಡೆಯ ಮೇಲೆ ಕವಡೆ, ಕಪ್ಪು ಚಿಪ್ಪುಗಳಿಂದ ಹಿಡಿದು ದೊಡ್ಡ ಪ್ರಮಾಣದ ವಿದ್ಯುತ್ ಉಪಕರಣಗಳವರೆಗೆ ಸಮಸ್ತ ವಸ್ತುಗಳೂ ದೊರೆಯುವ ಮಾರು ಕಟ್ಟೆ, ಕಳ್ಳ ಸಾಗಾಣೆಯ ವಿದೇಶೀ ವಸ್ತುಗಳೊಂದಿಗೆ ಖೋಟಾ ಸರಕುಗಳೂ ಬೆರೆತು, ಆ ನಿತ್ಯ ಜಾತ್ರೆಯಲ್ಲಿ ಮೋಸದ ನಿಗೂಢ ವ್ಯವಹರಗಳಿಗೂ ಕೊರತೆಯಿಲ್ಲ.

ದಂಡೆಯ ವ್ಯಾಪಾರಿಗಳಿಗೆಲ್ಲಾ ಒಂದೇ ಬಗೆಯ ಮುಖವಾಡ, ಗಿರಾಕಿಗಳಿಗೆ, ನೋಟಕರಿಗೆ ಕಾಮ ಸಂತುಷ್ಟರೆಂದು ತೋರುವ ಕೃತಕ ಮುಖವಾಡ, ಮುಖವಾಡದ ಹಿಂದೆ ಅಡಾಗಿದ್ದುದು ಭೀತಿ, ನೋವು, ದುಃಸ್ವಪ್ನ, ವ್ಯಕ್ತಪಡಿಸಲಾಗದ ದುರ್ಬಲತೆ, ಹೇಡಿತನ.

ದಂಡೆಯ ಅಂಗಡಿ ಸಾಲಿನಲ್ಲಿ ನಿಂತು ನೋಡಿದರೆ ಪಟ್ಟಣಕ್ಕೆ ಅಭಿಮುಖ ದಿಕ್ಕಿನಲ್ಲಿ ಕಾಣುವುದು 'ಸಲಂಗು ಮಲೆ' ಬೆಟ್ಟ. ಅದರ ಅರ್ಧ ಎತ್ತರಕ್ಕೆ ಮಟ್ಟವಾದ ಭಾಗದಲ್ಲಿರುವುದು ರೈಫರ್ ರೇಂಜ್ ಅದರ ಒಂದು ಪಕ್ಕಕ್ಕೆ ರೈಲುನಿಲ್ದಾಣ, ಪಟ್ಟಣದಿಂದ ಪ್ರತ್ಯೇಕಗೊಂಡರೆ ದಿಬ್ಬದ ಮೇಲೆ ಉನ್ನತವಗಿ ಕಾಣುವುದು ಐದು ನಕ್ಷತ್ರಗಳ ವರ್ಗದ 'ಹೋಟೆಲ್ ಸಲಂಗು'

ಕರ್ಪಗಂ ತಂದೆ, ತಾಯಿ ಇಲ್ಲದ ಅನಾಥೆ, ಮಾವ ತಂಗಯಾರ್‌ನ ಆಶ್ರಯ ಪಡೆದು ಅವಲ್ಲಿಯೇ ಬೆಳೆದು ಅವನಿಗೆ ಸಹಾಯಕಳಾಗಿ ನಿಂತವಳು. ಮಾವನೊಂದಿಗೆ ನೆಮ್ಮದಿಯ ವ್ಯಾಪಾರ, ಬದುಕು ನಡೆಸಿದುದು ಕೆಲವೇ ವರ್ಷಗಳು. ಅನಂತರ ಇದೇ

ದಂಡೆಯ ಮೇಲೆ ಆವರಿಸಿ ಬಂದ ಧೂಮಕೇತು, ದಂಡೆಯ ವ್ಯಾಪಾರಿಗಳ ರಕ್ತ ಹೀರಲು ಭೀಕರ ಗ್ರಹಣಾಂಗಗಳನ್ನು ಪಸರಿಸಿತು. ಅಷ್ಟಪಾದಿ.

ಜಯಕಾಂತ, ಆದಿತ್ಯ ದಂಡೆಯಲ್ಲಿ ಇಬ್ಬರೂ ಛಾಯಾಗ್ರಹಕರಾಗಿ ತಮ್ಮ ತಮ್ಮ ಸ್ಟುಡಿಯೋ ತೆರೆದು ಇಬ್ಬರೂ ಉದ್ಯೋಗದಲ್ಲಿ ಪ್ರತಿಸ್ಪರ್ಧಿಗಳಾಗಿದ್ದುದು ಮಾತ್ರವಲ್ಲ, ಕರ್ಪಗಂಗಳನ್ನು ಪಡೆಯಲು ಅವರಲ್ಲಿ ನಿರಂತರ ಪೈಪೋಟಿ ಸಾಗಿತ್ತು ಅವರಿಬ್ಬರ ಪ್ರಣಯದ ಮಾತುಗಳಿಗೆ ಪ್ರತಿಕ್ರಿಯೆ ತೋರುವುದು ಅವಳಿಗೆ ದಿನ ನಿತ್ಯದ ಸಮಸ್ಯೆ. ಆದಿತ್ಯ ಅವಳನ್ನು ಮಾತುಗಳಿಂದ ರಂಜಿಸುವುದಾದಲ್ಲಿ ಜಯಕಾಂತ ಅವಳಲ್ಲಿ ತಾನು ವಿಶಿಷ್ಟ ವ್ಯಕ್ತಿ ಎಂಬ ಭಾವ ಮೂಡಿಸಿದ ಬಣ್ಣದ ಪಟ್ಟೆಗಳ ಅಂಗಡಿಯ ಹೊರಗೆ ಚಾಚು ಚಾವಡಿಯಡಿ ನಿಂತು ಕರ್ಪಗಂದಂಡೆಯ ತುದಿಗೆ ದೃಷ್ಟಿ ಹರಿಸಿ, ನೀಲ ಆಕಾಶದ ಹಿನ್ನೆಲೆಗೆ ಎದ್ದ ಧೂಳು ಅವಳ ಕಣ್ಣುಗಳಲ್ಲೂ ಭಾವಗಳ ರಂಗು ಬದಲಿಸುತ್ತಿತ್ತು. ಬಾದಾಮಿ ಆಕಾರದ ನಸುಗಪ್ಪು ರಂಗಿನ ಆಕರ್ಷಕ ಮುಖ ಅವಳದು. ಹಸಿರು ಸೀರೆಯಲ್ಲಿ ಬೆಡಗಿನ ನಿಲುವು ಗಾಳಿಗೆ ಹಾರುತ್ತಿದ್ದ ಕಂದು ಮುಂಗುರುಳು ಒಮ್ಮೆ ಅವಳತ್ತ ಕಣ್ಣು ಹರಿಸಿದವರು ಮತ್ತೊಮ್ಮೆ ತಪ್ಪದೇ ನಿಟ್ಟಿರುವಂತಹ ಸೆಳೆದ ಮೈಮಾಟ.

ಪಲಂಗಾಮಿ ರಾಕೆಟ್ ರಕ್ಷಣೆಯ ಖೋಟಾ ವಿಮಾ ಕಂಪೆನಿಯ ಹೆಸರಿನಲ್ಲಿ ಸರ್ಪದಂಡೆಯ ವ್ಯಾಪಾರಿಗಳಿಗೆ ದುಃಸ್ವಪ್ನವಾಗಿ ಕಾಡಿದ ಧೂರ್ತ. ಕರ್ಪಗಂ ಮಾವ ತಂಗಯಾರ್, ಸೋಮನ್, ಜಯಕಾಂತ್‌ನನ್ನು ಕೊಂದ ಕೊಲೆಗಾರ ನಾಗರಹಾವಿನ ಹಾಗೇ ನಾನು ಸುಮ್ಮನೆ ಇದ್ದೋರ ತಂಟೆಗೆ ಬರೋನಲ್ಲ, ನನ್ನ ವ್ಯವಹಾರದಲ್ಲಿ ತಲೆ ಹಾಕಿದವರಿಗೆ ಮಾತ್ರ ನಾನು ತುಂಬಾ ಕೆಟ್ಟೋನು. ಅವನು ಕೊಲೆಗೆ ಬಳಸುವ ಆಯುಧ ಇನ್ನೊಬ್ಬ ಎಲ್ಲೂ ಬಳಸಲಾರ. ಅದು ಪಿಟೀಲಿಗೆ ಬಳಸೋ ಕ್ಯಾಟ್ ಗಟ್ ಬೆಕ್ಕಿನ ಕರುಳಿನಿಂದ ತಯಾರಿಸಿದ ದಾರದಿಂದ ಕೊಂದು ಸಲಂಗುಬೆಟ್ಟದಲ್ಲಿ ಹಾಕುತ್ತಿದ್ದರು.

ಕೊನೆಯಲ್ಲಿ ಆದಿತ್ಯ-ಕರ್ಪಗಂ ಪಲಂಗಾಮಿ-ರಮಣಿಯ ಕುತಂತ್ರದಿಂದ ಸಿಲುಕಿ ಪ್ರಾಣಾಪಾಯದಲ್ಲಿದ್ದವರಿಗೆ ಮಣಿಮಾಲಾ ಸಲಂಗು ಮಲೆ ಬೆಟ್ಟಕ್ಕೆ ಸಾಗಿಸಿ ಇವರಿಬ್ಬರನ್ನೂ ಹೇಗೆ ಕೊಲೆ ಮಾಡಬೇಕೆಂದೂ ತನ್ನ ಗ್ಯಾಂಗ್‌ನವರಿಗೂ ಆತುರವಾಗಿ ತಿಳಿಸಿದನ್ನು ಮಣಿಮಾಲ ಕೋಣೆಯಲ್ಲಿ ಮಂಚದಡಿಯಲ್ಲಿ ಉಸಿರುಗಟ್ಟಿ ವಿವರ ಕೇಳಿಸಿಕೊಂಡು ಅವರೆಲ್ಲಾ ಹೋದ ಮೇಲೆ ಪೋಲಿಸ್ ಠಾಣೆಗೆ ತಿಳಿಸಿದಳು. ಪೋಲಿಸ್ ವೇಗದ ಕಾರ್ಯ ನಡೆಸಿ ಅಪರಾಧಿಯನ್ನು ಹಿಡಿದರು.

ರಾಯರ ಕಾದಂಬರಿಯಲ್ಲಿ ಸಮಾಜ ವಿರೋಧಿ ಚಟುವಟಿಕೆಗಳ ಬಗ್ಗೆ ಕಾನೂನು ಬಾಹಿರವಾದ ಕಾರ್ಯಗಳ ಬಗ್ಗೆ ತಿಳಿಸಿದ್ದಾರೆ.

ಟಿ.ಕೆ ರಾಮರಾವ್ ಅವರು ಕಾದಂಬರಿ ಅಷ್ಟೇ ಅಲ್ಲದೇ ಕೆಲವು ಸಣ್ಣ ಕಥೆಗಳನ್ನು ಬರೆದಿದ್ದಾರೆ. "ಉಬ್ಬರವಿಳಿತ" ಎಂಬ ಕಥಾಸಂಕಲನವನ್ನು ಅವರು ವಿದ್ಯಾರ್ಥಿಯಾಗಿದ್ದ ದಿನಗಳಲ್ಲಿ ಸಂಭವಿಸಿದ ಅವರ ಸೋದರನ ದುಃಖ ಪ್ರಸಂಗ, ಸೋದರನ ನೆನಪು ಹಸಿರಾಗಲೆಂದು ಆ ಹೆಸರನ್ನು ಪುಸ್ತಕಕ್ಕೆ ಆರಿಸಿದ್ದಾರೆ.

ಈ ಕಥಾ ಸಂಕಲನವು ರಾವ್ ಅವರ ಸ್ವಾರಸ್ಯಪೂರ್ಣ ಕಥಾಸಂಕಲನ. ಇಲ್ಲಿ ಕಥೆಯನ್ನು ಬೆಳೆಸಿಕೊಂಡು ಹೋಗುವ, ಅದನ್ನು ಶಿಖರಕ್ಕೆ ಕೊಂಡೊಯ್ದು ಮುಟ್ಟಿಸುವ ತಂತ್ರಕ್ಕೆ ಜಾಣ್ಮೆಗೆ ಪ್ರಾಶಸ್ತ್ಯ ನೀಡಿದ್ದಾರೆ. ಬದುಕಿನ ವಿನೋದ, ವ್ಯಂಗ್ಯ ಇಲ್ಲಿನ ಕಥೆಗಳನ್ನು ಅಂತರಗಂಗೆಯಾಗಿ ಹರಿದು ಸಣ್ಣಕಥೆಗಳು ಜೀವಂತವಾಗಿದೆ ಎಂಬುದನ್ನು ಎತ್ತಿತೋರುವ ಉಪಯುಕ್ತ ಹೊತ್ತಿಗೆ ಇದಾಗಿದೆ.

ಸಣ್ಣಕತೆಗಳು ಸಮಾಜದ ಆಗು-ಹೋಗುಗಳನ್ನು, ಸಾಮಾಜಿಕ ರೀತಿ-ನೀತಿಗಳನ್ನು, ಸಾಮಾಜಿಕ ವೈಷಮ್ಯ ವೈರುದ್ಯಗಳನ್ನು ಕಥೆಗಳಲ್ಲಿ ಕಾಣಿಸಿದ್ದಾರೆ. ಸಣ್ಣಕಥೆಗಳ ವಸ್ತು ಸಾಮಾಜಿಕವಾದುದು. ಸಮಾಜದ ಕೊಳಕು, ಸಮಕಾಲೀನ ಸಮಸ್ಯೆ, ಸಾಮಾಜಿಕ ಪ್ರಜ್ಞೆಯನ್ನು ನಿರೂಪಿಸುವ ಕಥೆಗಳೇ ಹೆಚ್ಚು. ಬಡತನ, ಸ್ವಾತಂತ್ರ್ಯವೀರರು, ಸಾಹಸ, ದೇಶಪ್ರೇಮ, ಬಡವ-ಶ್ರೀಮಂತರ ನಡುವೆ ಇರುವ ಅಂತರ ಇವು ಸಣ್ಣಕಥೆಗಳ ಕಥಾವಸ್ತು.

"ಒಳ್ಳೆಯ ವಸ್ತು, ಒಳ್ಳೆಯ ಜನ ಕಂಡರೆ ನನಗೆ ಪ್ರೀತಿ, ಗೌರವ, ವಿಶ್ವಾಸ, ಸಣ್ಣತನ, ಸಂಕುಚಿತ ಪ್ರವೃತ್ತಿ. ಜಾತಿಮತ್ಸರ, ಆಷಾಡ ಭೂತಿತನ, ಆರ್ಥಿಕ ಸಾಮಾಜಿಕ, ರಾಜಕೀಯ, ವಿಷಮತೆ ಕಂಡರೆ ನನಗೆ ತಡೆಯಲಾರದ ದ್ವೇಷ" ಎನ್ನುತ್ತಾರೆ.

ಅ.ನ.ಕೃ, ಹಾ.ಮಾ.ನಾಯಕರು, ನಿರಂಜನ, ಕಟ್ಟೀಮನಿ ಮೊದಲಾದವರಂತೆ, ಟಿ.ಕೆ ರಾಮರಾವ್ ಅವರು ಅನೇಕ ಸಣ್ಣಕಥೆಗಳನ್ನು ಬರೆದಿದ್ದಾರೆ.

"ದಿಬ್ಬದ ಬಂಗಲೆ" ಕಾದಂಬರಿಯ 'ಸುಧಾ' ವಾರಪತ್ರಿಕೆಯ ಹದಿಮೂರರಿಂದ ಹತ್ತೊಂಬತ್ತು ವಯಸ್ಸಿನ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಏರ್ಪಡಿಸಿದ್ದ ಕಿಶೋರರ ಸಾಹಿತ್ಯದ ಸಾಹಸ ಪ್ರಧಾನದ ಕಾದಂಬರಿ. ಸ್ಪರ್ಧೆಯಲ್ಲಿ ಪ್ರಥಮ ಪುರಸ್ಕಾರ ಪಡೆದ ಕೃತಿ.

ಕಳುವಾದ ಎರಡು ಕುರಿಗಳ ಪತ್ತೆಗೆ ಹೋದವರು ದಿಬ್ಬಣ ಬಂಗಲೆಯ ಶೋಧನೆಗೆ ಇಳಿದು ಸಾಹಸಕ್ಕೆ ಪ್ರವೇಶ ಮಾಡಿದ, ಅಪರಾಧ ಪ್ರಕರಣಕ್ಕೆ ಕಾದಿದ್ದೋರಿಗೆ ಸಿಕ್ಕಿದ ಪತ್ತೇದಾರಿ ಈಗ ಅಪಾಯ, ಸಾಹಸ ಅಭ್ಯಾಸವಾಗಿ ರಕ್ತದಲ್ಲಿ ಹರಿದಾಡಿದೆ ಕಾರ್ಯಸಾಧನೆಗೆ ಕಾರಣ ಗುರು ಗಜಾನನ ಬೋಗುಣಿದು ಆಶೀರ್ವಾದ, ಆಪರೇಟಿವ್ ಜೀರೋ ವೇಣುವಿನ ಅಸಾಧಾರಣ ಸಹಾಯ ಬಳಸಿದ್ದು, ಶುದ್ಧ ಸ್ವದೇಶಿ ಕರ್ನಾಟಕದ ತಂತ್ರ–ಉದ್ಯೋಗದ ಗುರಿ ಹಿಂದಿನಂತೆ ಉಚಿತ ಸಲಹೆ, ಇಪ್ಪತ್ತನಾಲ್ಕು ಗಂಟೆಗಳ ಸೇವೆ.

ಊರ ಲೈಬ್ರರಿಯಲ್ಲಿ ಬರೀ ಪತ್ತೇದಾರಿ ಪುಸ್ತಕಗಳನ್ನೇ ತುಂಬಲಿಕ್ಕೆ ಹೇಳ್ತೀನಿ ಎಂದು ಸಬ್ ಇನ್ಸ್‌ಪೆಕ್ಟರ್ ಹೇಳಿದ. ಡಾಕ್ಟರ್ ಗೋವರ್ಧನ ಪಡುಕೋಣೆ ತನ್ನ ಪ್ರಶಂಸೆ ಸೇರಿಸುವುದನ್ನು ಮರೆಯದೇ "ಖಿಲಾಡಿ ಸಾಹಸಿಗಳು, ಅಸಾಧ್ಯರು" ಹೇಳಿದರು ಕೊಡಗನೂರು ಗೌಡತಿ ಬೆಟ್ಟಮ್ಮ ಮಡಕೆ ಹೊಟ್ಟೆಯ ಪತಿಗೆ, ಹಿಂದೆ ಕುಳಿತ ಗ್ರೇಸಿಯಾಳನ್ನು ನೆನಪು ಮಾಡಿಕೊಟ್ಟಳು. "ಅಯ್ಯೋ ಪಾಪ ಆ ಹೆಣ್ಣನ್ನು ಕಾಪಾಡೋದಿಕ್ಕೆ ಆ ಎರಡು ಮಕ್ಕಳು ಅದೇನು ಪಾಡುಪಟ್ಟು ಅಂತೀರಿ" ಎಂದರು.

ಹತ್ತು ವರ್ಷದ ಹೊಟ್ಟೆನೋವು ಹೊತ್ತ ಬೊಮ್ಮಸಿದ್ದ, ಹೋಟೇಲಿಗೆ ರಜ ಘೋಷಿಸಿನಿಂತ ಕಾಕಾ ಹೋಟೆಲಿನ ಉಮರಬ್ಬ, ಕಾಕಾ ಹೋಟೇಲಿನ ಟೀ ಕುಡಿದ ಬಗ್ಗೆ ವೇಣುವಿನ ಮೇಲೆ ಚಾಡಿ ಹೇಳಿದ ಮಸ್ತಫ, ಮೂರು ರೂಪಾಯಿಗಿಂತ ಬಾಕಿ ಮರೆತ ಸೈಕಲ್ ಷಾಪ್ ಚನ್ನಂಕ, ಕುಲುವೆಯ ಸುತ್ತಿಗೆಗೆ ವಿರಾಮ ಕೊಟ್ಟ ಪುಣ್ಯಕೋಟಿ, ಜೋಡಿಕುರಿ ಕಳೆದುಕೊಂಡ ಕೆಂಫಲಕ್ಕ ಎಲ್ಲರಿಗೂ ಅಂದು ಹಬ್ಬ. ಪತ್ತೇದಾರರಿಗೆ ನೂರು ಹಾರಹೊರಿಸಿದರು.

ತಳಿರು ತೋರಣ, ರಂಗುರಂಗುಗಳ ಬೆಲೂನುಗಳಿಂದ ತುಂಬಿನ ಪುರಭವನದ ಕಡೆಗೆ ಮೆರವಣಿಗೆ, ಅಲ್ಲಿ ಪತ್ತೇದಾರರಿಗೆ ಸನ್ಮಾನ ಸಮಾರಂಭ, ವರದಿಗಾರರಿಗೆ ಸಂದರ್ಶನ ಕೊಡುತ್ತಿದ್ದ ಜೇಮ್ಸ್ ಪಾಂಡು.

"ಮತ್ತೆ ಭೇಟಿ ಮಾಡಿ, ಹೇಳೋದು ಇನ್ನೂ ಬೇಕಾದಷ್ಟಿದೆ, ನಮಸ್ತೆ" ಹನ್ನೆರಡು ಸಲಕ್ಕೆ ಕುಲುಕಿದ ಜೂನಿಯರ್ ತನ್ನ ಕೈ ಹನ್ನೆರಡು ಸಾರಿ ತಪ್ಪದೆ ಚಾಚಿದ.

ದಿಬ್ಬದ ಬಂಗಲೆಯ ವೀರರಿಬ್ಬರ ಕಿಶೋರ ಸಾಹಸದ ಬಗ್ಗೆ ರಾಯರು ತಮ್ಮ ಕಾದಂಬರಿಯಲ್ಲಿ ವರ್ಣಿಸಿದ್ದಾರೆ.

ಟಿ.ಕೆ. ರಾಮರಾವ್‌ರವರ ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಅವರ ಕೆಲವು ಕಾದಂಬರಿಗಳಾದ ಮರಳು ಸರಪಣಿ, ಕೆಂಪುಮಣ್ಣು, ಬಂಗಾರದ ಮನುಷ್ಯ, ಮಣ್ಣಿನ

ದೋಣಿ, ಚಲನಚಿತ್ರಗಳಾಗಿ ಮಾರ್ಪಾಟಾದವು. ಈ ಚಿತ್ರಗಳೆಲ್ಲಾ ಅತ್ಯಂತ ಯಶಸ್ಸು ಕಂಡ ಚಲನಚಿತ್ರಗಳು.

"ಮರಳು ಸರಪಣಿ" ಕಾದಂಬರಿಯ ಸುಪ್ರಸಿದ್ಧ ದಿನಪತ್ರಿಕೆಯಾದ 'ಕನ್ನಡಪ್ರಭ' ದಲ್ಲಿ ದೈನಿಕ ಧಾರವಾಹಿಯಾಗಿ ಪ್ರಕಟವಾದ ಕಾದಂಬರಿ. ಪ್ರಕಟಣೆಗೆ ನೇರವಾದ ಕಾದಂಬರಿ, ಧಾರವಾಹಿಯಾಗಿ ನಂತರ ಶ್ರೀ.ಕೆ.ವಿ ಜಯರಾಂರವರ ನಿರ್ದೇಶನದಲ್ಲಿ ಅದ್ದೂರಿ ತಾರಾಗಣದೊಂದಿಗೆ ಯಶಸ್ವಿಯಾಗಿ ವರ್ಣದಲ್ಲಿ ಚಲನಚಿತ್ರವಾಗಿ ನಿರ್ಮಿಸಿದ. ಕೆ.ಆರ್. ಪಿಕ್ಚರ್ಸ್ ಕಂಬೈನ್ಸ್‌ನಲ್ಲಿ ಮೂಡಿದ ಕಾದಂಬರಿ ಆಧಾರಿತ ಚಲನಚಿತ್ರವಾಗಿದೆ.

ಎರಡು ವರ್ಷಗಳ ಕಾಲ 'ಉಷಾಕಿರಣ'ದ ನಿಗೂಢ ಪ್ರಸಂಗವನ್ನು ಕತ್ತಲಿನಲ್ಲಿಟ್ಟು, ಸ್ವಜನರ ನಡುವೆ ಮರುಳು ಸರಪಣಿಯ ನಡುವೆ ಭಾಂದವ್ಯ ಉಂಟು ಮಾಡಿದ ಮಲ್ಲೇಶ್, ತಾನು ನಡೆಸಿದ ಘೋರ ಅತ್ಯಾಚಾರಕ್ಕೆ-ಅಪರಾಧಕ್ಕೆ ಜುಲ್ಮಾನೆ ತೆತ್ತಿದ್ದ.

ಬಣ್ಣದ ಹುತ್ತದಲ್ಲಿ ಎರಡು ವರ್ಷಗಳ ಕಾಲ ಹಾವಿನಂತೆ ಹೊರಳಿದ ಬಂಧುತ್ವದ ಮರುಳು ಸರಪಣಿಯ ಉಕ್ಕಿನ ಸರಪಣಿಯಾಗಿತ್ತು.

ಹರ್ಷಾ 'ಉಷಾಕಿರಣ'ದ ದೀಪ-ಇನ್ನು ಮುಂದೆ ಎಲ್ಲರನ್ನೂ ಉಕ್ಕಿನ ಸರಪಣಿಯಿಂದ ಕೂಡಿಸಬೇಕಾದೋನು.

"ಕೆಂಪುಮಣ್ಣು" ಕಾದಂಬರಿಯು ತರಂಗ ಸಾಪ್ತಾಹಿಕ ಆರಂಭವಾದಂದಿನಿಂದ ಧಾರವಾಹಿ. ರಾಯರು ತರಂಗ ಪತ್ರಿಕೆಯ ನಾಮಕರಣ ಕೂಡ ಆಗಿರಲಿಲ್ಲವಾದ ಪತ್ರಿಕೆಗೆ ಕಾದಂಬರಿಯನ್ನು ಕೊಟ್ಟರು. ಈ ಕಾದಂಬರಿ ರಾವ್ ಅವರ ೫೦ನೇ ಕೃತಿ. ಲೇಖನ ಕೃಷಿಯಲ್ಲಿರುವ ಅವರನ್ನು ಅಭಿಮಾನಿಗಳು ತುಂಬಾ ಎತ್ತರಕ್ಕೇರಿಸಿರುವ ಪತ್ತೇದಾರಿ ಕಾದಂಬರಿ ಇದಾಗಿದೆ ಎಂದು ಹೇಳಿದರು. ಇದು ಕೂಡ ಮೋಹನ ಮುರುಳಿ ಪ್ರೊಡಕ್ಷನ್ಸ್‌ನ ಶ್ರೀಯುತ. ಪಿ. ಕೃಷ್ಣರಾಜ್‌ರವರ ಕಾದಂಬರಿ ಆಧಾರಿತ ಚಲನಚಿತ್ರವಾಗಿ ಯಶಸ್ವಿ ಪ್ರದರ್ಶನ ಕಂಡಿತು.

ಸಂಬಂಧವಿಲ್ಲದ ಆರಭಿ ಈ ಕಾದಂಬರಿಯ ನಾಯಕಿ ಕೆಂಪು ಮಣ್ಣಿನ ಒಡತಿ ಎಂದು ದಳಪತಿಗೌಡ ತನ್ನ ಸಂಪೂರ್ಣ ಆಸ್ತಿ ಹಕ್ಕುದಾರಣಿಯಾಗಿ ಮಾಡಿದ. ಆರಭಿ ದಳಪತಿಗೌಡ ಚಿಕಿತ್ಸೆ ಪಡೆಯುತ್ತಿದ್ದ ಬೊಂಬಾಯಿ ಆಸ್ಪತ್ರೆಯಲ್ಲಿ ರೋಗಿಗಳ ಸೇವೆಯನ್ನು ಮಾಡುತ್ತಿದ್ದ ಒಬ್ಬ ನರ್ಸ್. ಸಂಬಂಧಿಯಲ್ಲದ ಗೌಡನಿಗೆ ಆರೈಕೆ, ಸೇವೆ ಸಲ್ಲಿಸಿ ಯೋಚನೆ ಮಾಡಬಾರ್ದು, ಮಾತಾಡಬಾರ್ದು, ಕಾಯಿಲಿ ಜಾಸ್ತಿ ಆಗುತ್ತೆ, ಬೇಗ ವಾಸಿ ಆಗ್ಲಿ ಆರೋಗ್ಯ

ದಿಂದ ಹಿಂತಿರುಗಿದ್ರೆ ನನಗಿಂತ ಹೆಚ್ಚು ಸಂತೋಷ ಪಡುವರಿಲ್ಲ ಎಂದು ಹೃದಯದಿಂದ ಅನುಕಂಪ, ಸ್ವಾಂತನ ನೀಡುತ್ತಿದ್ದಳು. ಪ್ರೇರಣೆ ಎಲ್ಲಿಯದೆಂದು ಅವಳಿಗೆ ಅರ್ಥವಾಗದು–ಕಳಪತಿಗೌಡನಿಗೂ ಅದು ಅರ್ಥವಾಗದು. ಧೈವಕಳುಹಿಸಿದ ವ್ಯಕ್ತಿಯೆಂದು ಅವಳನ್ನು ಮನಸಾರೆ ಗ್ರಹಿಸಿದ್ದ ನನ್ನ ಎಷ್ಟೋಂದು ಹಚ್ಕೊಂಡಿದ್ದು, ಆರು ನಿನಗೋಸ್ಕರ ನಾನು ಏನು ಮಾಡಲಿಕ್ಕೂ ಸಿದ್ಧ ತನ್ನ ಕೆಂಪು ಮಣ್ಣನ್ನು ಅರಭಿ ಹೆಸರಿಗೆ ಉಯಿಲು ಬರೆದಿಟ್ಟು ತನ್ನ ಕೊನೆಯುಸಿರೆಳೆದ.

ಕೆಮ್ಮಟ್ಟಿಗೆ ಬಂದ ಅರಭಿಯ ಮೇಲೆ ಅನೇಕ ದಾಳಿಗಳು ನಡೆದವು ವಿಷ್ಣುವಿನ ಕೊಲೆಯ ಸುತ್ತಲೂ ಆರೋಪ ಹೊತ್ತವರು ಕೆಂಪು ಮಣ್ಣಿನ ಸದಸ್ಯರುಗಳು. ಆದರೆ ಕೊಲೆಗಾತಿ ಚಂದ್ರಮ್ಮ ತಾನು ಕೊಂದು ಆ ಆರೋಪವನ್ನು ಸಂಧ್ಯಾಳ ಮೇಲೆ ಸುಲಭವಾಗಿ ಹೊರಿಸಿಟ್ಟಳು.

ದಳಪತಿಗೌಡ, ಚಿನ್ನಸ್ವಾಮಿ ಅಂತೋರನ್ನ ಸಹಿಸಿ, ನಿಭಾಯಿಸಿ ಉಕ್ಕಿನ ಹಾಗಿರೋ ಹೃದಯ ಇದು. ನಾನು ಸತ್ಯವನ್ನು ಬಯಲಿತಿಟ್ಟಿದ್ದು ಯಾಕೆ ಗೊತ್ತೆ ಆರು ಅದು ಪಶ್ಚಾತ್ತಾಪದ ಪರಾಕಷ್ಠೆ. ಪ್ರತೀಕಾರ ನಿನ್ನ ಮೇಲೆ ಒಬ್ಬ ಸಾಮಾನ್ಯ ನರ್ಸ್‌ಗೆ ಲಕ್ಷಾಂತರ ಬೆಲೆಯ ಕೆಂಪುಮಣ್ಣಿನ ಆಸ್ತಿ ಲಭ್ಯವಾದ್ರೆ ಅಂತ ನಂದೀಶ್‌ನ ಕೊಂದೆ. ಪಾರ್ಶ್ವವಾಯು ಮಾನಸಿಕ ಅಘಾತದೊಂದಿಗೆ ದೈಹಿಕ ತೊಂದರೆಗಳೂ ಸೇರಿವೆ. ಅಪಾಯದಿಂದ ಪರಾಗೋದು ಕಷ್ಟ.

ದ್ವೇಷ, ಪ್ರತೀಕಾರದ ನಂತರ ಕಾದಂಬರಿಯ ಕೊನೆಯಲ್ಲಿ ವಿಕ್ರಮ –ಮೇನಕಾ, ರವಿಶಂಕರ್–ಸಂಧ್ಯಾ, ಅರಭಿ–ಉದಯ ಎರಡು ತೋಟಗಳ ಮಧ್ಯದ ಬೇಲಿಯನ್ನು ಕಿತ್ತು ಹಾಕುತ್ತಿದ್ದರು. ಅತ್ಯಂತ ಕಡಿಮೆ ಅಪಾಯಕಾರಿ ಅನ್ನಿಸ್ಸೋನಿಗೆ ಯಾವತ್ತೂ ನಷ್ಟವಿಲ್ಲಾಂತ ನಮ್ಮಮ್ಮ ಹೇಳ್ತಿದ್ದರು ಎಂದು ಉದಯ ಹೆಣ್ಣು, ಮಣ್ಣು, ಹೊನ್ನು ಅವೇಒಲಿದು ಬರುತ್ತವಂತ್ತೆ,ಆರಭಿಯಂತಹ ಸುಂದರವಾದ, ಸದ್ಗುಣವಾದ ಹೆಣ್ಣು ಸಿಕ್ಕಿದ್ದು ಜೊತೆಗೆ ಕೆಂಪು ಮಣ್ಣಿನ ಒಡತಿ ಒಲಿದಿರುವುದು ನನ್ನ ಪೂರ್ವ ಜನ್ಮದ ಪುಣ್ಯ ಎಂದು ಹೇಳುತ್ತಾನೆ.

ಅಧ್ಯಾಯ – ೫

ಟಿ.ಕೆ. ರಾಮರಾವ್ ಅವರ ಪತ್ತೇದಾರಿ ಕಾದಂಬರಿಗಳ ಸ್ವರೂಪ ಮತ್ತು ಆಶಯ

ಪತ್ತೆ ಎಂದರೆ 'ಶೋಧ' – ಹುಡುಕುವುದು ಎಂಬರ್ಥವಿದ್ದು, ಪತ್ತೇದಾರ ಎಂದರೆ ಶೋಧನೆಯನ್ನು ಮಾಡುವವನು ಎಂದಾಗುತ್ತದೆ. ಕೊಲೆ, ಸುಲಿಗೆ, ದರೋಡೆ ಮೊದಲಾದ ಕಾನೂನು ಬಾಹಿರ ಕೆಲಸಗಳನ್ನು ಎಸಗಿ ತಲೆ ತಪ್ಪಿಸಿಕೊಂಡವರ ಪತ್ತೆ ಹಚ್ಚುವ ಕಥಾ ವಿಷಯವನ್ನೊಳಗೊಂಡ ಕಾದಂಬರಿಗಳಿಗೆ 'ಪತ್ತೇದಾರಿ ಕಾದಂಬರಿ' ಎಂದು ಕರೆಯುವರು.

ಪತ್ತೇದಾರಿ ಕಾದಂಬರಿಗಳಲ್ಲಿ ಪತ್ತೇದಾರನೇ ಪ್ರಮುಖ ಪಾತ್ರಧಾರಿ. ಅವನಿಲ್ಲದೇ ಕಾದಂಬರಿ ಮುಂದೆ ಸಾಗಲಾರದು. ಈ ಪತ್ತೇದಾರ ಪತ್ತೇದಾರನೇ ಆಗಿರಬಹುದು, ಇನ್ಸ್‌ಪೆಕ್ಟರ್ ಆಗಿರಬಹುದು. ವಿಜ್ಞಾನಿಯಾಗಿರಬಹುದು, ಅಧ್ಯಾಪಕನಾಗಿರಬಹುದು, ವೈದ್ಯನಾಗಿರಬಹುದು, ಯಾರೇ ಆಗಿದ್ದರೂ ಕಾದಂಬರಿಯಲ್ಲಿ 'ಶೋಧಕನ' ಪಾತ್ರವಹಿಸಿದ್ದರೆ, ಆ ವ್ಯಕ್ತಿಯೇ ಪತ್ತೇದಾರನಾಗುತ್ತಾನೆ.

ತರ್ಕ ಮತ್ತು ಕಲ್ಪನೆಗಳು ಪತ್ತೇದಾರಿ ಕಾದಂಬರಿಗಳ ಜೀವಾಳ. ಮುಂದೇನು, ಮುಂದೇನಾಗುತ್ತದೆ? ಎಂಬ ಕುತೂಹಲವನ್ನು ಕಾಯ್ದುಕೊಂಡು ಚಾಕಚಕ್ಯತೆಯಿಂದ ಕಥೆ ಹೇಳುತ್ತಾ ಹೋಗುವುದೇ ಪತ್ತೇದಾರಿ ಕಾದಂಬರಿಗಳ ಮೂಲ ವೈಶಿಷ್ಟ್ಯ. ಭಯಾನಕ ಕೊಲೆಗಳು, ಕೊಲೆಗಾರ ತಪ್ಪಿಸಿಕೊಂಡು ಪರಾರಿಯಾಗುವುದು, ಕೊಲೆಗಾರನನ್ನು ಹುಡುಕಲು ಪತ್ತೇದಾರ ಪಡುವ ಸಾಹಸ, ಅವನ ಜಾಣ್ಮೆ, ಕೊಲೆಗಾರನ ಕೈಸೆರೆ, ಪತ್ತೇದಾರನಿಗೆ ಜಯ ಇವು ಪತ್ತೇದಾರಿ ಕಾದಂಬರಿಗಳ ಇಂದ್ರಜಾಲವಾಗಿದೆ.

ನೂರಾರು ಪತ್ತೆದಾರಿ ಕಾದಂಬರಿಕಾರರಿಂದ ಸಾವಿರಾರು ಪತ್ತೇದಾರಿ ಕಾದಂಬರಿಗಳು ಹೊರಬಂದರೂ, ಜನಪ್ರಿಯತೆಯನ್ನು ಪಡೆದವರು ಹಾಗೂ ಓದುಗರ ಮನದಲ್ಲಿ ಅಚ್ಚಳಿಯದೆ ನಿಂತವರು ಬೆರಳೆಣಿಕೆಯಷ್ಟು ಮಂದಿ ಮಾತ್ರ – ಅಂತವರಲ್ಲಿ ಟಿ.ಕೆ. ರಾಮರಾವ್‌ರವರು ಒಬ್ಬರು. ಸಾಹಿತ್ಯದ ಎಲ್ಲಾ ಪ್ರಕಾರಗಳು ಒಂದೊಂದು ಬಗೆಯಲ್ಲಿ ಜನಪ್ರಿಯವಾದವುಗಳೇ ಆಗಿವೆ. ಅದರಲ್ಲಿ ಕಾದಂಬರಿ ಪ್ರಕಾರವು ಹೆಚ್ಚು ಜನಪ್ರಿಯ ಹಾಗೂ ಜನಮನ್ನಣೆಯನ್ನು ಪಡೆದುಕೊಂಡಿದೆ. ಏಕೆಂದರೆ ಬದುಕಿನ

ಹಾಗೂಹೋಗುಗಳನ್ನು ಸರಳವಾಗಿ, ವಿವರವಾಗಿ ಹೇಳಲು ಸಹಕಾರಿಯಾಗಿದ್ದು ಜನರ ಮನಸ್ಸಿನ ಭಾವನೆಗಳಿಗೆ ನೇರವಾಗಿ ತಲುಪಿ, ಆತ್ಮಾವಲೋಕನಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿದೆ.

ಇತರ ಸಾಹಿತ್ಯ ಪ್ರಕಾರಗಳಲ್ಲಿ ಇಂತಹ ಅವಕಾಶಗಳು ಕಡಿಮೆ ಇದ್ದು, ಸಾಹಿತ್ಯ ಛಂದಸ್ಸಿನ ಬಿಗಿ ಕಟ್ಟುಪಾಡುಗಳಿಗೆ ಒಳಸಾಗಿದ್ದು ವಿದ್ಯಾವಂತ ವರ್ಗ ಮತ್ತು ಪ್ರಜ್ಞಾವಂತ ವರ್ಗದವರಿಗೆ ಸೀಮಿತವಾದ ಕಾರಣದಿಂದಾಗಿ ಹೆಚ್ಚು ಜನರಿಂದ ಮನ್ನಣೆ ಸಿಗದೆ ಕಳೆಗುಂದಿತು. ಪತ್ತೇದಾರಿ ಕಾದಂಬರಿಕಾರರಾದ ರಾಮರಾವ್ ಅವರ ಸಾಧನೆಗಳನ್ನು ಈ ರೀತಿ ಪಟ್ಟಿ ಮಾಡುತ್ತಾ ಹೋಗಬಹುದು.

೧) ಸೆಕ್ಸ್ ಮತ್ತು ಕ್ರೌರ್ಯಗಳು ಧಾರಾಳವಾಗಿ ತುಂಬಿಕೊಂಡ ಅಗ್ಗದ ಅಶ್ಲೀಲ ಸಾಹಿತ್ಯ 'ಪತ್ತೇದಾರಿ ಸಾಹಿತ್ಯ' ಅಷ್ಟೇ ಏಕೆ ಪತ್ತೇದಾರಿ ಕಾದಂಬರಿಗಳೆಂದರೆ ಮುಚ್ಚಿಟ್ಟುಕೊಂಡು ಓದುವಂತವು ಎನ್ನುವ ಭಾವನೆ ಬೆಳೆದು ಬಂದಿತ್ತು. ಇಂತಹ ಭಾವನೆಗಳನ್ನು ಹೋಗಲಾಡಿಸಿದ ಕೀರ್ತಿ ಶ್ರೀಯುತರಿಗೆ ಸಲ್ಲಬೇಕು.

೨) ಪತ್ತೇದಾರಿ ಕಾದಂಬರಿಗಳೆಂದರೆ ವಯಸ್ಕರು ಮಾತ್ರ ಓದುವಂತಹವು ಎನ್ನುವ ಕಾಲವೊಂದಿತ್ತು. ಇಂತಹ ಭಾವನೆಗಳನ್ನು ಹೊಡೆದೋಡಿಸಿ, ಪತ್ತೇದಾರಿ ಕಾದಂಬರಿಗಳನ್ನು ಸಾರ್ವಜನಿಕಗೊಳಿಸಿ ಅಬಾಲ ವೃದ್ಧರಾದಿಯಾಗಿ ಎಲ್ಲರೂ ಓದುವ ಹಾಗೆ ಮಾಡಿದವರಲ್ಲಿ ಪ್ರಮುಕರು.

೩) ಎಂ. ರಾಮಮೂರ್ತಿಯವರನ್ನು ಅನುಸರಿಸಿದರಾದರೂ ತಮ್ಮದೇ ಆದ ಶೈಲಿಯಲ್ಲಿ ಕಾದಂಬರಿ ರಚನೆ ಮಾಡಿದ್ದಾರೆ ಮತ್ತು ಹೊಸ ಪ್ರಕಾರದಲ್ಲಿ ಹೊಸತನವೊಂದನ್ನು ತರುವಲ್ಲಿ (ಹೆಜ್ಜೆ ಇಟ್ಟಿದ್ದಾರೆ) ಮೊದಲು ಮಾಡಿದ್ದಾರೆ.

೪) ಪತ್ರಿಕೆಯವರಿಗೆ ಅಪಾರವಾದ ಓದುಗ ವರ್ಗವನ್ನು ಸೃಷ್ಟಿಸಿಕೊಟ್ಟವರಲ್ಲಿ ಮೊದಲಿಗರೆಂಬುದಕ್ಕೆ, ಏಕಕಾಲಕ್ಕೆ ಮೂರು-ನಾಲ್ಕು ಪತ್ರಿಕೆಗಳಲ್ಲಿ ಇವರ ಕಾದಂಬರಿಗಳು ಪ್ರಕಟವಾಗುತ್ತಿದ್ದುದೇ ಸಾಕ್ಷಿಯಾಗಿದೆ.

೫) ಬರಿಯ ಪತ್ತೇದಾರಿಗಾಗಿ ಪತ್ತೇದಾರಿ ಕಾದಂಬರಿಯನ್ನು ಇವರು ಬರೆದವರಲ್ಲ. ಸಾಮಾಜಿಕ ಹಿನ್ನೆಲೆಯ ಕತೆಯಿದ್ದು ಕುತೂಹಲದ ಕ್ಷಣಗಳನ್ನು ಸೃಷ್ಟಿಸಬಲ್ಲ ಅಪೂರ್ವ ಸಾಮರ್ಥ್ಯದ ರಾಮರಾವ್ ಅವರು 'ಸಾಮಾಜಿಕ-ಪತ್ತೇದಾರಿ ಕಾದಂಬರಿ ಸಾಮ್ರಾಟ್' ಎನ್ನುವ ಮಾತಿಗೆ ಅಕ್ಷರಶಃ ನಿಜವಾಗಿದ್ದಾರೆ. ಅಪರಾಧ ಕೊಲೆ ಒಂದರ ಸುತ್ತಲು ಹರಡಿಕೊಳ್ಳುವ ರಾಮರಾವ್ ಅವರ ಪತ್ತೇದಾರಿ

ಕಾದಂಬರಿಗಳು ಸಾಮಾಜಿಕ ಬದುಕನ್ನು ಕಾಣಿಸುತ್ತಾ ಸಮಕಾಲೀನ ಜೀವನದ ನೋಟಾವಾಗಿದ್ದುದು ಒಂದು ವಿಶೇಷವೇ ಎನ್ನಬಹುದು.

೬) ಬರೆದು ಬದುಕುವುದನ್ನೇ ವೃತ್ತಿಯಾಗಿಸಿಕೊಂಡು ಅನೇಕ ಪುಸ್ತಕಗಳನ್ನು ರಚಿಸಿ ಸುಖವಾಗಿಯೂ ಬದುಕುತ್ತಿದ್ದ ಅಪೂರ್ವ ವ್ಯಕ್ತಿಗಳಲ್ಲಿ ಒಬ್ಬರು ರಾಮರಾವ್.

೭) ಸಾಮಾಜಿಕ, ಐತಿಹಾಸಿಕ ಕಾದಂಬರಿಗಳನ್ನು ಶ್ರೀಯುತರು ಬರೆದಿದ್ದರು. ಅವರು ಓದುಗರಿಗೆ ಚಿರಪರಿಚಿತರಾಗಿರುವುದು ತಮ್ಮ ಪತ್ತೇದಾರಿ ಕಾದಂಬರಿಗಳ ಮೂಲಕವೇ.

ಓದುಗರ ಮೈ ನವಿರೇಳಿಸಿ ರೋಮಾಂಚನಕಾರಿ ಕಥನದಿಂದ ಮನಗಣಿಸುವ ಪತ್ತೇದಾರಿ ಕಾದಂಬರಿ ರಚನೆಗೆ ವಿಶೇಷ ರೀತಿಯ ಶೈಲಿ, ನಿರೂಪಣೆ, ತಂತ್ರ ಎಲ್ಲವೂ ಅಗತ್ಯ. ಇವೆಲ್ಲವನ್ನು ಹೊಂದಿ, ಸರಸ-ಸುಮಧುರ ಶೈಲಿಯೊಂದಿಗೆ ಪ್ರತಿ ಅಧ್ಯಾಯದಲ್ಲೂ ಕುತೂಹಲ ಉಳಿಸುವಂತೆ ರಚಿಸುವ ವೈಶಿಷ್ಟ್ಯವನ್ನು ಮೈಗೂಡಿಸಿಕೊಂಡು ಪತ್ತೇದಾರಿ ಕಾದಂಬರಿಗಳಿಗೆ ಹೊಸ ಆಯಾಮವನ್ನು ನೀಡಿದ್ದಾರೆ. ಜನಪ್ರಿಯತೆಯ ಒಂದೊಂದೇ ಮೆಟ್ಟಿಲನ್ನು ಏರುತ್ತಾ ಹೋದ ರಾಮರಾವ್ ಅವರು ಪ್ರಥಮ ಪತ್ತೇದಾರಿ ಕಾದಂಬರಿಯಾದ 'ಮೂರನೇಯ ಕೀಲಿಕೈ'ಯಲ್ಲಿ ಕೈಚಳಕ ತೋರಿಸಿರುವುದನ್ನು ಕಾಣಬಹುದಾಗಿದೆ.

ಇವರ ಪತ್ತೇದಾರಿ ಕಾದಂಬರಿಗೆ ಹೆಸರುಗಳೇ ಓದುಗರಿಗೆ ಮೋಡಿ ಮಾಡುವಂತಿರುತ್ತವೆ. ಮೂರನೇ ಕೀಲಿಕೈ' ಯಾಕೆ ಬಂತು? 'ತಾಳೆ ಹೂ'ನಲ್ಲಿ ಏನು ನಡೆಯಿತು? 'ಕಪ್ಪು ನಾಯಿ' ಏನಾಯಿತು? 'ರಹಸ್ಯ ಪತ್ರ' ಎಲ್ಲಿ ದೊರೆಯಿತು? 'ತೋರು ಬೆರಳು' ಏನು ಮಾಡಿತು? 'ವಜ್ರದಕೊಂಬು' ಎಲ್ಲಿ ಸಿಕ್ಕಿತು 'ಗುಲಾಮ ಹೆಣ್ಣು' ಏನಾದಳು? 'ಮರಳು ಸರಪಣಿ' ಹೇಗಾಯಿತು? 'ಬೆದರು ಬೊಂಬೆ'ಯಲ್ಲಿ ಏನು ಮಾಡಿದರೆನ್ನುವ ಕುತೂಹಲ ಓದುಗರನ್ನು ಕಾಡಲಿಕ್ಕೆ ಶುರುಮಾಡುತ್ತದೆ.

ಇವರ ನಿರೂಪಣಾ ವಿಧಾನವೇ ಓದುಗರಿಗೆ ಹೇಗೆ ಮೆಚ್ಚುಗೆಯಾಗುತ್ತದೆ ಎನ್ನುವುದಕ್ಕೆ ನಿದರ್ಶನವಾಗಿ ಇವರ ಮೂರನೇ ಕೀಲಿಕೈ ಕಾದಂಬರಿಯಲ್ಲಿ ನೋಡಬಹುದು. ಇಲ್ಲಿ ಲೇಖಕರೇ ನುರಿತ ಪತ್ತೇದಾರರಾಗಿ ಪತ್ತೇದಾರಿ ಕಾದಂಬರಿಯ ಮುಖ್ಯ ಅಂಗಗಳಾದ ಕುತೂಹಲ, ಕೌತುಕ, ಕಾತರಗಳನ್ನು ಕೊನೆಯತನಕ ಎಳೆದುಕೊಂಡು ಹೋಗಿದ್ದಾರೆ. ಕಾದಂಬರಿಯನ್ನು ಓದುತ್ತಾ ಹೋದ ಹಾಗೆ ರಾಜಪ್ಪನ

ಕೊಲೆಯನ್ನು ಯಾರು ಮಾಡಿರಬಹುದು, ಕೊಲೆಗಾರ ಯಾರಿರಬಹುದು? ಎನ್ನುವ ಸಂಶಯ ಓದುಗರನ್ನು ಹಿಡಿದು, ಪ್ರಾರಂಭದಲ್ಲಿ ಶ್ರೀಧರ-ಕಲ್ಯಾಣಿ ಇಬ್ಬರು ಸೇರಿ ರಾಜಪ್ಪನ ಕೊಲೆ ಮಾಡಿರಬಹುದು ಎನ್ನುವ ಗುಮಾನಿ ಬಂದು ಮುಂದೆ ಓದುತ್ತಾ ಹಾಗೆ ಸೆವೆನ್ಸ್ ಹೆವೆನ್ ಹೋಟೆಲ್‌ನ ಕ್ಲಬ್ ಡ್ಯಾನ್ಸರ್ 'ನಾನ್ಸಿ' ಕೊಲೆ ಮಾಡಿರಬಹುದೆನ್ನುವ ಅನುಮಾನ ಓದುಗರಿಗೆ ಉಂಟಾಗುತ್ತದೆ. ಆದರೆ ಕೊಲೆ ಮಾಡಿರುವ ರಾಜಪ್ಪನ ಪತ್ನಿ ವನಜ ಹಾಗೂ ಅವಳ ಅಣ್ಣನೆಂದು ಹೇಳಿಕೊಳ್ಳುವ ಆಕೆಯ ಅನಧಿಕೃತ ಪತಿ ರಮಣರಾವ್ ಅವರ ಮೇಲೆ ಓದುಗರಿಗಾಗಲೇ, ಅಷ್ಟೇ ಏಕೆ ಪೋಲೀಸರಿಗಾಗಲೇ ಸಂಶಯವೇ ಬರುವುದಿಲ್ಲ.

ಕಾರಣ ಪೋಲೀಸರಿಂದ ಮುಚ್ಚಿ ಹೋಗಿದ್ದ ರಾಜಪ್ಪನ ಕೊಲೆಯ ರಹಸ್ಯವನ್ನು ಪತ್ತೆ ಹಚ್ಚಲಿಕ್ಕೆ ಕೊಲೆಗಾರರೇ ಲಾಯರನ್ನು ಕಂಡು ಹಣತೆತ್ತು ಕೇಸನ್ನು ಮುಂದುವರಿಸುವುದರಿಂದ, ಅವರು ಈ ರೀತಿ ಮಾಡಲಿಕ್ಕೆ ಕಾರಣ ಅನುಮಾನ ತಮ್ಮ ಮೇಲೆ ಬಾರದಿರಲಿ ಎನ್ನುವುದರ ಜೊತೆಗೆ ರಾಜಪ್ಪನ ಹಣಕ್ಕೆ ನಾಮಿನಿಯಾಗಿರುವ ವನಜಳಿಗೆ ದಕ್ಕಬೇಕಾದರೆ ರಾಜಪ್ಪನ ಸಾವು ಆಕಸ್ಮಿಕವೇ, ಕೊಲೆಯೇ? ಎನ್ನುವುದು ಸಾಬೀತಾಗಬೇಕು. ತಮ್ಮ ರಕ್ಷಣೆ ಮಾಡಿಕೊಳ್ಳಲಿಕ್ಕೆಂದು ಹಣತೆತ್ತು ತೊಡಗಿದ ಲಾಯರೇ ಕೀಲಿಕೈಗಳ ಬಗ್ಗೆ ತಲೆಕೆಡಿಸಿಕೊಂಡು ತಾನೇ ಪತ್ತೇದಾರನಾಗಿ ತನ್ನ ಕಕ್ಷಿದಾರರನ್ನು ಪೋಲೀಸರ ಅತಿಥಿಗಳನ್ನಾಗಿ ಮಾಡುತ್ತಾನೆ. ಇಂತಹ ನಿರೂಪಣೆಗಳನ್ನು ಕಂಡಾಗ ಎಂಥವರಿಗೂ ಮೆಚ್ಚುಗೆ ಉಂಟಾಗುತ್ತದೆ.

ಅತ್ಯಂತ ಶಿಸ್ತಿನ ಬರಹಗಾರರಾಗಿ, ಲೀಲಾಜಾಲವಾಗಿ ಕತೆಯನ್ನು ಹೇಳಿಕೊಂಡು ಹೋಗಿ ಜನಪ್ರಿಯರಾದ ಪತ್ತೇದಾರಿ ಕಾದಂಬರಿಕಾರರಾದ ರಾಯರು ಕೇವಲ ಕೊಲೆ, ದರೋಡೆ, ಅತ್ಯಾಚಾರದ ವಿಷಯಗಳನ್ನು ಬರೆಯುವಂತಹ ಕಠೋರ ಹೃದಯದ ಶುಷ್ಕ ವಿಚಾರ ಬರಡು ಜೀವಿಯಲ್ಲ, ಅವರೂ ಮನುಷ್ಯರೇ ಎಲ್ಲರಂತೆ ಅವರಲ್ಲಿಯೂ ಶೃಂಗಾರ, ಕರುಣ, ಹಾಸ್ಯವಿದೆ. ಓದುಗರ ಬುದ್ಧಿವಂತಿಕೆಗೆ ಸವಾಲೊಡ್ಡುವುದರ ಜೊತೆಗೆ ಪತ್ತೆ ಹಚ್ಚುವಲ್ಲಿ ಕಾದಂಬರಿ ನೀಡುವ ಬೌದ್ಧಿಕ ಕಸರತ್ತಿನಿಂದ ತೃಪ್ತಿಯುಂಟಾಗುತ್ತದೆ.

ಕೊಲೆಗಾರ ಯಾರು? ಕೊಲೆ ಹೇಗಾಯಿತು? ಎಂಬಷ್ಟಕ್ಕೆ ಸೀಮಿತರಾಗದ ರಾಮರಾವ್ ಅವರು ತಮ್ಮ ಕಾದಂಬರಿಗಳಲ್ಲಿ ಕೊಲೆ ಏಕಾಯಿತು? ಎನ್ನುವ ಮನೋ ವೈಜ್ಞಾನಿಕವಾದಂಥ ವಿಷಯಗಳಿಗೂ ಪ್ರಾಧಾನ್ಯ ನೀಡಿದ್ದಾರೆ. ಹಣ ಅಥವಾ ಆಸ್ತಿಗಾಗಿ ಕೊಲೆಯಾಗುವುದು ಇವರ ಕಾದಂಬರಿಗಳಲ್ಲಿ ಗೌಣ ಪ್ರಮಾಣವಾಗಿದೆ.

ಅಕ್ರಮ ಸಂಬಂಧ, ಅನೈತಿಕ ಸಂಬಂಧ ಹೊಂದಿರುವಂಥಾ ಪಾತ್ರಗಳ ಕೊಲೆಯಾಗುತ್ತದೆ. ಅಥವಾ ಆ ಪಾತ್ರಗಳ ಕೊಲೆ ಮಾಡಲಿಕ್ಕೆ ಉದ್ದೇಶವಾಗಿರುತ್ತದೆ. ಇಂಥಾ ವಿಷಯಗಳು ಮನೋವೈಜ್ಞಾನಿಕ ವಿಶ್ಲೇಷಣೆಗೆ ವಿಚಾರಕ್ಕೆ ಅವಕಾಶ ಮಾಡಿಕೊಡುತ್ತವೆ. ರಾಮರಾವ್ ಅವರ ಬಹುತೇಕ ಎಲ್ಲಾ ಪತ್ತೇದಾರಿ ಕಾದಂಬರಿಗಳ ಕೊಲೆಯಾದ ಪಾತ್ರಗಳನ್ನು ಕೊಲೆ ಮಾಡುವ ಪಾತ್ರಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು.

೧) ತಾವು ಹೊಂದಿರುವಂತಹ ಅಕ್ರಮ ಸಂಬಂಧಗಳಿಗೆ ಅಡ್ಡಿಯಾಗಿದ್ದು ಕೊಲೆಯಾಗುವ ಪಾತ್ರಗಳದು ಒಂದು ಗುಂಪು.

೨) ಅಕ್ರಮ ಸಂಬಂಧಕ್ಕೆ ಕಾರಣಕರ್ತರಾಗಿ ಕೊಲೆಯಾಗುವ ಪಾತ್ರಗಳದು ಮತ್ತೊಂದು ಗುಂಪು.

ಮೂರನೇ ಕೀಲಿಕೈನ ರಾಜಪ್ಪ, ತಾಳೆ ಹೂವಿನ ಅಂಜನರಾಯರು, ಕಪ್ಪುನಾಯಿಯ ಶಂಕರಪ್ಪ, ಬೆದರು ಬೊಂಬೆಯ ಹನಿಯೂರು ತೇಜಪ್ಪ ಈ ಪಾತ್ರಗಳೆಲ್ಲ ಅಕ್ರಮ ಸಂಬಂಧ ಹೊಂದಿದ್ದಂಥವರಿಗೆ ಅಡ್ಡಿಯಾಗಿದ್ದರಿಂದ ಕೊಲೆಯಾದವರ ಗುಂಪಿಗೆ ಸೇರುತ್ತಾರೆ.

ವಜ್ರದ ಕೊಂಬಿನ ದೀಪಕ್ ಪಾವನ್, ಗುಲಾಮ ಹೆಣ್ಣಿನ ಸಾವಂತರು ಅಕ್ರಮ ಸಂಬಂಧಕ್ಕೆ ಕಾರಣಕರ್ತರಾಗಿ ಕೊಲೆಯಾದವರ ವರ್ಗಕ್ಕೆ ಸೇರುತ್ತಾರೆ.

ರಹಸ್ಯ ಪತ್ರದ ಭಕ್ಷಿ ಹಾಗೂ ತೋರು ಬೆರಳಿನ ಜಾನಕಮ್ಮ, ಚೆಂಗಪ್ಪ ಇವರುಗಳು ಹಣ-ಆಸ್ತಿಗಾಗಿ ಕೊಲೆಯಾದವರು.

ಈ ಎಲ್ಲಾ ಪಾತ್ರಗಳ ಕೊಲೆಯ ಹಿಂದೆಲ್ಲ ಹೆಣ್ಣು ಗಂಡಿನ ಜೊತೆ ಸಹಾಯಕಳಾಗಿ, ಪ್ರಚೋದಕಳಾಗಿ, ಕಾರಣಕರ್ತಳಾಗಿ, ಜೊತೆ ಜೊತೆಯಾಗಿ ನಿಲ್ಲುತ್ತಾಳೆ. ಈ ವಿಷಯವು ಸಹ ವೈಜ್ಞಾನಿಕವಾಗಿ ಚರ್ಚಿಸಲಿಕ್ಕೆ (ಇಂಥಲ್ಲೆಲ್ಲಾ ಹೆಣ್ಣಿನ ಪಾತ್ರವೆಷ್ಟು) ಹಾಗೂ ಮಹಾ ಪ್ರಬಂಧವೊಂದಕ್ಕೆ ವಸ್ತುವಾಗಬಲ್ಲವು ಆಗುತ್ತದೆ.

ಕೊಲೆಗಾರರ ಸುತ್ತಲೂ ಇರುವ ನಿರಪರಾಧಿಗಳನ್ನೇ ಸಂದೇಹಿಸುವ ತಂತ್ರ ಹೆಚ್ಚು-ಕಡಿಮೆ ಇವರ ಎಲ್ಲ ಕಾದಂಬರಿಗಳಲ್ಲೂ ಕಾದಂಬರಿ ಯುದ್ಧಕ್ಕೂ ಪ್ರಭಾವಶಾಲಿಯಾಗಿ ಚಿತ್ರಿತವಾಗಿದೆ. ನಿದರ್ಶನಕ್ಕೆ ನೋಡುವುದಾದರೆ, 'ತಾಳೆಹೂ'ನಲ್ಲಿ ಕೊಲೆಯಾದ 'ನಂಜುಂಡ'ನನ್ನು ಆತನ ಸ್ನೇಹಿತ ಮೋಹನ ಮಾಡಿರಬಹುದು. ಆತ ಕೆಲಸಕ್ಕಿದ್ದ ಪೌಲ್ಟ್ರಿಫಾರಂನ ಮ್ಯಾನೇಜರ್ ಎಡ್ವಿನ್ ಕೊಂದಿರಬಹುದೆನ್ನುವ ಗುಮಾನಿ

ಬರುತ್ತದೆ. ಅನಂತರ ಮೋಹನನ ತಂಗಿ ಚಿತ್ರಾಳ ಪ್ರೇಮ ಲಾಯರ್ ಅರವಿಂದ ಕೊಲೆಗೈದಿರಬಹುದೆನ್ನುವ ಸಂಶಯ ಕಾಡುತ್ತದೆ. ಕುಡುಕನ ತಮ್ಮ ಧನಂಜಯ, ನಾದಿನಿಯ ಮರ್ಯಾದೆ ಮನೆತನದ ಗೌರವ ಕಾಪಾಡಲಿಕ್ಕೆ ಪ್ರಯತ್ನಪಟ್ಟು ಚಂದ್ರಮ್ಮ, ಚಿತ್ರಾಳನ್ನು ಒಲಿಸಿಕೊಳ್ಳಲಿಕ್ಕೆ, ಫೇವರ್ ಪಡೆಯಲಿಕ್ಕೆ ಡಾ. ವಾಗೀಶ್ ಹೇಗೆ ಎಲ್ಲರ ಮೇಲೂ ಸಂಶಯ ಬಂದು ಓದುಗರಿಗೆ ಎಲ್ಲರ ಮೇಲೂ ಸಂಶಯ ಬಂದು ಓದುಗರಿಗೆ ಎಲ್ಲರೂ ಅಪಾದಿತರಾಗಿ ಕಾಣುತ್ತಾರೆ. ಮುಂದೆ ಓದುತ್ತಾ ಹೋದ ಹಾಗೆ ಮತ್ತೊಂದು ಹೊಸ ವಿಷಯವನ್ನು ಲಾಯರ್ ಆನಂದ್ ತಿಳಿಸುತ್ತಾನೆ. ಆರು ಜನ ಅಪರಾಧಿಗಳನ್ನು ಗುರುತಿಸಿದ ನೀವು ಮತ್ತೊಬ್ಬ ವ್ಯಕ್ತಿಯನ್ನು ಮರೆತಿದ್ದೀರೆಂದು ಭಾರತ ಕೇಬಲ್ಸ್‌ಗೆ ಕರೆದುಕೊಂಡು ಹೋಗಿ ಅಂಜನರಾಯರ ಫೋಟೋ ತೋರಿಸಿದಾಗ ಎಲ್ಲರೂ ಚಕಿತರಾಗುತ್ತಾರೆ. ಚಂದ್ರಮ್ಮನ ಜೊತೆ ಮಾತನಾಡುತ್ತಾ ಅಂಜನರಾಯರ ಹೆಣದ ಜೊತೆ ಹೇಗೆ ಮಾತನಾಡಿದಿರಿ ಎಂದು ಪ್ರಶ್ನಿಸಿದಾಗ ಎಲ್ಲರೂ ಸ್ತಬ್ಧರಾಗುತ್ತಾರೆ. ಕೊಲೆಯಾದವ ನಂಜುಂಡನಲ್ಲಿ ಅಂಜನರಾಯರ ಕೊಲೆ ನಿರೀಕ್ಷಿತವಲ್ಲ; ಅನಿರೀಕ್ಷಿತ. ಆಮೇಲೆ ನಡೆದಲ್ಲೆಲ್ಲಾ ಯೋಜಿತ ಎನ್ನುವ ವಿಷಯವನ್ನು ಲಾಯರ್ ಅರವಿಂದ ಪತ್ತೇದಾರನಾಗಿ ಬಯಲು ಮಾಡುತ್ತಾನೆ.

ಹಾಗೆಯೇ ಕಪ್ಪುನಾಯಿಯ ಶಂಕರಪ್ಪ ಕೊಲೆಯಲ್ಲೂ ಇದೇ ರೀತಿಯ ಸಂಶಯಗಳು ಶಂಕರಪ್ಪನ ಸುತ್ತಲೂ ಸುತ್ತುವ ಪಾತ್ರಗಳ ಮೇಲೆಲ್ಲಾ ಬರುತ್ತದೆ. ಶಂಕರಪ್ಪನಿಗಾಗದವರು ಯಾರೆಂದು ಮಗ ನಟರಾಜನನ್ನು ವಿಚಾರಿಸಿದಾಗ ಅಪ್ಪನ ಅನಧಿಕೃತ ಪತ್ನಿ ಸರೋಜಮ್ಮ ಹಾಗೂ ಆಕೆಯ ತಮ್ಮ ಲೋಕೇಶ್ ಮಾಡಿರಬಹುದೆನ್ನುತ್ತಾನೆ. ಭಾವನ ಆಸ್ತಿಗೆ ದುರಾಜನೇ ಭಾದ್ಯಸ್ತ ಭಾವ ನಮ್ಮಕ್ಕನಿಗೆ ಹಣ ಆಸ್ತಿ ಕೊಡುವುದನ್ನೆಲ್ಲ ಕಂಡಿದ್ದ ನಟರಾಜ ಅದಕ್ಕೆಲ್ಲ ಮುಕ್ತಿ ಕಾಣಿಸಲಿಕ್ಕೆ ನಮ್ಮ ಭಾವನನ್ನು ಮುಗಿಸಿದ್ದಾನೆ ಎಂದು ಲೋಕೇಶ್ ಹೇಳುತ್ತಾನೆ. ಆಮೇಲೆ ಶಂಖನಾದ ಪತ್ರಿಕೆಯ ಸಂಪಾದಕ ಗುಂಡಣ್ಣ ಶಂಕರಪ್ಪನ ಹತ್ತಿರ ಹತ್ತು ಸಾವಿರ ಸಾಲ ಮಾಡಿದ್ದರಿಂದ ಕೊಂದಿರಬಹುದೆನ್ನುವ ಸಂಶಯ ಬರುತ್ತದೆ ಇನ್ಸ್‌ಪೆಕ್ಟರ್‌ಗೆ ಜನತಾ ಬಜಾರಿನ ಸೇಲ್‌ಮನ್ ಬಾಲಯ್ಯ ಶಂಕರಪ್ಪನ ಜೊತೆ ಆಟವಾಡುತ್ತಿದ್ದವನು ಕೊಲೆ ಮಾಡಿದ್ದನೆಂದು ಗುಂಡ್ಲೂ ತಿಳಿಸಿದ್ದರೆ, ಹೋಟೆಲ್‌ನಲ್ಲಿ ತಂಬಿಯ ವಿಚಾರಣೆ ಮಾಡಿದಾಗ ಸಂಪಾದಕ ಗುಂಡಣ್ಣನ ಎಲೆಗಳನ್ನು ನೋಡಿಕೊಂಡು ಆಟವಾಡುತ್ತಿದ್ದ ತಪ್ಪಿಗೆ ತನಗೆ ಶಿಕ್ಷೆ ಮಾಡಿದ್ದ, ಆದರೆ ಅದು ಕೊಲೆ ಮಾಡೋ ಮಟ್ಟಕ್ಕೆ ಹೋಗುವಂತಾದ್ದಲ್ಲವೆನ್ನುತ್ತಾನೆ. ಆ ಮೇಲೆ

ಆಡುಗೋಡಿ ತಡಿಕೆ ಸಿನಿಮಾ ಮ್ಯಾನೇಜರ್ ಮೇಲುಕೋಟೆ ಎಡೂರಯ್ಯನ ಮೇಲೆ ಸಂಶಯ ಬಂದು ಕೊಲೆ ಮಾಡುವುದು ಅಸಂಭವವೆನ್ನುವ ತೀರ್ಮಾನಕ್ಕೆ ಬರುತ್ತಾರೆ.

ಶವ ಪರೀಕ್ಷೆಯ ವರದಿ ಬಂದ ಮೇಲೆ ಶಂಕರಪ್ಪ ಹೊಟ್ಟೆಯಲ್ಲಿ ಹೇರ್‌ಪಿನ್ ಹಾಗೂ ಗಂಟಲಿನಲ್ಲಿ ಕೀಯೊಂದು ಸಿಕ್ಕಿದೆ ಎನ್ನುವ ವಿಷಯ ತಿಳಿಯುತ್ತದೆ. ಶಂಕರಪ್ಪನ ಕೊಲೆಯ ವಿಷಯದಲ್ಲಿ ಆಸ್ತಿ ಸೋರಿ ಹೋಗುವುದನ್ನು ತಡೆಯಲು ಮಗ ನಟರಾಜ ತನಗೆ ಆಸ್ತಿ ದೊರಕುವುದಿಲ್ಲವೆಂದು ಭಾವ ಲೋಕೇಶ್ ವಯಸ್ಕರ ಪ್ರಣಯದಿಂದ ಬೇಸರ ಹೊಂದಿದ ಟೈಪಿಸ್ಟ್ ನಂದಾ, ಅಧಿಕೃತ ಪತ್ನಿ ಸರೋಜಮ್ಮ, ಕಾಫಿ ಸರಬರಾಜು ಮಾಡುವ ನಲ್ಲಿ ತಂಬಿ, ಹತ್ತು ಸಾವಿರ ದಕ್ಕಿಸಿಕೊಳ್ಳುವ ಸಂಪಾದಕ ಗುಂಡಣ್ಣ, ಕ್ಲಬ್ ಬರ್ಡ್ ಬ್ಯಾಲಯ್ಯ ಸೇಡು ತೀರಿಸಿಕೊಳ್ಳುವ ಆಳು ಸಿಂಗ್ರಿ, ಮ್ಯಾನೇಜರ್ ಎಡೂರಯ್ಯ ಈ ಒಂಭತ್ತು ಮಂದಿಯ ಮೇಲೆ ಸಂಶಯ ಬರುತ್ತದೆ.

ಕೊಲೆಯಾದ ಶಂಕರಪ್ಪ ಉದ್ದೇಶ ಪೂರ್ವಕವಾಗಿ ಹೇರ್‌ಪಿನ್, ಕೀಯನ್ನು ನುಂಗಿ ಅದರ ಮೂಲಕ ಕಥೆ ಹೇಳಿ ಕೊಲೆಗಾರರ ಪತ್ತೆ ಹಚ್ಚಲಿಕ್ಕೆ ಸಹಾಯವಾಗುತ್ತದೆ. ಈ ಮೂಲಕ ಮನೆಯಲ್ಲಿರುವ ಹತ್ಯಾಕಾರಿ ಕಡೆ ಕೈತೋರಿಸಿದಂತಾಗುತ್ತದೆ. ನಂದಾಳ ಪರ್ಸನಲ್ ಡ್ರಾದ ಡೂಪ್ಲಿಕೇಟ್ ಕೀ ಎರಡು ಪ್ರಣಯಗಳು (ನಂದಾ ಹಾಗೂ ಲೋಕೇಶ್ ಇಬ್ಬರೂ) ಸೇರಿ ಶಂಕರಪ್ಪನ ಕೊಲೆ ಮಾಡುತ್ತಾರೆ. ಇಲ್ಲೂ ಕೊಲೆಗೆ ಕಾರಣ ಆಸ್ತಿಯಲ್ಲ ಪ್ರೇಮ. ಇಂಥಾ ನಮೂನೆಯ ತಂತ್ರಗಳು ರಾಮರಾವ್ ಅವರ ಎಲ್ಲಾ ಕಾದಂಬರಿಗಳಲ್ಲೂ ಕಾಣಸಿಗುತ್ತದೆ.

ಓದುಗರಿಗೆ ಬೇಸರ ಉಂಟಾಗದಂತ್ತೆ ಮಾಡಲು ಸ್ಥಳೈಕ್ಯವು ಪ್ರಮುಖವಾದುದಾಗಿದೆ. ತಮ್ಮ ಕಾದಂಬರಿಗಳಲ್ಲಿ ರಾಮರಾವ್ ಅವರು ತಾವು ಕಂಡ ಊರು, ದೇಶ, ಭೌಗೋಳಿಕ ವಿವರಗಳನ್ನು ಸೊಗಸಾಗಿ ಬೆರೆಸುತ್ತಿದ್ದರೆಂಬುದಕ್ಕೆ ನಿದರ್ಶನವಾಗಿ 'ತೋರು ಬೆರಳು' ಕಾದಂಬರಿಯಲ್ಲಿ ಬರುವ ಕಣ್ವ ಪ್ರವಾಸಿ ಮಂದಿರ, ಚನ್ನಪಟ್ಟಣದ ಪೋಲೀಸ್ ಸ್ಟೇಷನ್, ಬಿಡದಿ ಪೋಲೀಸ್ ಸ್ಟೇಷನ್, ನೇರಳೂರು ಕೆರೆ (ಕಂಟ್ರಾಕ್ಟ್ ಮಾಡಿಸುವುದು) ಕೆಂಗಲ್ ದೇವಸ್ಥಾನ (ಬೆರಳು ಸಿಗುವುದು) ಸುಗ್ಗನಹಳ್ಳಿ ರಸ್ತೆ (ಹೆಣ ಸಿಗುವುದು) 'ಬೆದರು ಬೊಂಬೆ' ಇಲ್ಲಿ ಬರುವ ಹನಿಯೂರು, ಲಕ್ಕಸಂದ್ರ ಇವುಗಳು ಮುಖ್ಯವಾಗಿರುತ್ತದೆ.

ಕರ್ತವ್ಯ ಪಾಲಿಸುವವರು ಕೊಂಚ ಯಾಮಾರಿದರೂ ಬೇಜವಾಬ್ದಾರಿಯಿಂದ ವರ್ತಿಸಿದರೆಂದೆಂಥಾ ಅನಾಹುತವಾಗುತ್ತದೆ ಎನ್ನುವುದನ್ನು ಬೆದರು ಬೊಂಬೆ

ಕಾದಂಬರಿಯಲ್ಲಿ ನಿರೂಪಿಸಿದ್ದಾರೆ. ಜೊತೆಗೆ ಲಂಚದಾಸೆಗಾಗಿ ಏನೇನೂ ನಡೆಯಬಲ್ಲದು ಎಂಬುದನ್ನು ಮನವರಿಕೆ ಮಾಡಿಕೊಡುತ್ತಾರೆ. ಕಾರ್ಯಕರಣ ಸಂಬಂಧದ ಅನಿವಾರ್ಯದ ಅಡಿಪಾಯದ ಮೇಲೆ ನಿಂತಿರುವ ತರ್ಕಬದ್ಧತೆಯ ಅನುಸರಣೆಯಿಂದ ಎಂಥ ರಹಸ್ಯವನ್ನಾದರೂ ಭೇದಿಸಲು ಸಾಧ್ಯ ಎಂಬ ವಿಶ್ವಾಸವೇ ಪತ್ತೇದಾರಿ ಕಾದಂಬರಿಗಳ ಮೂಲಕತ್ವ ಅದನ್ನು ರಾಮರಾವ್ ಅವರು ಯಶಸ್ವಿಯಾಗಿ ಸಾಧಿಸಿದ್ದಾರೆ. ಮನುಷ್ಯನ ಮನಸ್ಸಿನಂತರಾಳದಲ್ಲಿ ಹುದುಗಿರುವ ಪ್ರಬಲ ಆಕಾಂಕ್ಷೆಗಳಿಗೆ ಅಭಿವ್ಯಕ್ತಿ ಕೊಡುವಂತಹವು ಎಂಬುದನ್ನು ರಾಮರಾವ್ ಅವರ ಕಾದಂಬರಿಗಳಲ್ಲಿ ಕಂಡುಬರುವ ಅದ್ಭುತ ರಮ್ಯ ಅಂಶಗಳು ಮನವರಿಕೆ ಮಾಡಿಕೊಡುತ್ತವೆ.

ಟಿ.ಕೆ. ರಾಮರಾವ್ ರವರು ಪತ್ತೇದಾರಿ ಕಾದಂಬರಿಗಳಲ್ಲಿ ಎರಡು–ಮೂರು ಅಂಶಗಳು ಎದ್ದು ಕಾಣುತ್ತದೆ. ಸೊಗಸಾದ ಶೈಲಿಯ ಬರವಣಿಗೆ, ಆತ್ಮೀಯ–ಸರಳ ಚೌಕಟ್ಟು ಮೊದಲಿನಿಂದ ಕೊನೆಯವರೆವಿಗೂ ಕುತೂಹಲವನ್ನು ಉಳಿಸಿಕೊಂಡು ಹೋಗುವುದರ ಜೊತೆಗೆ, ಪರಿಪೂರ್ಣವಾಗಿ ಸ್ಥಳೀಯ ಮೆರಗು, ಸ್ಥಳೀಯ ಭಾಷೆ, ಸುಪರಿಚಿತ ಸ್ಥಳ ನಾಮಗಳ ಬಳಕೆ ಮತ್ತೆ ಖಚಿತವಾದ ತಾಂತ್ರಿಕ ಮತ್ತು ಕಾನೂನು ವಿವರಗಳು, ಎಲ್ಲೂ ಅಧ್ಯಾಯಗಳನ್ನು, ಆಗು–ಹೋಗುಗಳನ್ನು ಎಳೆಯುತ್ತಿರಲಿಲ್ಲ. ಚೊಕ್ಕವಾದ–ಸುಂದರವಾದ, ಒಂದೇ ಅಳತೆಯ ಅಧ್ಯಾಯಗಳು. ಅವರ ಕಾದಂಬರಿಗಳಲ್ಲಿ ಯಾವುದೊಂದು ಸಿಕ್ಕು ಇರುತ್ತಿರಲಿಲ್ಲ. ಓದುಗರಿಗೆ ಕುತೂಹಲ ತಣಿಸುವ, ಮನರಂಜನೆ ನೀಡುವ ಪತ್ತೇದಾರಿ ಕಾದಂಬರಿಗಳನ್ನು ಅವರು ರಚಿಸಿದರು.

ಆದರೆ, ಹೀಗೆಂದು ಅವರು ಅಸಹಜ ಘಟನೆಗಳನ್ನು ಸೃಷ್ಟಿಸಲಿಲ್ಲ. ತಮ್ಮ ಪತ್ತೇದಾರರನ್ನು ಜೇಮ್ಸ್ ಬಾಂಡ್ ಮಾಡಲಿಲ್ಲ. ಆದರೆ, ಜೇಮ್ಸ್ ಹ್ಯಾಡ್ಲಿ ಚೇಸ್, ಅರ್ತರ್ ಕನನ್ ಡಾಯ್ಲ್, ಅರ್ಲ್ ಸ್ಟಾನ್ಲಿ ಗಾರ್ಡನರ್ ಅಂತಹ ಅದ್ಭುತ ಪತ್ತೇದಾರಿ ಕಾದಂಬರಿಕಾರರ ಶೈಲಿ–ನಡೆಯನ್ನು ಉಪಯೋಗಿಸಿಕೊಂಡರು. ಸಾಹಸಗಳು, ಕತ್ತಿ–ಚಾಕು, ಪಿಸ್ತೂಲು–ರಕ್ತ ಮೊದಲಾದವುಗಳಿಗಿಂತಲೂ ಜಾಣತನದ, ತಾರ್ಕಿಕವಾದ, ಅತಿಸಹಜವಾದ ರೀತಿಯಲ್ಲಿ ಪತ್ತೇದಾರ–ಪೋಲೀಸ್ ಅಧಿಕಾರಿ ಆಗಿಸಿಕೊಂಡರು. ಅತಿ ಸಹಜವಾಗಿ, ತರ್ಕಬದ್ಧವಾಗಿ ಆಗು–ಹೋಗುಗಳನ್ನು ಹೆಣೆಯುತ್ತ ಹೋಗಿ, ಕಟ್ಟಕಡೆಗೆ ದಿಢೀರ್ ಎಂದು ಮುಕ್ತಾಯವೊಂದನ್ನು ನೀಡುವ ಸಿದ್ಧ ಪತ್ತೆದಾರಿ ಶೈಲಿ ಅವರಿಗೆ ಬಹಳ ಚೆನ್ನಾಗಿ ಕರಗತವಾಗಿತ್ತು.

ಕಾದಂಬರಿ ಪ್ರಪಂಚದಲ್ಲಿ ಅ.ನ.ಕೃ. ರವರನ್ನು ಕಾದಂಬರಿ ಸಾರ್ವಭೌಮರೆಂದು ಕರೆದ ಹಾಗೆ, ಪತ್ತೇದಾರಿ ಕಾದಂಬರಿ ಸಾಲಿನಲ್ಲಿ ಟಿ.ಕೆ.ರಾಮರಾವ್ ರವರನ್ನು "ಪತ್ತೇದಾರಿ ಕಾದಂಬರಿ ಸಾರ್ವಭೌಮ"ರೆಂದು ಕರೆದರೆ ಅತಿಶಯೋಕ್ತಿಯಾಗಲಾರದು.

ಅಧ್ಯಾಯ – ៤

ಟಿ.ಕೆ. ರಾಮರಾವ್ ಅವರ ಕಾದಂಬರಿಗಳಲ್ಲಿ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಘರ್ಷ

ಸಂಸ್ಕೃತಿ ಎಂಬುದು ಸಮಾಜ ವಿಜ್ಞಾನಿಗಳ ಪ್ರಮುಖ ಕಲ್ಪನೆಗಳಲ್ಲೊಂದು, ಮನುಷ್ಯರ ಅನ್ಯೋನ್ಯ ಸಂಬಂಧಗಳಲ್ಲಿ ನಯವಿನಯಗಳ ಸೊಬಗು, ಸ್ವಗುಣ-ಪರಗುಣಗಳ ಸಂಮಿಶ್ರಿತ ಕಾಂತಿ, ಈ ಸಂಸ್ಕೃತಿ ಮೂಲದಲ್ಲಿ ನಮ್ಮ ಅಂತರಂಗ ಜೀವನಕ್ಕೆ ಸಂಬಂಧಪಟ್ಟದ್ದು, ಅದು ನಮ್ಮ ಒಳಸಂಪತ್ತು, ಅದರ ಜಾಗ ಮನಸ್ಸು ಮತ್ತು ಹೃದಯ, ಅದರಿಂದ ಬೇರೆಯಾದದ್ದು ನಮ್ಮ ಬಹಿರಂಗ ಜೀವನ. ನಮ್ಮ ಸಂಸ್ಕೃತಿ ಪರಂಪರೆಗಳು ಭವ್ಯವಾದವು, ಪುರಾತನವಾದವು, ಜಾಗತೀಕರಣದಿಂದ ಅವುಗಳ ಮೇಲೆ ಆಕ್ರಮಣವಾಗುತ್ತಿದೆ. ನಾವು ಅವನ್ನು ರಕ್ಷಿಸಬೇಕು. ಇಂಥ ಮಾತುಗಳನ್ನು ಸಾಮಾನ್ಯವಾಗಿ ಕೇಳುತ್ತೇವೆ. ಇವನ್ನು ಧಾರ್ಮಿಕ ನಾಯಕರು, ರಾಜಕಾರಣಿಗಳು ಮಾತ್ರವಲ್ಲ ವಿದ್ವಾಂಸರೂ ಆಡುತ್ತಾರೆ. ಈ ಮಾತುಗಳನ್ನು ಕೇಳುವಾಗ 'ಸಂಸ್ಕೃತಿ'ಯ ಬಗ್ಗೆ ತಟ್ಟನೆ ಮನಸ್ಸಿನಲ್ಲಿ ಮೂಡುವ ಭಾವವೆಂದರೆ ಸಂಸ್ಕೃತಿ ಎಂಬುದು ನಮ್ಮ ಧರ್ಮದ ಅಥವಾ ದೇಶದ ಒಂದು ಸಾಂಕೇತಿಕ ಗುರುತು. ಅದು ಪವಿತ್ರವೂ ಪ್ರಾಚೀನವೂ ಆದುದು, ಹಿರೀಕರಿಂದ ಬಂದಿದ್ದು, ನಾವದನ್ನು ಆದರಿಸಬೇಕು, ಅನುಸರಿಸಬೇಕು, ಮಾತ್ರವಲ್ಲ ಅದನ್ನು ಅನ್ಯರ ಆಕ್ರಮಣಗಳಿಂದ ರಕ್ಷಿಸಬೇಕು ಇತ್ಯಾದಿ.

ಇವೆಲ್ಲಾ ಸಂಸ್ಕೃತಿಗೆ ಇರುವ ಸಾಮಾನ್ಯವೂ ಜನಪ್ರಿಯವೂ ಆದ ಅರ್ಥದಿಂದ ಹುಟ್ಟಿದ ಅಭಿಪ್ರಾಯಗಳು ಬಹಳ ವಿಸ್ತಾರವಾದ ಅರ್ಥವನ್ನು ನೀಡಲಾಗಿದೆ. ಸಮಾಜದಲ್ಲಿ ಸಂಸ್ಕೃತಿಯು ಮೂಲಭೂತ ಕಲ್ಪನೆಗಳಲ್ಲೊಂದಾಗಿದ್ದು, ಸಮಾಜದ ಅಧ್ಯಯನವೆಂದರೆ ಸಂಸ್ಕೃತಿಯ ಅಧ್ಯಯನವೇ ಆಗಿದೆ. ಸಂಸ್ಕೃತಿಯು ಮಾನವ ಸಮಾಜದ ಉಸಿರು, ಅದು ಮಾನವನ ಸಮೂಹ ಜೀವನದ ಅಭಿವ್ಯಕ್ತಿ. ಸಂಸ್ಕೃತಿ ಮತ್ತು ಸಮಾಜ ಇವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಒಂದನ್ನು ಬಿಟ್ಟು ಇನ್ನೊಂದು ಇರಬಾರದು. ಇವುಗಳ ನಂಟು ಬಿಡಿಸಲಾಗದ ಗಂಟು. ಅಂತೆಯೇ ಸಂಸ್ಕೃತಿಯ ಹೊರತಾಗಿ ಸಮಾಜದ ಅಧ್ಯಯನ ಅಸಾಧ್ಯ.

ಮಾನವನು ಸಮೂಹ ಜೀವಿಯಾಗಿ ಇತರರೊಂದಿಗೆ ಸಮರಸಗೊಂಡು ಜೀವಿಸುವಂತಹ ಪರಿಸರವನ್ನು ನಿರ್ಮಿಸುವುದು ಸಂಸ್ಕೃತಿ, ಮಾನವನು ಸಂಘಜೀವಿ

ಮಾತ್ರವಲ್ಲ ಸಾಂಸ್ಕೃತಿಕ ಜೀವಿಯೂ ಹೌದು. ಆತನ ವ್ಯಕ್ತಿತ್ವವು ಬೆಳವಣಿಗೆ ಹೊಂದುವುದು ಕೂಡ ಸಾಂಸ್ಕೃತಿಕ ಪರಿಸರದಲ್ಲಿ. ಆತನ ಆಂತರಿಕ ಶಕ್ತಿ ಸಾಮರ್ಥ್ಯಗಳು ಬಹಿರಂಗವಾಗಿ ಪ್ರಕಟವಾಗಲು ವೇದಿಕೆಯನ್ನು ನಿರ್ಮಿಸಿ ಕೊಡುವುದೂ ಸಂಸ್ಕೃತಿ.

ಸಂಸ್ಕೃತಿಯು ಮಾನವನ ಅನುಪಮವಾದ ಹಾಗೂ ವಿಶಿಷ್ಟವಾದ ಆಸ್ತಿ. ಅದು ಮಾನವ ಸಮಾಜದ ಗುಣಲಕ್ಷಣಗಳಲ್ಲೊಂದಾಗಿದೆ. ಮಾನವನಿಗಿಂತಲೂ ಕೆಳಮಟ್ಟದಲ್ಲಿ ಅರ್ಥಾತ್ ಪ್ರಾಣಿಗಳ ಮಟ್ಟದಲ್ಲಿ ಸಂಸ್ಕೃತಿಯು ಅಸ್ತಿತ್ವದಲ್ಲಿಲ್ಲ. ಪ್ರಾಣಿಗಳು ನೈಸರ್ಗಿಕ ಪರಿಸರದಲ್ಲಿ ಬದುಕುವುದಾದರೆ ಮಾನವನು ಮಾತ್ರ ಸಾಂಸ್ಕೃತಿಕ ಪರಿಸರದಲ್ಲಿ ಬದುಕುತ್ತಾನೆ. ಮಾನವನು ಸಮಾಜದಲ್ಲಿಯೇ ಹುಟ್ಟಿ ಬೆಳೆಯುವನು ಎಂಬ ಮಾತು ಮಾನವನು ಸಂಸ್ಕೃತಿಯ ಅಳಿವಿನಲ್ಲಿ ಹುಟ್ಟಿ ಬೆಳೆಯುವನು ಎನ್ನುವುದಕ್ಕೆ ಸರಿಸಮಾನವಾಗಿದೆ ಎನ್ನಬಹುದು. ಅದರಂತೆಯೇ ಮಾನವನು 'ಸಮೂಹಜೀವಿ' ಎನ್ನುವುದು 'ಮಾನವನು ಸಾಂಸ್ಕೃತಿಕ ಜೀವಿ' ಎನ್ನುವುದಕ್ಕೆ ಪರ್ಯಾಯವಾಗಿದೆ. ಪ್ರತಿಯೊಬ್ಬ ವ್ಯಕ್ತಿಯನ್ನೂ ಸಂಸ್ಕೃತಿಯ ಓರ್ವ ಪ್ರತಿನಿಧಿ ಎನ್ನಬಹುದು.

ಸಂಸ್ಕೃತಿಯು ಬಹು ಅರ್ಥವ್ಯಾಪ್ತಿಯುಳ್ಳ ಕಲ್ಪನೆಯಾಗಿದೆ. ಸಂಸ್ಕೃತಿಯು ಮಾನವನ ಜೀವನ ವಿಧಾನದ ಪ್ರತೀಕ ಅಥವಾ ಜೀವಿತಕ್ರಮದ ಓರೆಗಲ್ಲು. ಸಂಸ್ಕೃತಿಯು ನಮ್ಮ ನಡತೆಯನ್ನು, ನಮ್ಮ ದರ್ಶನ ಹಾಗೂ ನೈತಿಕತೆಯನ್ನು ನಮ್ಮ ರೂಢಿ-ಸಂಪ್ರದಾಯಗಳನ್ನು, ನಂಬಿಕೆ-ಆಚರಣೆಗಳನ್ನು ಮೌಲ್ಯಾದರ್ಶನಗಳನ್ನು, ನಮ್ಮ ಧಾರ್ಮಿಕ, ರಾಜಕೀಯ, ಆರ್ಥಿಕ ಮೊದಲಾದ ಚಟುವಟಿಕೆಗಳನ್ನು ಒಳಗೊಂಡಿದೆ. ತನ್ನ ವ್ಯಕ್ತಿಗತ ಹಾಗೂ ಸಾಮಾಜಿಕ ಜೀವನದಲ್ಲಿ ಮಾನವನು ಸಂಪಾದಿಸಿರುವ ಎಲ್ಲಾ ಅಂಶಗಳನ್ನು ಒಳಗೊಂಡಿರುವುದು.

"ಸಂಸ್ಕೃತಿಯು ನಮ್ಮ ಜೀವನ ಶೈಲಿಯ, ಮೌಲ್ಯಗಳು, ಭಾವನಾತ್ಮಕ ಬಂಧನಗಳ ಹಾಗೂ ಭೌದ್ಧಿಕ ಸಾಧನಗಳ ಪ್ರಪಂಚವೇ ಆಗಿದೆ". ಸಂಸ್ಕೃತಿಯ ಮಾನವನು ತನ್ನ ಸಮಾಜದಿಂದ ಪಡೆದಿರುವ ಸಾಮಾಜಿಕ ಪರಂಪರೆಯಾಗಿದೆ ಎಂದು ಮೆಕೈವರ್ ಮತ್ತು ಪೇಜ್ ಹೇಳಿದ್ದಾರೆ.

"ಜ್ಞಾನ, ನಂಬುಗೆ, ಕರೆ, ನೈತಿಕ ನಿಯಮ, ಕಾನೂನು, ರೂಢಿ ಮತ್ತು ಮಾನವನು ತನ್ನ ಸಮಾಜದ ಸದಸ್ಯನಾಗಿದ್ದುಕೊಂಡು ಸಾದಿಸಿದ ಇನ್ನುಳಿದ ಸಾಮರ್ಥ್ಯಗಳನ್ನೂ ನೈಪುಣ್ಯಗಳನ್ನೂ ಒಳಗೊಂಡಿರುವ ಅಖಂಡವಾದ ಒಂದು ಸಂಕೀರ್ಣ ವ್ಯವಸ್ಥೆ" ಎಂದು ಎ.ಬಿ. ಟೈಲರ್ ಹೇಳಿದ್ದಾರೆ.

ಕನ್ನಡದ ಸಾಂಸ್ಕೃತಿಕ ಅಧ್ಯಯನಗಳ ಹಿನ್ನೆಲೆಯಲ್ಲಿರುವ ಸಂಸ್ಕೃತಿ ಚಿಂತಕರು ನಾನಾ ದೇಶಭಾಷೆಗಳಿಗೂ ಕಾಲಘಟ್ಟಗಳಿಗೂ ಸಂಬಂಧಪಟ್ಟವರು. ಹೆಚ್ಚಿನವರು ಯೂರೋಪಿನವರು. ಅವರಲ್ಲಿ ರಾಜಕೀಯ, ಸಾಮಾಜಿಕ ಚಿಂತಕರು, ತತ್ವಶಾಸ್ತ್ರಿಗಳು, ಮಾನವಶಾಸ್ತ್ರಜ್ಞರು ಇದ್ದಾರೆ. ಎಂತಲೇ ಸಾಂಸ್ಕೃತಿಕ ಅಧ್ಯಯನಗಳ ಮೂಲಭೂತವಾಗಿ ಸಾಮಾಜಿಕ, ರಾಜಕೀಯ ವಿಚಾರ ಪ್ರಣಾಲಿಕೆಗಳನ್ನು ಒಳಗೊಂಡಿರುವುದು. ಕನ್ನಡ ಸಾಂಸ್ಕೃತಿಕ ಚಿಂತಕರ ಮುಖ್ಯ ಲಕ್ಷಣವೆಂದರೆ ಹೆಚ್ಚಿನವರು ಸಾಹಿತ್ಯ ಕ್ಷೇತ್ರದಿಂದ ಬಂದವರು. ಕನ್ನಡ ಸಂಸ್ಕೃತಿ ಚಿಂತನೆ ಸಾಮಾಜಿಕವಾಗಿ ಉಚ್ಚಜಾತಿಯ ಚಿಂತಕರಿಂದ ಪ್ರಾರಂಭವಾಗಿದೆ.ನಂತರದ ಘಟ್ಟಗಳಲ್ಲಿ ಕೆಳಸ್ತರದಿಂದ ಚಿಂತಕರು ಪ್ರವೇಶ ಮಾಡುತ್ತಾ ಬಂದಿದ್ದಾರೆ. ಕನ್ನಡದ ಸಂಸ್ಕೃತಿ ಚಿಂತನೆ ಹಾಗೂ ಸಾಂಸ್ಕೃತಿಕ ಅಧ್ಯಯನಗಳ ಮೇಲೆ ಪ್ರಭಾವ ಚೆಲ್ಲಿರುವ ವಿದ್ವಾಂಸರನ್ನು ಬಿಡಿ-ಬಿಡಿಯಾಗಿ ನೋಡುವುದಕ್ಕಿಂತ, ಅವರು ಪ್ರತಿನಿಧಿಸುವ ಚಿಂತನೆಯ ಧಾರೆಯೊಳಗಿಟ್ಟು ನೋಡುವುದು ಉಪಯುಕ್ತ.

ಸಂಸ್ಕೃತಿಯ ಅಧ್ಯಯನದ-ಚಿಂತನೆಯ ತಾತ್ವಿಕ ಸ್ವರೂಪ ಆಧಾರದ ಮೇಲೆ ಇವರನ್ನು ನೈತಿಕ ಆದರ್ಶವಾದಿಗಳು, ಮಾನವಶಾಸ್ತ್ರದವರು, ಮಾರ್ಕ್ಸ್‌ವಾದಿಗಳು, ಸಮಾಜಶಾಸ್ತ್ರಜ್ಞರು, ಪೌರ್ವಾತ್ಯವಾದಿಗಳು, ಸ್ತ್ರೀವಾದಿಗಳು, ವಸಾಹತೋತ್ತರ ಚಿಂತಕರು, ಆಧುನಿಕೋತ್ತರ ಚಿಂತಕರು ಎಂದು ವಿಂಗಡಿಸಬಹುದು.

ಇಂಗ್ಲೆಂಡಿನ ಮ್ಯಾಥ್ಯೂ ಆರ್ನಲ್ಡ್ ಒಬ್ಬ ನೈತಿಕ ಆದರ್ಶವಾದಿ ಸಾಂಸ್ಕೃತಿಕ ಅಧ್ಯಯನದ ಚಿಂತಕ. ಪಶ್ಚಿಮದ ಸಂಸ್ಕೃತಿ ಚಿಂತಕರು ಇವನನ್ನು ವಿಮರ್ಶಿಸದೆ ಮುಂದಡಿ ಇಡುವುದಿಲ್ಲ. ಡಿವಿಜಿಯವರಿಂದ ಹಿಡಿದು ಕುವೆಂಪು ತನಕ, ಕನ್ನಡದ ಬಹುತೇಕ ಸಂಸ್ಕೃತಿ ಚಿಂತಕರ ಮೇಲೆ ಈತನ ಗಾಢ ಪ್ರಭಾವವಿದೆ. ಇವರ ಪ್ರಸಿದ್ಧ ಕೃತಿ "ಕಲ್ಚರ್ ಅಂಡ್ ಆ್ಯನಾರ್ಕಿ ಕವಿಯೂ ಶಿಕ್ಷಣ ತಜ್ಞನೂ ಆಗಿದ್ದ ಆರ್ನಲ್ಡ್ ತನ್ನ ಕಾಲದ ಇಂಗ್ಲೆಂಡಿನ ಸಾಮಾಜಿಕ ಸನ್ನಿವೇಶಗಳಿಗೆ ಪ್ರತಿಕ್ರಿಯಿಸುತ್ತ ತನ್ನ ಚಿಂತನೆ ಮಂಡಿಸಿದ್ದಾನೆ.

ಕನ್ನಡ ನವ್ಯಕವಿಗಳಿಗೆ ಮುಖ್ಯ ಪ್ರೇರಣೆ ನೀಡಿದ ಪ್ರಸಿದ್ಧ ಕವಿ ಟಿ.ಎಸ್. ಎಲಿಯಟ್ ಸಾಂಸ್ಕೃತಿಕ ಅಧ್ಯಯನಗಳ ಮೇಲೂ ಚಿಂತಕನಾಗಿ ಪ್ರಭಾವ ಹಾಕಿದವನು. "ನೋಟ್ಸ್ ಟುವರ್ಡ್ಸ್ ದಿ ಡೆಫಿನಿಶನ್ ಆಫ್ ಕಲ್ಚರ್" ಒಂದು ಸಂಸ್ಕೃತಿ ಕೃತಿ ರಚನೆಯಾಗಿದೆ.

ಮಾರ್ಕ್ಸ್‌ವಾದವು ಮಾನವರು ತಮ್ಮ ಮೂಲಭೂತ ಅವಶ್ಯಕತೆಗಳಾದ ಆಹಾರ, ವಸತಿ, ಆಶ್ರಯಗಳಿಗಾಗಿ ಪ್ರಕೃತಿಯ ಜತೆ ಸೆಣೆಸುತ್ತ, ಅದನ್ನು ಪಳಗಿಸುತ್ತ, ಉತ್ಪಾದನೆಯ

ಉಪಕರಣಗಳನ್ನು ನಿರ್ಮಿಸಿದರು. ಈ ಶೋಧವು ಚಾರಿತ್ರಿಕವಾಗಿ ಕ್ರಾಂತಿ ಕಾರಕವಾಗಿತ್ತು. ಗ್ರಾಂಶಿ–ವಿಲಿಯಮ್ಸ್ ಮಾರ್ಕ್ಸ್‌ವಾದಿಗಳು.

ಕನ್ನಡದ ಮಾರ್ಕ್ಸ್‌ವಾದಿ ಅಧ್ಯಯನಗಳನ್ನು ಗಾಢವಾಗಿ ಪ್ರಭಾವಿಸಿದ ಭಾರತೀಯ ಮಾರ್ಕ್ಸ್‌ವಾದಿ ವಿದ್ವಾಂಸರಲ್ಲಿ ದೇವಿ ಪ್ರಸಾದ ಚಟ್ಟೋಪಾಧ್ಯಾಯ, ಡಿ.ಡಿ. ಕೋಸಾಂಬಿ, ರೋಮಿಲಾ ಥಾಪರು ಮುಖ್ಯರು.

೨೦ನೇ ಶತಮಾನದ ಪ್ರಥಮ ಘಟ್ಟದಲ್ಲಿದ್ದ ಪೌರ್ವಾತ್ಯವಾದಿ ಚಿಂತಕರಾದ ಆನಂದ–ಕುಮಾರಸ್ವಾಮಿ ಭಾರತೀಯ ಸಮರ್ಥಕ ಚಿಂತಕರಾಗಿದ್ದು, "ಡಾನ್ಸ್ ಆಫ್ ದಿ ಶಿವ" ಕೃತಿಯಲ್ಲಿ ಪ್ರಕಟವಾಗಿದೆ. ಭಾರತವನ್ನು ಒಳಗೊಂಡಂತೆ ಪೌರ್ವಾತ್ಯ ರಾಷ್ಟ್ರಗಳು ಕಲೆ, ತತ್ವಜ್ಞಾನ, ಸಾಹಿತ್ಯಗಳಲ್ಲಿ ಅಗಾಧ ಸಾಧನೆಮಾಡಿದೆ. ಅನಕೃ ಸಂಪಾದಿಸಿದ "ಭಾರತೀಯ ಸಂಸ್ಕೃತಿ" ಮೇಲ್ವರ್ಗಗಳ ಜೀವನಕ್ಕೆ ಸಂಬಂಧಿಸಿದ ವಿವರಗಳನ್ನು ಆಧರಿಸುವ ಈ ನಿಲುವು, ಭಾರತೀಯ ಚರಿತ್ರೆಯ ಪುನಾರಚನೆಯಲ್ಲಿ ವ್ಯಾಪಕವಾಗಿ ಕೆಲಸ ಮಾಡಿತು.

ಕರ್ನಾಟಕದ ಸಮಾಜಶಾಸ್ತ್ರ ಹಾಗೂ ಜಾನಪದ ಅಧ್ಯಯನಕಾರರು ಪಶ್ಚಿಮದ ಅನೇಕ ಸಾಂಪ್ರದಾಯಿಕ ಮಾನವಶಾಸ್ತ್ರಜ್ಞರು ಪ್ರಭಾವಕ್ಕೆ ಒಳಗಾಗಿ "ಸಾಂಸ್ಕೃತಿಕ ಅಧ್ಯಯನ" ಇ.ಬಿ.ಟೇಲರ್ "ಪ್ರಿಮಿಟಿವ್ ಕಲ್ಚರ್" ಕೃತಿ ರಚಿಸಿದರು.

ಕರ್ನಾಟಾಕದ ಹೊಸ ತಲೆಮಾರಿನ ಸಾಂಸ್ಕೃತಿಕ ಅಧ್ಯಯನಗಳ ಮೇಲೆ ತೀವ್ರಪ್ರಭಾವ ಬೀರಿದವರು ಸಮಾಜವಿಜ್ಞಾನಿಗಳು, ರಾಜಕೀಯ ಚಿಂತಕರಾದ ಮಾರ್ಕ್ಸ್, ಗಾಂಧಿ, ಅಂಬೇಡ್ಕರ್, ಲೋಹಿಯಾ ಮುಂತಾದವರು ಕರ್ನಾಟಕದ ಅನೇಕ ನೆಲೆಯ ಚಿಂತನೆ ಹಾಗೂ ಅಧ್ಯಯನಗಳಿಗೆ ಪ್ರೇರಕರಾಗಿದ್ದಾರೆ.

ಸಾಂಸ್ಕೃತಿಕ ಅಧ್ಯಯನಗಳ ಮುಖ್ಯ ಶಾಖೆಗಳಲ್ಲಿ ಸ್ತ್ರೀವಾದಿ ಸಾಂಸ್ಕೃತಿಕ ಅಧ್ಯಯನಗಳು ಒಂದು. ಅನೇಕ ಸ್ತ್ರೀವಾದಿಗಳು ಆಧುನಿಕೋತ್ತರ ಚಿಂತನೆಯಿಂದ ಪ್ರೇರಣೆ ಪಡೆದವರು. ಎಲ್ಲ ಅಪ್ರಧಾನ, ಅಧಿಕಾರರಹಿತ, ಅಂಚಿನ ಸಂಗತಿಗಳ ದೃಷ್ಟಿಕೋನವನ್ನು ಮಾನ್ಯಮಾಡುವ ಆಧುನಿಕೋತ್ತರವಾದದ ಚಿಂತನೆಯಿಂದ ಸ್ತ್ರೀವಾದವು ಶಕ್ತಿಪಡೆಯಿತು. ಸಿಮನ್ ದ ಭೋವಾ ಹಾಗೂ ಕೇಟ್ ಮಿಲ್ಲೆಟ್ ಸ್ತ್ರೀವಾದ ಚಿಂತಕಿಯರು.

ಸಾಂಸ್ಕೃತಿಕ ಅಧ್ಯಯನಗಳಿಗೆ ಬಂದರೆ ಈ ಜನಪ್ರಿಯ ಅರ್ಥಗಳು ಮುಖ್ಯವಾಗುವುದಿಲ್ಲ. ಈ ಅರ್ಥವನ್ನು ನಂಬಿದವರಿಗೆ ಕರ್ನಾಟಕದ ದೇವಾಲಯಗಳು

ಒಂದು ಸಾಂಸ್ಕೃತಿಕ ಅಧ್ಯಯನ ಎಂದಾಗ ಸಮಸ್ಯೆಯಾಗುವುದಿಲ್ಲ. ಆದರೆ ಗ್ರಾಮೀಣ ಬೈಗುಳಗಳು ಒಂದು ಸಾಂಸ್ಕೃತಿಕ ಅಧ್ಯಯನ ಎಂತಲೋ, 'ಪ್ರಾಚೀನ ಕರ್ನಾಟಕದ ವೇಶ್ಯಾವಾಟಿಕೆಗಳು, ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯ ಬಂದಾಗ ಗಾಬರಿಯಾಗುತ್ತದೆ. ಸಂಗೀತ, ಸಾಹಿತ್ಯ, ಧರ್ಮ, ಕಲೆ ಇವನ್ನೆಲ್ಲ ಸಂಸ್ಕೃತಿಯ ಚೌಕಟ್ಟಿನಲ್ಲಿ ಹೀಗೆ ನೋಡುವುದೇನೋ ಸರಿ. ಆದರೆ ನೈತಿಕವಾಗಿ 'ಕೇಡು'ಗಳೆಂದು ತಿಳಿಯಲಾಗಿರುವ ಬೈಗುಳ, ವೇಶ್ಯಾವಾಟಿಕೆ, ಅಸ್ಪೃಶ್ಯತೆ ಇವನ್ನೆಲ್ಲ ಸಂಸ್ಕೃತಿಯ ಹೆಸರಲ್ಲಿ ಚರ್ಚಿಸುವುದು ಹೇಗೆ ಎಂದು ಗೊಂದಲ ಹುಟ್ಟುತ್ತದೆ. ಇದಕ್ಕೆ ಕಾರಣ, ಸಂಸ್ಕೃತಿಯನ್ನು 'ಹಿರೀಕರು ಮಾಡಿದ ಪವಿತ್ರ ಆದರ್ಶ ಮೌಲ್ಯಗಳ ಸಾಧನೆ' ಎಂಬ ಭಾವನಾತ್ಮಕ ಅರ್ಥದಲ್ಲಿ ಗ್ರಹಿಸಿರುವುದೇ ಆಗಿದೆ.

ಟಿ.ಕೆ. ರಾಮರಾವ್ ಅವರ ಕಾದಂಬರಿಗಳಲ್ಲಿ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಘರ್ಷ ಸದಾಕಾಲ ಮಾನವನ ಬದುಕಿನಲ್ಲಿ ನಡೆಯುತ್ತಲೇ ಇರುತ್ತದೆ. ತನ್ನೊಳಗಿನ ಆಂತರಿಕ ಸಂಘರ್ಷ ಒಂದು ನೆಲೆಯಾದರೆ, ಸಮಾಜದೊಂದಿಗಿನ ಸಂಘರ್ಷ ಮತ್ತೊಂದು ನೆಲೆಯದು. ತನ್ನೊಳಗೆ ಸದಾ ಇರುವ ಇಂಥ ಸಂಘರ್ಷ ವ್ಯಕ್ತಿತ್ವ ವಿಕಸನಕ್ಕೆ ಕಾರಣವಾಗಿದ್ದರೆ, ಸಮಾಜದೊಂದಿಗಿನ ಸಂಸ್ಕೃತಿಯ ಸಂಘರ್ಷ ಮನುಷ್ಯನ ಇತಿಹಾಸವನ್ನು ನಿರ್ಮಿಸಿದೆ. ಮನುಷ್ಯ ತನ್ನ ಅಸ್ಥಿತ್ವಕ್ಕೆ ಧಕ್ಕೆ ಬಂದಾಗ ಮತ್ತು ಶೋಷಣೆಗೊಳಗಾದಾಗ ಸಂಘರ್ಷಕ್ಕಿಳಿಯುತ್ತಾನೆ. ಎಲ್ಲಾ ಪ್ರಕ್ರಿಯೆಗಳಿಗೂ ಎರಡು ಮುಖವಿರುವಂತೆ, ಸಂಘರ್ಷಕ್ಕೂ ಎರಡು ಮುಖಗಳಿವೆ. ಶೋಷಣೆಯ ವಿರುದ್ಧದ ಸಂಘರ್ಷದಲ್ಲಿ ಶೋಷಿತನ ಗೆಲುವು, ಶೋಷಕನ ಸೋಲು, ಆ ಸಂದರ್ಭದ ನೋವು-ನಷ್ಟ ಮತ್ತು ಸವಲತ್ತಿನ ಕಡಿತದಿಂದ ಆತ ಪಡುವ ಬವಣೆ ಇವೆಲ್ಲವೂ ಸಂಘರ್ಷವಿಲ್ಲದ ಬದುಕಿನ ಕಲ್ಪನೆಯೂ ಅಸಾಧ್ಯ ಎಂಬುದನ್ನು ಸಾಬೀತು ಪಡಿಸುತ್ತೇವೆ. ಬದುಕಿನ ಜೀವಂತಿಕೆಯೂ ಸಂಘರ್ಷದಲ್ಲಿದೆ.

ಸಾಂಸ್ಕೃತಿಕ ಸಾಮಾಜಿಕ ಪರಿಸ್ಥಿತಿಯನ್ನು ವಿವರಿಸುತ್ತದೆ ಮತ್ತು ಪರಿಚಯಿಸುತ್ತದೆ. ಸಮಯ-ಸಂದರ್ಭ ಹಾಗೂ ಪರಿಸ್ಥಿತಿಗನುಸಾರವಾಗಿ ಮಾನವನ ಭೌತಿಕ ಹಾಗೂ ಸಾಮಾಜಿಕ ಅಸ್ತಿತ್ವಕ್ಕೆ ಅಗತ್ಯವಾದ ಜ್ಞಾನವನ್ನು ಸಂಸ್ಕೃತಿಯು ನೀಡುವುದು. ಮಾನವನ ಸಮೂಹ ಜೀವನವು ಸಾಧ್ಯವಾಗಿರುವುದೇ ಸಂಸ್ಕೃತಿಯಿಂದಾಗಿ ಅದು ಅವನನ್ನು ಪ್ರಾಣಿಗಳ ಮಟ್ಟದಿಂದ ಮಾನವನ ಮಟ್ಟಕ್ಕೇರಿಸಿದೆ. ಸಂಸ್ಕೃತಿಯು ಮಾನವನ ಸಮಗ್ರ ಸಾಧನೆಯ ಪ್ರತಿರೂಪವಿದ್ದಂತೆ. ಸಂಸ್ಕೃತಿಯ ಹೊರತಾಗಿ ಆತ

ಜೀವಿಸುವುದೇ ದುಃಸಾಧ್ಯ ಸಂಸ್ಕೃತಿಯು ಪ್ರತಿಯೊಂದು ಸಮಾಜದಲ್ಲಿ ಆದರ್ಶವಾಗಿರುತ್ತದೆ. ಆದರೆ ಸಾಂಸ್ಕೃತಿಯ ಮೌಲ್ಯಗಳ ಮತ್ತು ನಿಯಮಗಳ ಕಾರಣಕ್ಕಾಗಿ ವ್ಯಕ್ತಿಗಳು ಮತ್ತು ಸಮೂಹಗಳು ಅಂದರೆ ಸಮಾಜವು ಸಂಘರ್ಷಕ್ಕೆ ಇಳಿಯಬಹುದು. ಸಂಘರ್ಷಗಳ ನೆಲೆಯೇ ಸಂಸ್ಕೃತಿಯೇ ಆಗಿರುವುದು ಎಂಬುದನ್ನದು ಸಂಕೇತಿಸುವುದು. ಸಾಂಸ್ಕೃತಿಕ-ಸಾಮಾಜಿಕ ಸಂಘರ್ಷಗಳು ಇತಿಹಾಸದುದ್ದಕ್ಕೂ ವರ್ಗಭಾವನೆ, ಲಿಂಗರಾಜಕಾರಣ, ಆಚಾರ-ವಿಚಾರ, ಉಡುಗೆ-ತೊಡುಗೆ, ಜಾತಿವ್ಯವಸ್ಥೆ ಇನ್ನೂ ಮುಂತಾದ ಕಾರಣಗಳಿಂದ ಇತಿಹಾಸದುದ್ದಕ್ಕೂ ನಡೆದುಕೊಂಡು ಬಂದಿದೆ. ಈಗಲೂ ಕೂಡ ಅದು ಒಂದಲ್ಲ ಒಂದು ಕಾರಣದಿಂದ ಜೀವಂತವಾಗಿಯೇ ಇದೆ ಎಂದು ರಾಯರು ತಮ್ಮ ಸಾಮಾಜಿಕ-ಪತ್ತೇದಾರಿ ಕಾದಂಬರಿಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಘರ್ಷದ ಒಂದು ಮಾದರಿಯಾಗಿ ಅವರ ಬರಹಗಳು ಕಂಡುಬರುತ್ತವೆ.

ಟಿ.ಕೆ. ರಾಮರಾವ್ ಅವರ ಕಾದಂಬರಿಗಳಲ್ಲಿನ ಬರಹ ಮತ್ತು ಚಿಂತನೆ ಸಮಾಜದ ಒಂದು ಭಾಗವೇ ಆಗಿರುವುದರಿಂದ, ಅವರೂ ಕೂಡ ಸಮಾಜದ ಮತ್ತು ಸಂಸ್ಕೃತಿಯ ಒಪ್ಪಿತ ಮೌಲ್ಯಗಳ ಒಂದು ಭಾಗವಾಗಿ ಚಿಂತನಶೀಲತೆಯ ಇತಿ-ಮಿತಿಗಳನ್ನು, ಸಮಾಜದ ಜೀವನಶೈಲಿ ಒಂದು ಸಂಸ್ಕೃತಿ ಎಂದೂ ಒಪ್ಪಿಯೂ, ಹಲವು ಕಡೆ ಒಪ್ಪದ ಹಾಗೆಯೂ ಕಂಡುಬರುತ್ತದೆ.

ವ್ಯಕ್ತಿಯ ಆರ್ಥಿಕತೆಯ ಹಿನ್ನೆಲೆಯಲ್ಲಿ ಉಂಟಾಗುವ, ಮೇಲುಕೀಳಿನ ಪರಿಣಾಮದ ಕಾರಣಕ್ಕೆ ಉಂಟಾಗುವ ಸಂಘರ್ಷವೇ ಉಂಟಾಗುವ ಸಂಘರ್ಷವೇ ವರ್ಗಸಂಘರ್ಷ. ಇಲ್ಲಿ ಜಾತಿಗಿಂತ ಮುಖ್ಯವಾದದ್ದು ವ್ಯಕ್ತಿಯ ಆರ್ಥಿಕ ಸ್ಥಿತಿ. ಮನುಷ್ಯನ ಆರ್ಥಿಕ ಸ್ಥಿತಿಯಲ್ಲಾಗುವ ವ್ಯತ್ಯಾಸ ಅವನ ಇತರ ಎಲ್ಲಾ ಸಂಬಂಧಗಳ ಮೇಲೂ ಪರಿಣಾಮ ಬೀರುತ್ತದೆ. ರಾಯರ ಆಕಾಶದೀಪ ಕಾದಂಬರಿಯಲ್ಲಿ ಈ ವರ್ಗ ಸಂಘರ್ಷವನ್ನು ಕಾಣಬಹುದು.

ಒಬ್ಬ ಸಾಮಾನ್ಯ ವರ್ಗದ ಪತ್ರಿಕೆಯ ವರದಿಗಾರನ ಜೀವನದ ಸುತ್ತ ಹೆಣೆಯುವ ಕೃತಿಯಾಗಿದೆ. ಶಿವಶಂಕರ ಕಹಳೆ ಪತ್ರಿಕೆಯ ವರದಿಗಾರ ತನ್ನ ಲೇಖನದ ಹರಿತದಿಂದ ಮೋಹನ್‌ರಾಯ್ ಕರೆ ಮೇಲೆ ಬಂದಿದ್ದು, ಅವರ ಹುಟ್ಟು ಹಬ್ಬ ನಿಂತುಹೋದದ್ದು, ಮಳೆ ರಾತ್ರಿಯಲ್ಲಿ ಪೋರ್ಟಿಕೋದಲ್ಲಿ ಮಲಗಿದ್ದು, ಉಪ್ಪರಿಗೆಯ ಶೋಷಕ ವರ್ಗವನ್ನು ಬುಡಮಟ್ಟ ಅಲ್ಲಾಡಿಸಿ ದೇಹ ಕೊಳಚೆ ಆವರಣ ಮೋಧಾವಿತನಕ್ಕೂ

ಉದರಪೋಷಣೆಗೂ ನಡುವೆ ದೊಡ್ಡ ಕಂದಕ ಏರ್ಪಟ್ಟಿದ್ದು, ಆರು ತಿಂಗಳ ಕಾಲ ಸಂಸ್ಥೆಗೆ ಸೇರಿಸಿದ್ದು ಆ ಅವಧಿಯಲ್ಲಿ ಮೋಹನರಾಯರ ಮಗಳನ್ನು ಪ್ರೀತಿಸಿದ್ದು, ಮದುವೆಯಾಗಬೇಕೆಂದು ಬಯಸಿದಾಗ ಅಂತಸ್ತು ಅಡ್ಡ ಬಂದದ್ದು.

ಪ್ರೀತಿಯ ಮುಖಾಂತರ ಆರಂಭವಾಗುವ ವರ್ಗ ಸಂಘರ್ಷದ ಕಥೆ ಈ ಆಕಾಶದೀಪ ಇದಕ್ಕೆ ಯಾವ ಸಿದ್ಧಾಂತದ ಪ್ರೇರಣೆಯೂ ಇಲ್ಲ. ಹಾಗಾಗಿಯೇ ಇಲ್ಲಿ ಪ್ರೀತಿಯ ಚಿತ್ರಣಕ್ಕೆ ಆದ್ಯತೆಯಿದೆ. ಮಾರ್ಕ್ಸ್‌ವಾದಿಗಳ ಪ್ರಕಾರ ವರ್ಗಕಲಹ ಅನಿವಾರ್ಯ. ಆ ಮೂಲಕ ನೈಜ ಉತ್ಪಾದಕ ವರ್ಗ ಹೋರಾಟಕ್ಕೆ ತೊಡಗಿ ಅದೂ ವೈಯಕ್ತಿಕ ಸ್ತರದಿಂದ ಹೊರಟ ವರ್ಗಕಲಹ ಸದಾ ಗೆಲ್ಲುವುದೆಂದು ಭಾವಿಸುವುದು ವಾಸ್ತವವೊಂದು ಬೇರೆಯೇ ಇರುತ್ತದೆ.

ಎಲ್ಲಾ ಗೆಲುವು ಸುಖಾಂತ್ಯವಾದಾಗ ಸಂಘರ್ಷಕ್ಕೀಳಬಹುದಾದವರ ಮನಸ್ಸು ವಿರಮಿಸುವ ಸಾಧ್ಯತೆಯಿರುವುದನ್ನು ಅಲ್ಲಗಳಿಯುವಂತ್ತಿಲ್ಲ. ಮೋಹನರಾಯರು ತನ್ನ ಮಗಳನ್ನು ಶಿವಶಂಕರನ ಜೊತೆ ವಿವಾಹ ಮಾಡಲು ಅಂತಸ್ತಿನ ಕಾರಣದಿಂದ ನಿರಾಕರಿಸಿದರೂ, ಶಿವಶಂಕರನ ಮದುವೆಯಾದರೆ ಆತನನ್ನು ಕೊಲೆ ಮಾಡಿಸುತ್ತೇನೆಂದು, ತನ್ನ ಮನೆಯ ಮರ್ಯಾದೆಗೋಸ್ಕರ ತಾನು ಕೂಡ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಮಗಳಿಗೆ ಎದುರಿಸಿದಾಗ ಮಗಳು ನಿರಾಸೆಯಿಂದ ತಂದೆಯ ಮಾತಿಗೆ ಒಪ್ಪುತ್ತಾಳೆ. ನಂತರ ಶಿವಶಂಕರನ ಪ್ರೀತಿಯ ಕರೆಗೆ ಓಗೊಟ್ಟು ಶಿವಶಂಕರನ ಜೊತೆ ಹೊರಟು ಹೋಗುತ್ತಾಳೆ. ಇದರಿಂದ ರಾಯರು ಮಗಳ ಪ್ರೀತಿಯ ಮುಂದೆ ಸೋಲುತ್ತಾರೆ. ಈ ಕಾದಂಬರಿಯಲ್ಲಿ ಸಂಘರ್ಷದಿಂದ ಪ್ರೀತಿ ಗೆಲ್ಲುತ್ತದೆ. ವರ್ಗಭೇದ ತೊಡೆಯುತ್ತದೆ ಎನ್ನುವ ಆಶಯದೊಂದಿಗೆ ಕಾದಂಬರಿ ಸುಖಾಂತ್ಯವಾಗುತ್ತದೆ.

ಭಾರತ ವೈವಿಧ್ಯಮಯ ದೇಶ ಭೌಗೋಳಿಕ ವೈವಿಧ್ಯತೆಯಂತೆಯೇ ಇಲ್ಲಿನ ನಂಬಿಕೆ, ಆಚರಣೆಗಳು ಸಹ ವೈವಿಧ್ಯತೆಯನ್ನು ಹೊಂದಿದೆ. ಇಲ್ಲಿನ ಸಾಂಸ್ಕೃತಿಕ ವೈವಿಧ್ಯತೆಗೆ ಭೌಗೋಳಿಕ ರಚನೆ ಒಂದು ಕಾರಣವಾದರೆ, ಮತ್ತೊಂದು ಭಾರತಕ್ಕೆ ಮೀಸಲಾದ ಜಾತಿ ವ್ಯವಸ್ಥೆ ಪ್ರಪಂಚದ ಬೇರಾವ ಭಾಗದಲ್ಲೂ ಕಾಣದ ಜಾತಿ ವ್ಯವಸ್ಥೆ ಭಾರತದ ಅವಿಭಾಜ್ಯ ಅಂಗವಾಗಿದೆ. ವ್ಯಕ್ತಿಯ ಹುಟ್ಟಿನ ಕಾರಣದಿಂದ ಅವನ ಬದುಕನ್ನು ನಿಯಂತ್ರಿಸಿ, ನಿರ್ದೇಶಿಸುವ ಜಾತಿ ಅವನ ಆಯ್ಕೆಗೊಳಪಟ್ಟಿಲ್ಲ. 'ಜನ್ಮಾನಂ ಜಾಯತೇ ಜಂತುಃ ಕರ್ಮಣಾಂ ಜಯತೇ ದ್ವಿಜಃ' ಎಂಬ ನಂಬಿಕೆ ಆರಂಭದಲ್ಲಿತ್ತು. ಆಗ ಇದ್ದ ವರ್ಣವ್ಯವಸ್ಥೆಯಲ್ಲಿ ಚಲನೆ ಸಾಧ್ಯವಿತ್ತು. ಗುಣ-ಕರ್ಮಗಳಿಂದ ವ್ಯಕ್ತಿ ತನ್ನ ವರ್ಣವನ್ನು

ಬದಲಾಯಿಸಿಕೊಳ್ಳದೇ ಸ್ವಾತಂತ್ರ್ಯ ಹೊಂದಿದ್ದ ಸಮಾಜದ ಶ್ರಮ ವಿಭಜನೆಯಾಗಿದ್ದ ವರ್ಣವ್ಯವಸ್ಥೆ ತನ್ನ ಜಿಗುಟುತನದಿಂದಾಗಿ, ಜಾತಿಗಳಾಗಿ ಮಾರ್ಪಟ್ಟಿದ್ದು ಮಾತ್ರ ಇತಿಹಾಸದ ದುರಂತ. ಜಾತಿಯ ಜಿಗುಟುತನವನ್ನು ಕುರಿತು ಎ.ಬಡ್ಲ್ಯು ಗ್ರೀನ್ "ಜಾತಿಯ ಸಾಮಾಜಿಕತೆಯ ಸ್ತರವಿನ್ಯಾಸದ ಒಂದು ವ್ಯವಸ್ಥೆಯಾಗಿದ್ದು ಇದರಲ್ಲಿ ಅಂತಸ್ತುಗಳ ಏಣಿ-ಶ್ರೇಣಿಗಳಲ್ಲಿ ಲಂಬ ಚಲನೆಯ ತಾತ್ವಿಕವಾಗಿಯಾದರೂ ಸಂಭವಿಸದೇ ಇರಬಹುದು" ಎನ್ನುತ್ತಾರೆ.

ಹೀಗೆ ವರ್ಣಗಳೊಳಗೆ ಚಲನೆ ಅಸಾಧ್ಯವಾದಾಗ ಸಹಜವಾಗಿಯೇ ಜಾತಿಗಳ ರಚನೆಗಾಗಿ, ಅದರೊಳಗಿನದೇ ಸಂಬಂಧಗಳಿಂದ, ಅದರದೇ ಆದ ವಿಶಿಷ್ಟ ಸಾಮಾಜಿಕ ಸಂಸ್ಕೃತಿಯೊಂದು ರೂಪ ತಳೆಯಿತು. ಪ್ರತಿ ಜಾತಿಯು ತಮ್ಮದೇ ಆದ ನಂಬಿಕೆ, ಸಂಪ್ರದಾಯ, ಆಹಾರ ಪದ್ಧತಿ, ವಿಧಿ-ಆಚರಣೆಗಳನ್ನು ಜಾರಿಗೆ ತಂದುಕೊಂಡು ಕಟ್ಟುನಿಟ್ಟಾಗಿ ಅನುಸರಿಸುತ್ತಾ ಬಂದಿತು. ಈ ನಂಬಿಕೆ ಆಚರಣೆಗಳು ಒಂದು ಜಾತಿಯಿಂದ ಮತ್ತೊಂದು ಜಾತಿಯನ್ನು ಸಂಪೂರ್ಣವಾಗಿ ಬೇರ್ಪಡಿಸಿದವು. ಆದರೆ ಈ ಭಿನ್ನತೆಯು ಅಸಮಾನತೆಯಾದದ್ದು ಮಾತ್ರ ಚರಿತ್ರೆಯ ವ್ಯಂಗ್ಯ ಹುಟ್ಟಿನ ಕಾರಣದಿಂದಲೇ ವ್ಯಕ್ತಿಯೊಬ್ಬ ಶ್ರೇಷ್ಠ ಅಥವಾ ಕನಿಷ್ಠನಾಗುವುದು ಅಸಂಬದ್ಧ ಹಾಗೂ ಅವೈಜ್ಞಾನಿಕ. ಆದರೂ ಈ ಪದ್ಧತಿ ಇತಿಹಾಸ ಕಾಲದಿಂದ ಅನೂಚಾನವಾಗಿ ಜಾರಿಯಲ್ಲಿರುವುದರ ಹಿಂದೆ ವ್ಯವಸ್ಥಿತ ಸಂಚನ್ನು ಗುರುತಿಸಬಹುದು.

ತಮಗೆ ದೊರೆತ ವಿದ್ಯೆಯ ಲಾಭ ಪಡೆದ ಮೇಲ್ಜಾತಿಯ ಜನ ಕೀಳುಜಾತಿಯವರನ್ನು ಭೌದ್ಧಿಕವಾಗಿ ಬೆಳೆಯದಂತೆ ಪ್ರಜ್ಞಾಪೂರ್ವಕವಾಗಿ ನಿಯಂತ್ರಿಸಿದರು. ಈ ನಿಯಂತ್ರಣಕ್ಕಾಗಿ ಶಾಸ್ತ್ರ-ಪುರಾಣಗಳು ರಚನೆಯಾಗಿ ಅವುಗಳನ್ನು ಮೀರಿದವರಿಗೆ ಶಿಕ್ಷೆಗಳನ್ನು ಅವರೇ ನಿಗಧಿಪಡಿಸಿದರು. ಬೌದ್ಧಿಕ ಚಿಂತನೆಯಿಂದ ವಂಚಿತರಾದ ಕೆಳಜಾತಿಯ ಜನ ಅದನ್ನೇ ಒಪ್ಪಿಕೊಂಡು ಬದುಕುತ್ತಾ ಬಂದದ್ದು ಸಹ ಇಂದಿನ ಸ್ಥಿತಿಗೆ ಕಾರಣವಾಯಿತು.

ರಾಮರಾವ್ ಅವರ ಪಚ್ಚತೋರಣ ಕಾದಂಬರಿಯಲ್ಲಿ ಜಾತಿವ್ಯವಸ್ಥೆಯನ್ನು ಕಾಣಬಹುದು, ಶಂಕರಪ್ಪನ ಸ್ವಾರ್ಥ, ಹಟವಾದಿತನ, ಕೃತಕ ದೈವಭಕ್ತಿ, ಜಾತಿವಾದ ಮತ್ತು ಲೋಕವ್ಯವಹಾರದ ನಾಜೂಕು, ಅನಾಚಾರ, ವ್ಯಭಿಚಾರಗಳ ಲಂಪಟತನ, ಕುದುರೆ ಜೂಜು, ಮಧ್ಯಪಾನ ಇವೆಲ್ಲದರ ಸುತ್ತ ಹಸಿರು ತೋರಣದ ಶುಭದ ಸಂಕೇತ ಎಂಬುದು ಕೇವಲ ಮರೀಚಿಕೆ ಎಂಬುದು ತಿಳಿಯುತ್ತದೆ.

ಶಂಕರಪ್ಪ ಬ್ರಾಹ್ಮಣ ಜಾತಿಯವನಾಗಿದ್ದು ಎಷ್ಟೋ ಅಧೋಗತಿಯಲ್ಲಿ ನಡೆದಿದ್ದ ತಂದೆಗೆ, ಅಂತರ ಜಾತಿಯ ವಿವಾಹಕ್ಕೆ ಇಳಿಯಲು ಮಗ ಆದರ್ಶದ ಮೆಟ್ಟಿಲುಗಳನ್ನು ಹುಡುಕಿದ.

ಹೊಲತಿಯೊಂದಿಗೆ ಆ ಜನ್ಮ ಸಂಬಂಧ ಪಡೆದ ಶಂಕರಪ್ಪ ತನ್ನ ಮಗನ ಮದುವೆಗೆ ಜಾತಿಯನ್ನು ಅಡ್ಡವಾಗಿ ನಿಲ್ಲುವಂತೆ ಮಾಡುವ ನಾಟಕ, ವೇಷ, ಸ್ವಾರ್ಥ ಹಟವನ್ನು ಈ ಕಾದಂಬರಿಯಲ್ಲಿ ಕಾಣಬಹುದು.

ಆಧುನಿಕ ಜಗತ್ತಿನಲ್ಲಿ ಯಾವ ವ್ಯಕ್ತಿಯು ರಾಜಕೀಯದ ಬಗೆಗೆ ನಿರ್ಲಿಪ್ತನಾಗಿರಲು ಸಾಧ್ಯವಿಲ್ಲ. ಏಕೆಂದರೆ ಸಮಾಜವನ್ನು ಬಿಟ್ಟು ವ್ಯಕ್ತಿಯಿರುವುದಿಲ್ಲ. ರಾಜಕೀಯವನ್ನು ಬಿಟ್ಟು ಸಮಾಜವಿರುವುದಿಲ್ಲ. ರಾಜಕೀಯದಲ್ಲಾಗುವ ಯಾವುದೇ ಬದಲಾವಣೆ ಸಮಾಜದ ಮೇಲೆ ಪ್ರಭಾವವನ್ನುಂಟು ಮಾಡುತ್ತದೆ. ಮಾನವ ಸಮಾಜಕ್ಕೆ ಒಂದು ವ್ಯವಸ್ಥಿತ ಆಡಳಿತ ಬೇಕಾಗುತ್ತದೆ. ಆ ವ್ಯವಸ್ಥೆಯನ್ನು ರಾಜ್ಯ ಎನ್ನಬಹುದು. ಪ್ಲೇಟೋ ಮತ್ತು ಅರಿಸ್ಟಾಟಲ್ ಪ್ರಕಾರ "ಉತ್ತಮ ಜೀವನ, ನೈತಿಕ ಜೀವನ ಅಥವಾ ನ್ಯಾಯಯುತ ಸಮಾಜ ರಚಿಸಲು ರಾಜ್ಯ ಹುಟ್ಟಿತು" ಎಂದು ಹೇಳಿದ್ದಾರೆ.

ರಾಜ್ಯದ ಉಗಮದ ಜೊತೆ-ಜೊತೆಗೆ ಅವರ ಬಗೆಗಿನ ಚಿಂತನೆಗಳೂ ಆರಂಭವಾದವು, ಈ ಚಿಂತನೆಗಳ ಫಲವಾಗಿ ಹಲವು ವಿಭಿನ್ನ ತತ್ವಗಳು ಅಸ್ತಿತ್ವ ಪಡೆದವು. "ಸಮಾಜದಲ್ಲಿ ದಂಡಾಧಾರಿಯಾದ ಕಾನೂನು ಮತ್ತು ವ್ಯವಸ್ಥೆಗಳ ಮೂಲಕ ನೀತಿ-ನಿಯಮಗಳನ್ನು ಸ್ಥಾಪಿಸುವುದೇ ರಾಜಕೀಯ ತತ್ವಗಳ ಗುರಿ. ಆದ್ದರಿಂದಲೇ ನ್ಯಾಯ-ನೀತಿ ನಿಯಮಗಳನ್ನು ರಾಜಕೀಯ ತತ್ವಗಳು ಒಳಗೊಂಡಿದೆ. ಇದರಿಂದ ರಾಜಕೀಯ ಒಂದು ತತ್ವಾಧಾರಿತ ಚಟುವಟಿಕೆ ಎನ್ನಬಹುದು."

ಒಟ್ಟಿನಲ್ಲಿ ರಾಜ್ಯ ಅದರ ಆಡಳಿತ ವ್ಯವಸ್ಥೆ ಆ ಪ್ರಭುತ್ವದ ಸುತ್ತಲಿನ ಚಟುವಟಿಕೆಗಳನ್ನು ರಾಜಕೀಯವೆಂದು ಗುರುತಿಸಬಹುದು. ಆದರೆ ಇಂದು ರಾಜಕೀಯಕ್ಕೆ ಮೋಸ, ದುಷ್ಟತನ ಮುಂತಾದ ಹೀನಾರ್ಥ ಪ್ರಾಪ್ತವಾಗಿದೆ. 'ರಾಜಕೀಯ ಘಟಿಂಗನ ಕೊನೆಯ ಆಸರೆ' ಎಂದು ಜಾನ್ಸನ್ ಹೇಳುತ್ತಾನೆ.

ಟಿ.ಕೆ. ರಾಮರಾವ್ ಅವರು 'ದೂರಗಗನ' ಕಾದಂಬರಿಯಲ್ಲಿ ಸಾಮಾಜಿಕ ಅವ್ಯವಹಾರಗಳಿಗೆ ಆಯಾ ಸಮಾಜದ ಗಣ್ಯ ವ್ಯಕ್ತಿಗಳೂ, ರಾಜಕೀಯ ದುರೀಣರೂ, ಪೋಲೀಸಿನವರೂ ಕೊಡುವ ಪ್ರೋತ್ಸಾಹ ಅಪರಿಮಿತ. ಅದರಿಂದ ವ್ಯವಸ್ಥಿತ ಜಾಲವೊಂದು ನಿರ್ಮಾಣಗೊಂಡು ತಮ್ಮ ಕಾರ್ಯದಲ್ಲಿ ಯಶಸ್ಸನ್ನು ಪಡೆಯುತ್ತದೆ.

ರಾಜಕೀಯ ಧುರೀಣರಿಂದಲೇ ಆರಂಭಗೊಳ್ಳುವ ಈ ಅವ್ಯವಹಾರಗಳು ಸಾಮಾಜಿಕ ಪಿಡುಗಾಗಿ ಪರಿಣಮಿಸುವ ಕಾದಂಬರಿಯೇ ದೂರ ಗಗನ.

'ಖೋಟಾನೋಟು' ಕಾದಂಬರಿ ಅವ್ಯವಹಾರದತ್ತ ಮಾತ್ರ ಬೆಳಕು ಚೆಲ್ಲುತ್ತದೆಯೇ ಹೊರತು, ಅದರಿಂದ ಸಮಾಜದ ಮೇಲಾಗುವ ಪರಿಣಾಮವನ್ನು ಚಿತ್ರಿಸುವುದಿಲ್ಲ. ಖೋಟಾನೋಟಿನ ತಯಾರಿಕೆಯಲ್ಲಿ ಚೆಟ್ಟಿಯಾರರಂತಹ ಸಾಹುಕಾರರು ವೆಚ್ಚ ಮಾಡುವ ಹಣದ ರಾಶಿ, ನೋಟಿನ ಪ್ರತಿಯನ್ನು ಮಾಡುವ ಕಲೆಯಲ್ಲಿ ಪರಿಣಿತಿಯನ್ನು ಹೊಂದಿದ ಚೆಟ್ಟಿಯಾರರ ಜೊತೆ ಕೈಜೋಡಿಸಿದ ಮಧುಸೂಧನರಾಯರು ಸಮನಾದ ಪಾಲುಗಾರಿಕೆಯ ಒಪ್ಪಂದದ ಮೇಲೆ ತಮ್ಮ ಸರಹದ್ದಿನಲ್ಲೆಲ್ಲಾ ತಮ್ಮ ಕೈವಾಡವಿರುವ ಕಡೆಗಳಲ್ಲೆಲ್ಲಾ ಚಲಾವಣೆ ಮಾಡಿ ಮುಗಿಸಿದ್ದರು.

ಸುಮಾರು ಅರ್ಧ ಶತಮಾನದಷ್ಟು ಕಾಲದವರೆಗೆ ಅಪಾರ ಹೆಸರನ್ನು ಗಳಿಸಿ, ಎಲ್ಲರ ಹೊಗಳಿಕೆಗೂ ಪಾತ್ರರಾಗಿದ್ದ ಪ್ರಸಿದ್ಧ ರಾಜಕಾರಣಿ ಮಧುಸೂದನರಾಯರು ಅವರ ಅವ್ಯವಹಾರದಿಂದ ಮಗನಿಂದಲೇ ಕೀರ್ತಿ ಶಿಖರದಿಂದ ಜಾರಿ ಬಿದ್ದು ಬೆತ್ತಲೆಯಾಗಿ ಸಮಾಜದ ಮುಂದೆ ನಿಂತರು. "ತನ್ನ ಮಗ ರಾಜು ನನ್ನ ಇಡೀ ಜೀವಿತದ ಗೌರವಕ್ಕೆ ಬೆಂಕಿ ಹಾಕಿ ನನ್ನನ್ನು ಬತ್ತಲೆಯಾಗಿ ಪ್ರಪಂಚದ ಮಧ್ಯೆ ನಿಲ್ಲಿಸಿಬಿಟ್ಟ" ಎಂದರು. ಆದರೂ ಮಗನ ಮೇಲೆ ರಾಯರಿಗೆ ಎಳ್ಳಷ್ಟು ಕೋಪವಿರಲಿಲ್ಲ. ಆತನ ದೇಶಾಭಿಮಾನವನ್ನು ನೋಡಲು, ತನ್ನ ಮಗನನ್ನು ಚೆಟ್ಟಿಯಾರ್‌ನಿಂದ ಕಾಪಾಡಲೂ, ಜ್ವಾಲಾಮುಖಿಯ ಪ್ರತಿಕಾಲಯಕ್ಕೆ ಬಂದು ಮಗನನ್ನು ಕರೆದರೂ ರಾಜು ಬರಲಿಲ್ಲ. ಪ್ರಕೃತಿ, ಸಮಾಜ, ಜನತೆಯ ಮುಂದೆ, ಕರ್ತವ್ಯದ ನಿಸ್ಪೃಹತೆ ಮತ್ತು ಜೀವನದ ವಾದಗಳನ್ನು ಹೇರಿದ ಅವನು ತನ್ನವರೆಂಬುವರನ್ನೆಲ್ಲಾ ತ್ಯಾಗ ಮಾಡಿದ. ಅವನನ್ನು ಚೆಟ್ಟಿಯಾರ್ ರಿವಾಲ್ವಾರ್‌ನಿಂದ ಕೊಂದು, ತಾನು ಆತ್ಮಹತ್ಯೆ ಮಾಡಿಕೊಂಡ ಕಥೆ.

ರಾಮರಾವ್‌ರ ಈ ಕಾದಂಬರಿಯ ನಾಮಫಲಕವೇ ವಿಶಿಷ್ಟವಾದುದು. ದೂರಗಗನ ಮನುಷ್ಯನ ಆಸೆ-ವಿಶ್ವಾಸಗಳ ಊಹಾ ಪಟಲ, ಭ್ರಮಕ ಪಟಲ ಅದನ್ನು ಸಮೀಪಿಸಿದವನಿಗೆ ಅದು ಮಿಥ್ಯೆ ಎಂಬುದರ ಅರಿವಾಗಿ, ಅವನು ಅದಕ್ಕೂ ಮುಂದೆ ಅಂತಹುದೇ ಮತ್ತೊಂದು ಕಲ್ಪನೆಯ ಸೀಮಾ ಕ್ಷೇತ್ರವನ್ನು ಸ್ಥಾಪಿಸುವನು. ಹೀಗೆಯೇ ಅಂತ್ಯವಿಲ್ಲದೇ ಅವನದು ನಿರಂತರ ಭ್ರಮಣವೊಂದನ್ನು ನಡೆಸಿ ಸಮಸ್ಯೆಯ ಗಗನದಲ್ಲಿ ಲೀನವಾದ ಕಥೆಯೇ ಈ ದೂರಗಗನ.

ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿಗೆ ಎದುರಾಗುವ ಸಮಸ್ಯೆಗಳು ಹಲವು. ಅದನ್ನು ಎದುರಿಸುವ ಕ್ರಮವು ಹಲವು. ಅದನ್ನು ಒಪ್ಪಿಕೊಳ್ಳುವ ಪ್ರತಿಭಟಿಸುವ, ಹೊಂದಿಕೊಳ್ಳುವ ರೀತಿಯದು. ಹೆಣ್ಣು ತೆಗೆದುಕೊಳ್ಳುವ ನಿರ್ಧಾರದ ಮೇಲೆ ಕುಟುಂಬದ ಅಳಿವು–ಉಳಿವು, ಸಂತೃಪ್ತ ಜೀವನ ನಡೆಸುವವರಿಗಿಂತ ಸಮಸ್ಯೆಗಳನ್ನು ಎದುರಿಸುವವರೆ ಹೆಚ್ಚು. ಬಹುತೇಕವಾಗಿ ಹೆಣ್ಣಿನ ಬಾಳು ನರಳಾಟ, ಕೊರಗಾಟ, ಹೋರಾಟಗಳಲ್ಲಿಯೇ ಮುಕ್ತವಾಗುತ್ತದೆ. ವಿದ್ಯಾಭ್ಯಾಸ, ಆರ್ಥಿಕ ಸ್ವಾವಲಂಬನೆ, ಸಮಾಜದಲ್ಲಿ ಪಡೆಯುವ ಉನ್ನತ ಸ್ಥಾನ, ಸ್ವಾಭಿಮಾನ ಇವೇ ಮೊದಲಾದ ಅಂಶಗಳು ಹೆಣ್ಣು ಗಂಡುಗಳನ್ನು ಪ್ರತಿ ಸ್ಪರ್ಧಿಗಳನ್ನಾಗಿಸುತ್ತದೆ. ಆಗ ಸಾಮರಸ್ಯದ ಬದಲು ವೈಷಮ್ಯ ತಲೆದೋರುತ್ತದೆ.

ಟಿ.ಕೆ. ರಾಮರಾವ್‌ರವರ ಮತ್ತೊಂದು ಕಾದಂಬರಿ 'ಲಂಗರು'. ಈ ಕಾದಂಬರಿಯಲ್ಲಿ ಒಬ್ಬ ಅಲೆಮಾರಿ ಹೆಣ್ಣಿನ ಜೀವನದ ಸಂಪೂರ್ಣ ಕಥೆಯನ್ನು ಒಳಗೊಂಡಿದೆ. ಲಂಗರು ಎಂದರೆ ಸಮುದ್ರದಲ್ಲಿ ಹಡಗನ್ನು ಅಲ್ಲಾಡದ ಹಾಗೆ ನಿಲ್ಲಿಸೊ ಸಾಧನ, ಆ್ಯಂಕರ್ ಎಂದರ್ಥ. ಒಂದು ಹೆಣ್ಣು ಈ ಕಾದಂಬರಿಯಲ್ಲಿ ಇಡೀ ಬದುಕಿನ ಸ್ವಾತಂತ್ರ್ಯದಂತಹ ಸಂಕೀರ್ಣ ಸಮಸ್ಯೆಯನ್ನು, ಭಿನ್ನ ವೈಚಾರಿಕ ನೆಲೆಯಿಂದಾಗಿ ವಿರಸ ತಲೆದೋರುತ್ತದೆ. ಬಿಡುಗಡೆ ಅನಿವಾರ್ಯವಾಗುತ್ತದೆ. ಬದುಕು ಯಾಂತ್ರಿಕವಾದಾಗ ಸಾಮಾಜಿಕ ಪರಿಸರದೊಂದಿಗೆ ಹೆಣ್ಣು ಕಂಡುಕೊಳ್ಳುವ ಬದುಕಿನ ಗತಿ ಪ್ರಭಾವ ಬೀರುತ್ತದೆ.

ಸಾಂಸ್ಕೃತಿಕ ಅಧ್ಯಯನಗಳ ಮುಖ್ಯ ಶಾಖೆಗಳಲ್ಲಿ ಸ್ತ್ರೀವಾದಿ ಸಾಮಾಜಿಕ ಸಾಂಸ್ಕೃತಿಕ ಅಧ್ಯಯನವು ಒಂದು. ಈ ಕಾದಂಬರಿಯ ನಾಯಕಿ ಸಂಗೀತಾ, ಸಂಧ್ಯಾ,ಶೋಭಾದೇವಿಯಾಗಿ ಇಡೀ ಕಾದಂಬರಿಯ ಸುತ್ತಲೂ ಹೆಣ್ಣಿನ ಸಮಸ್ಯೆಗಳನ್ನು ಪುರುಷ ಸಮಾಜದ ನೆಲೆಯಿಂದ ವಿಶ್ಲೇಷಿಸುವ ಶರಣಪ್ಪ, ಚೀರದೀಪ, ಬಾಹುಬಲಿ ಹೆಣ್ಣಿನ ಅಸಹಾಯಕತೆಯನ್ನು ದೌರ್ಜನ್ಯವನ್ನು ಈ ಕಾದಂಬರಿಯಲ್ಲಿ ನೋಡಬಹುದು.

ಸಂಗೀತ ಒಬ್ಬ ಅಲೆಮಾರಿ ಹೆಣ್ಣಾಗಿ ಒಂದು ನಾಟಕ ಕಂಪನಿಗೆ ಮಾರಲ್ಪಟ್ಟವಳು. ಹುಟ್ಟು ಅಲೆಮಾರಿ, ಶಾಲೆ ಕಾಣದೆ ಬೆಳೆದಳು, ಹುಟ್ಟಿನಿಂದ ಕೀಳು ವರ್ಗ, ಮದುವೆಯೆಂಬುದು ಮರೀಚಿಕೆ ಎಂದು ನಂಬಿರುವಳಿಗೆ ನಾಟಕದ ಕಂಪನಿಯಿಂದ ತಪ್ಪಿಸಿಕೊಂಡು ಮಾಲತಿ–ಶ್ರೀವತ್ಸರ ಸ್ವಲ್ಪದಿನ ಆಶ್ರಯ ಪಡೆದ ನಂತರ ಸಂಧ್ಯಾಳಾಗಿ ಚೀರದೀಪನ ಜೊತೆ ವಿವಾಹ ಅವನ ಜೊತೆ ಸಂತೋಷದ ವೈವಾಹಿಕ ಜೀವನದ ಸ್ವಲ್ಪ ದಿನದಲ್ಲಿ ಗಂಡ ಒಬ್ಬ ದರೋಡೆಕೋರ ಎಂದು ತಿಳಿದು ಅವನ ದೌರ್ಜನ್ಯದಿಂದ

ಮಗುವನ್ನು ಕಳೆದುಕೊಂಡು ಅಲ್ಲಿಂದ ನಂತರ ಬೊಂಬಾಯಿಗೆ ಪಲಾಯನ ಅಲ್ಲಿ ಶೋಭಾದೇವಿಯಾಗಿ ಕ್ಲಬ್‌ನಲ್ಲಿ ಸಂಗೀತಗಾಯಕಿಯಾಗಿ ಜೀವನ ನಡೆಸುತ್ತಿದ್ದಳು.

ಅಲೆಮಾರಿ ಜಾತಿಯ ಹೆಣ್ಣು ಬೊಂಬಾಯಿನ ಪ್ರಸಿದ್ಧ ಗಾಯಕಿ ಆದಳು. ಅಂಥ ಕಥೆ ಬೊಂಬಾಯಿನಲ್ಲಿ ರಾಹುಲ ಮತ್ತು ಜಗದೀಪರ ಸ್ನೇಹ-ಪ್ರೀತಿ ಎರಡು ವರ್ಷಗಳಿಗೂ ಅಧಿಕ ಕಾಲ ಚಂಡಮಾರುತಕ್ಕೆ ಸಿಕ್ಕಿ ತೊಯ್ದಾಡಿ ದಿಕ್ಕೆಟ್ಟ ಜೀವನ ನೌಕೆಯನ್ನು ಸ್ಥಿಮಿತಗೊಳಿಸಲು ಲಂಗರುಗಳು ನೀರಿಗೆ ಬಿದ್ದವು.

ಒಟ್ಟಾರೆ ಟಿ.ಕೆ. ರಾಮರಾವ್ ಅವರ ಕಾದಂಬರಿಯಲ್ಲಿ ಸಾಂಸ್ಕೃತಿಕ ಮತ್ತು ಸಾಮಾಜಿಕ ಚಿಂತನಶೀಲತೆಯ ಇತಿ-ಮಿತಿಗಳನ್ನು ಕಾಣಬಹುದಾಗಿದೆ. ಅವರು ಸಮಾಜದ ಸಂಸ್ಕೃತಿಯ ಒಪ್ಪಿತ ಮೌಲ್ಯಗಳ ಒಂದು ಭಾಗವಾಗಿ ಕಾದಂಬರಿ ರಚನೆಯಲ್ಲಿ ತೊಡಗಿದ್ದಾರೆ.

ಅಧ್ಯಾಯ – ೭

ಇಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಯಲ್ಲಿ ಟಿ.ಕೆ. ರಾಮರಾವ್ ಅವರ ಕಾದಂಬರಿಗಳು ಅವಲೋಕನ

ಸಾಹಿತ್ಯ ಕ್ಷೇತ್ರದಲ್ಲಿ ಲೇಖಕನೊಬ್ಬನ ಸ್ಥಾನ ನಿರ್ದೇಶನ ಮಾಡುವಾಗ ಆ ಸಂದರ್ಭದ ಲೇಖಕರ ಕೃತಿಗಳನ್ನು ಅವಲೋಕನ ಮಾಡುವುದು ಅನಿವಾರ್ಯವಾಗುತ್ತದೆ. ಲೇಖಕನ ಸ್ಥಾನವನ್ನು ಇದಮಿತ್ಥಂ ಎಂದು ಗೆರೆ ಎಳೆದು ಹೇಳುವುದು ಕಷ್ಟಸಾಧ್ಯ. ಪ್ರತಿಯೊಬ್ಬ ಲೇಖಕರಿಗೂ ಅವರದೇ ಆದ ಇತಿ–ಮಿತಿಗಳು ಬಲ–ದೌರ್ಬಲ್ಯಗಳು ಇರುತ್ತವೆ. ಇದರ ನಡುವೆಯೂ ಲೇಖಕನೊಬ್ಬ ತನ್ನ ಪ್ರತಿಭೆ ಮತ್ತು ನೈಪುಣ್ಯವನ್ನು ಹೇಗೆ ಕಂಡರಿಸಿದ್ದಾನೆ ಎಂಬುದು ಅವನ ಸಾಧನೆಯಾಗುತ್ತದೆ. ಲೇಖಕನ ಪರಿಶ್ರಮ ಮತ್ತು ಆಳವಾದ ಜೀವನಾನುಭವ ಅವನ ಕೃತಿಯಲ್ಲೂ ಹೊರಹೊಮ್ಮುತ್ತದೆ. ಕೃತಿಯ ಸತ್ವವನ್ನು ಮತ್ತು ಲೇಖಕನ ಸ್ಥಾನವನ್ನು ನಿರ್ದೇಶಿಸುವಾಗ ವಾಸ್ತವ ಬದುಕಿನ ಸಮಸ್ಯೆ, ಅದಕ್ಕೆ ಕಾರಣವಾದ ವೈಯಕ್ತಿಕ ಹಾಗೂ ಸಾಮಾಜಿಕ–ಸಂಸ್ಕೃತಿಯ ಅಂಶಗಳು, ಸಮಸ್ಯೆಯ ನಿರ್ಮೂಲನೆಯ ಆಕಾಂಕ್ಷೆ, ವಿವರಣೆಯಲ್ಲಿಯೇ ಒಪ್ಪಂದವನ್ನು ನಿರೂಪಿಸುವ ಪ್ರಯತ್ನವನ್ನು ಟಿ.ಕೆ. ರಾಮರಾವ್ ಅವರ ಕಾದಂಬರಿಗಳಲ್ಲಿ ಕಾಣಬಹುದು.

ಪ್ರತಿಯೊಂದು ಸಂಶೋಧನಾ ವಿಷಯವನ್ನು ವೈಜ್ಞಾನಿಕ ನೆಲೆಗಟ್ಟಿನ ಆಧಾರದ ಮೇಲೆ ವಿಶ್ಲೇಷಿಸಿದಾಗ ಕೆಲವು ಪ್ರಮುಖ ಅಂಶಗಳು ಮತ್ತು ವಿಷಯಗಳು ನಮಗೆ ಗೋಚರವಾಗುತ್ತವೆ. ಟಿ.ಕೆ. ರಾಮರಾವ್ ಅವರ ಕಾದಂಬರಿಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಯಲ್ಲಿ ಅವಲೋಕಿಸಿದಾಗ ಅವರ ಸಾಮಾಜಿಕ ಮತ್ತು ಪತ್ತೇದಾರಿ ಕಾದಂಬರಿಗಳ ಭಾಷೆ, ಶೈಲಿ, ಬರವಣಿಗೆಗೆ ಅದರದೇ ಆದ ವೈಶಿಷ್ಟ್ಯವಿದ್ದರೂ ಅವರ ಶೈಲಿಗೆ ಹಲವು ಮಿತಿಗಳಿವೆ. ಹಾಗಾಗಲೂ ಆಗೀನ ಸಾಹಿತ್ಯಿಕ ಪರಂಪರೆ ತನ್ನದೇ ಆದ ಕೆಲವಾರು ಕಟ್ಟುಪಾಡುಗಳಿಗೆ ಬದ್ಧವಾಗಿ ಕೃತಿ ರಚನೆಗೆ ತೊಡಗಿಸುವಲ್ಲಿ ನನ್ನದೇ ಆದ ಸಂಶೋಧನಾ ರೀತಿಯಲ್ಲಿ ಸಾದರಪಡಿಸಿದ್ದೇನೆ.

ರಾಯರ ಸಾಮಾಜಿಕ ಕಾದಂಬರಿಗಳಲ್ಲಿ ವಸ್ತು ವೈವಿಧ್ಯವನ್ನು ಗುರುತಿಸುವಂತೆಯೇ ತಂತ್ರ ವೈವಿಧ್ಯವನ್ನು ಗುರುತಿಸಬಹುದು. ಇದಕ್ಕೆ ಅವರ ಪ್ರಯೋಗ

ಪ್ರೀಯತಯೇ ಕಾರಣ. ಸಹಜ ಅಭಿವ್ಯಕ್ತಿಯನ್ನು ಪಡೆದುಕೊಂಡ ನೂತನ ಪ್ರತಿಭೆಯನ್ನು ಅವಲಂಭಿಸಿರುತ್ತದೆ.

ಒಂದೇ ಮನೋಧರ್ಮದ, ಒಂದೆ ಪರಂಪರೆಯ ಲೇಖಕರಾದರೂ ಪ್ರತಿಯೊಬ್ಬ ಲೇಖಕನ ಭಾಷೆ, ಶೈಲಿ, ಭಿನ್ನವಾಗಿರುತ್ತದೆ. ಪ್ರತಿಭಾ ಮೂಸೆಯಲ್ಲಿ ಹೊರಹೊಮ್ಮುವ ಕಲಾಕೃತಿಯು ಆಯಾ ವ್ಯಕ್ತಿಯ ವೈಯಕ್ತಿಕತೆಯನ್ನು ಪ್ರತಿಕ್ರಿಯಿಸುವುದು ಸಹಜವಾಗಿಯೇ ಇದೆ. ನವೋದಯ ಕಾವ್ಯ ಪರಂಪರೆಯಲ್ಲಿ ಎಲ್ಲ ಕವಿಗಳ ಆಶಯ, ಮನೋಧರ್ಮ, ವಸ್ತು ಒಂದೇ ಆದರೂ ಪ್ರತಿಯೊಬ್ಬರೂ ತಮ್ಮ ವೈಶಿಷ್ಟ್ಯವನ್ನು ಎತ್ತಿ ಹಿಡಿದಿದ್ದಾರೆ. ಸಂಸ್ಕೃತ ಭೂಯಿಷ್ಠ ಶೈಲಿಯ ಕುವೆಂಪು, ಜಾನಪದ ಸೊಗಡಿನ ಬೇಂದ್ರೆ, ಸರಸ-ಲಲಿತ ಶೈಲಿಯ ಕೆ.ಎಸ್.ನ ಹೀಗೆ ಅವರವರ ವೈಯಕ್ತಿಕ ಶೈಲಿಯನ್ನು ಸ್ಪಷ್ಟವಾಗಿಯೆ ಗುರುತಿಸಬಹುದು. ಅಂತೆಯೆ ಪ್ರಗತಿಶೀಲ ಪರಂಪರೆಯಲ್ಲಿ ಕೃತಿ ರಚನೆಗೆ ತೊಡಗಿನ ಕಟ್ಟೀಮನಿ, ನಿರಂಜನ, ತ.ರಾ.ಸು. ಮೊದಲಾದವರ ಕೃತಿಗಳಲ್ಲಿ ಅ.ನ.ಕೃ. ಪ್ರಭಾವ ಕಂಡುಬಂದರೂ, ಅ.ನ.ಕೃ ಶೈಲಿಯಲ್ಲಿ ಅನಂತರದ ಬೆಳವಣಿಗೆಯಲ್ಲಿ ವಸ್ತು ಒಂದೇ ಆದರೂ ನಿರೂಪಣಾ ಧಾಟಿ ವಿಭಿನ್ನವೂ, ವೈಶಿಷ್ಟ್ಯಪೂರ್ಣವೂ ಆಗುವುದಕ್ಕೆ ಅವರದೇ ಆದ ಭಾಷಾ ಶೈಲಿಯೇ ಕಾರಣ. ಭಾಷೆಯಲ್ಲಿ ಗಾರುಡಿಗತನವನ್ನು, ಶೈಲಿಯಲ್ಲಿ ಕುಶಲತೆಯನ್ನು ಒಳಗೊಂಡ ಟಿ.ಕೆ. ರಾಮರಾವ್ ಅವರ ಶೈಲಿ ವಿನೂತನವಾದದು.

ಟಿ.ಕೆ. ರಾಮರಾವ್ ಅವರ ಬರವಣಿಗೆಗೆ ಅದರದೇ ಆದ ವೈಶಿಷ್ಟ್ಯವಿದ್ದರೂ ಅವರ ಶೈಲಿಗೆ ಹಲವು ಮಿತಿಗಳಿವೆ. ಹಾಗಾಗಲೂ ಆಗೀನ ಸಾಹಿತ್ಯಿಕ ಪರಂಪರೆಯು ಸ್ವಲ್ಪ ಮಟ್ಟಿಗೆ ಕಾರಣ ಪ್ರತಿಭಟನಾತ್ಮಕವಾಗಿ ರೂಪುಗೊಂಡ ಸಾಹಿತ್ಯ ಹಲವಾರು ಕಟ್ಟುಪಾಡುಗಳಿಗೆ ಬದ್ಧವಾಗಿ ಕೃತಿ ರಚನೆಗೆ ತೊಡಗಿತು. ಸಾಮಾಜಿಕ ಸಮಸ್ಯೆಗೆ ಇಂಬುಕೊಟ್ಟಂತೆ ಶ್ರೀ ಸಾಮಾನ್ಯನಿಗೂ ಕೃತಿ ತಲುಪಿಸುವ ಆಶಯವೇ ಅವರ ಮಿತಿಯು ಆಯಿತು.

೧. ಸಾಹಿತ್ಯವನ್ನು ಜನತೆಯ ಮಟ್ಟಕ್ಕೆ ತರಬೇಕೆನ್ನುವ ಆಕಾಂಕ್ಷೆ

೨. ಸಾಮಾನ್ಯರ ಕುಂದು ಕೊರತೆಗಳನ್ನು ವಸ್ತುವಾಗಿಸಿಕೊಳ್ಳುವ ಉದ್ದೇಶ.

೩. ವಾಸ್ತವಿಕತೆಗೆ ಬೆಲೆ ಕೊಡುವ ಉತ್ಸಾಹ.

೪. ಕನ್ನಡ ಕಾದಂಬರಿ ಕ್ಷೇತ್ರವನ್ನು ಸಮೃದ್ಧಗೊಳಿಸುವ ಮಹದಾಕಾಂಕ್ಷೆ.

೫. ಬದುಕಿಗಾಗಿಯೇ ಕೃತಿ ರಚಿಸಬೇಕಾದ ಅನಿವಾರ್ಯತೆ.

೬. ಬರದೇ ಬದುಕುವ ನಿರ್ಧಾರ.

ಈ ಎಲ್ಲಾ ಮಿತಿಗಳಿಂದಾಗಿ ಸಹಜ ಪ್ರತಿಭೆ ತಾನಾಗಿಯೇ ಹೊರಹೊಮ್ಮಿದರಕ್ಕಿಂತಲೂ, ಹೊರಹೊಮ್ಮಿಸಿದ್ದೇ ಹೆಚ್ಚು, ಸಹಜ ಪಕ್ವತೆಗಿಂತ ಪಕ್ವವಾಗಿಸುವಲ್ಲಿನ ಆತುರವು ಅದರ ಮಾಧುರ್ಯ, ಇಂಪು–ಕಂಪುಗಳನ್ನು ಹೋಗಲಾಡಿಸಿದ ಹಾಗೆ ಆದ್ದರಿಂದ ಪ್ರಗತಿ ಶೀಲರ ಆರಂಭದ ಬಹುತೇಕ ಕೃತಿಗಳ ಶೈಲಿ ಒಂದೇ ಅಚ್ಚಿನಲ್ಲಿ ಎರಕ ಹೊಯ್ದಂತೆ ಕಂಡುಬರುತ್ತದೆ. ಕ್ರಮೇಣ ಪ್ರಗತಿಶೀಲ ಧೋರಣೆಯ ಆವೇಶ ಅಬ್ಬರಗಳ ನೆರೆ ಇಳಿಯತೊಡಗಿದಂತೆ ಬರವಣಿಗೆಯಲ್ಲಿ ಪಳಗಿದ ಕೈ, ಪಕ್ವಗೊಂಡ ಭಾಷೆ, ಶೈಲಿಯಿಂದಾಗಿ ಕೃತಿಗಳಲ್ಲಿ ವಿಶಿಷ್ಟತೆ ಸಾಧ್ಯವಾಯಿತು. ರಾಮರಾವ್ ಅವರ ಶೈಲಿಯನ್ನು ಅವಲೋಕಿಸುವಾಗ ಈ ಮಿತಿಯ ಅರಿವು ಇರುವುದು ಹೆಚ್ಚು ಸೂಕ್ತವೆನಿಸುತ್ತದೆ.

ಸ್ತ್ರೀ ವರ್ಣನೆ ಬಂದಾಗಲಂತು ಲೇಖಕರ ಶೈಲಿ ನಿರರ್ಗಳವಾಗಿ ಸಾಗುತ್ತದೆ. ಬಾವತೀವ್ರತೆಯನ್ನು ಉಂಟು ಮಾಡುತ್ತದೆ. ಆದರೆ ಭಾವತಿರೇಕಕ್ಕೆ ಅವಕಾಶವೀಯುವುದಿಲ್ಲ. ಇದರ ಶೈಲಿ ಪದರ–ಪದರವಾದ ವಿವರಗಳಲ್ಲಿ ಸ್ತ್ರೀಯ ಭವ್ಯಚಿತ್ರ ಕಣ್ಮುಂದೆ ಸುಳಿಯುತ್ತದೆ.

ಸುಂದರವಾದ ಹೋಲಿಕೆಗಳ ಮೂಲಕ ಸ್ತ್ರೀಯ ಸೌಂದರ್ಯವನ್ನು ಪದಗಳಲ್ಲಿಯೇ ಸೆರೆಹಿಡಿಯಬಲ್ಲ ಶಕ್ತಿ ಹಾಗೂ ಪದ ಸಂಪತ್ತು ಟಿ.ಕೆ. ರಾಮರಾವ್ ಅವರ ಶೈಲಿಯಲ್ಲಿದೆ. ಸ್ತ್ರೀಯನ್ನು ಎಷ್ಟು ರೀತಿಯಲ್ಲಿ ವರ್ಣಿಸಿದರೂ ಲೇಖಕರಿಗೆ ತೃಪ್ತಿಯಲ್ಲಿ ಸ್ತ್ರೀಯರ ವರ್ಣನೆಯಲ್ಲಿ ಭವ್ಯತೆಯನ್ನು, ದಿವ್ಯತೆಯನ್ನು ತುಂಬುತ್ತಾರೆ. ಎಳೆ–ಎಳೆಯಾಗಿ ವರ್ಣಿಸುವ ಕಲೆಗಾರಿಕೆಯಿಂದಾಗಿ ಮನವನ್ನು ಉದ್ದೇಶಿಸುವುದಿಲ್ಲ. ಕೆರಳಿಸುವುದಿಲ್ಲ. ಗೌರವಾದರಗಳ ಬಾವವೊಂದು ಸುಳಿಯುತ್ತದೆ.

ಹೆಣ್ಣಿನ ಪ್ರತಿಯೊಂದು ವರ್ಣನೆಯಲ್ಲಿಯೂ ಒಂದು ನಾವೀನ್ಯವಿದೆ. ಹುರುಪಿದೆ, ಉತ್ಸಾಹವಿದೆ. ರಾವ್ ಅವರ ಕಾದಂಬರಿಯಲ್ಲಿ ಬರುವ ಸ್ತ್ರೀಯರೆಲ್ಲ ಸಾಮನ್ಯವಾಗಿ ಸುಂದರಿಯರೆ. ಕುರೂಪಿಗಳು ಇಲ್ಲವೇ ಇಲ್ಲವೆಂದೂ ಹೇಳಬಹುದು. ಅವರನ್ನು ಬಣ್ಣಿಸುವ ರೀತಿಯಲ್ಲಿಯೇ ಅರಸಿಕನೂ ರಸಿಕನಾಗಬೇಕು. ಸೌಂದರ್ಯ ಆರಾಧಕನಾಗಬೇಕು. ಸ್ತ್ರೀ ವರ್ಣನೆಯ ಆವೇಗದಲ್ಲಿ ಉತ್ಸಾಹ ಶೈಲಿ ಕಾಣಿಸಿಕೊಂಡರೆ ಸೌಂದರ್ಯ ನಿರೂಪಣೆಯಲ್ಲಿ ಸೌಮ್ಯ ಶೈಲಿ ಕಾಣಿಸಿಕೊಳ್ಳುತ್ತದೆ.

ಪ್ರಕೃತಿ ವರ್ಣನೆಯಲ್ಲಿ ಭಾವಪರವಶರಾಗುತ್ತಾರೆ ಅಂತಹ ಸಂದರ್ಭದಲ್ಲಿ ಅವರ ಮನಸ್ಸು ಹುಚ್ಚೆದ್ದು ಕುಣಿಯುತ್ತದೆ. ಬರಹ ಭರದಿಂದ ಸಾಗುತ್ತದೆ. ನಿರರ್ಗಳವಾದ ಶೈಲಿ ನಿರೂಪಣೆಗೆ ಗಟ್ಟಿತನವನ್ನು ಒದಗಿಸುತ್ತದೆ.

ಸೂರ್ಯಾಸ್ತದ ವರ್ಣನೆ, ಸಮುದ್ರ ವರ್ಣನೆ, ಬೆಟ್ಟ-ಗುಡ್ಡಗಳ ವರ್ಣನೆ ಮಾಗಿದ ಸಂಜೆಯ ಹೊಂಬೆಳಕಿನಲ್ಲಿ ಸಮುದ್ರರಾಜ ಸೌಮ್ಯ ಸುಂದರನಾಗಿದ್ದ.

ನೃತ್ಯವಾಗಲೀ, ಸಂಗೀತವಾಗಲೀ ಅದರ ಬಗೆಗಿನ ಅಭಿಮಾನ ದೈವಿಕವಾದುದೆಂದು ನಂಬಿದವರು ರಾವ್ ಅವರು.

ಮಾನವನಲ್ಲಿಯ ಮಾನವತೆಯನ್ನು ಹಿಂಡಿ ಹಿಪ್ಪೆಮಾಡಿ ಬಿಸುಡಲು ಆಧುನಿಕ ನಾಗರೀಕತೆ ನಿರ್ಮಿಸಿರುವ ರಾಕ್ಷಸ ಯಂತ್ರ, ಈ ಮಹಾನಗರಗಳು ಈ ಕಾಡಿನಲ್ಲಿ ಮನುಷ್ಯನನ್ನು ಬೇಟೆಯಾಡುತ್ತಾನೆ. ಸಮಾಜದಲ್ಲಿರುವ ಬಡತನವನ್ನು ಹಾಗೂ ಬಡವರ ಭವಣೆ, ಅಸಹಾಯಕತೆಗಳನ್ನು ಆಸ್ಪತ್ರೆಯ ವ್ಯವಸ್ಥೆಯನ್ನು ದೃಶ್ಯಾತ್ಮಕವಾಗಿ ಚಿತ್ರಿಸುವ ಗುಣ ರಾವ್ ಅವರದು.

ರಾಮರಾವ್ ಅವರು ಕಾದಂಬರಿಗಳಲ್ಲಿ ಸ್ವಭಾವ ಚಿತ್ರಣವನ್ನು ಮೃದು, ಗಡಸು ಸ್ವಭಾವ, ಉದ್ಧಟತನ, ನಿಷ್ಠುರ, ನಿರ್ಭೀತ ವರ್ತನೆಯಿಂದ ಕೂಡಿರುತ್ತದೆ.

ಟಿ.ಕೆ. ರಾಮರಾವ್ ಅವರು ಸ್ತ್ರೀವರ್ಣನೆ, ಪ್ರಕೃತಿವರ್ಣನೆ, ಕಲೆ-ಸಂಗೀತ, ನಗರ, ಸ್ವಭಾವ, ಭಾವ ಚಿತ್ರಣದ ಜೊತೆಗೆ ಅವರ ಸಾಮಾಜಿಕ-ಪತ್ತೇದಾರಿ ಕಾದಂಬರಿಗಳಲ್ಲಿ ವಸ್ತುವೈವಿಧ್ಯವನ್ನು ಗುರುತಿಸುವಂತೆಯೇ ತಂತ್ರವೈವಿಧ್ಯವನ್ನು ಗುರುತಿಸಬಹುದು. ಕಾದಂಬರಿಗಳು ಮಾನವ ಸ್ವಭಾವದ ಎಲ್ಲಾ ಮುಖಗಳನ್ನು ವಾಸ್ತವತೆಯ ಹಿನ್ನೆಲೆಯಲ್ಲಿ ಚಿತ್ರಿಸುತ್ತವೆ.

ಸಾಮಾಜಿಕ ಕಾದಂಬರಿಗಳಲ್ಲಿ ಸಮಾಜ ಚಿತ್ರಣವೇ ಮುಖ್ಯ ಉದ್ದೇಶವಾದರೂ ಎಲ್ಲಾ ಸಾಮಾಜಿಕ ಕಾದಂಬರಿಗಳ ದೃಷ್ಟಿಕೋನವೂ ಒಂದೇ ಆಗಿರುವುದಿಲ್ಲ. ರಾಯರ ಕಾದಂಬರಿಗಳ ಸ್ವರೂಪ ಮತ್ತು ಲಕ್ಷಣವನ್ನು ವಿವೇಚಿಸುವುದಕ್ಕೆ ಮುನ್ನ ಅದರ ಬೆಳವಣಿಗೆಯ ವಿಕಾಸದ ಹಂತಗಳನ್ನು ಮತ್ತು ಆಲೋಚನಾ ಕ್ರಮವನ್ನು ಅವಲೋಕನಾ ಮಾಡುವುದು ಕಾದಂಬರಿ ಸ್ವರೂಪದ ತಾತ್ವಿಕ ದೃಷ್ಟಿಯಿಂದ ಉಪಯುಕ್ತವಾದುದಾಗಿದೆ. ಸತ್ವಯುಕ್ತವಾದ ಸೃಜನಾತ್ಮಕ ಸೃಷ್ಟಿಕ್ರಿಯೆಗೆ ಆರಂಭದ ರಚನೆಗಳೇ ಸೋಪಾನಗಳಾಗಿವೆ. ಆದುದರಿಂದ ಮೊದಲು ಸಾಮಾಜಿಕ ಕಾದಂಬರಿಗಳ ಸಾಂಸ್ಕೃತಿಕ ಹಾಗೂ ಸಾಹಿತ್ಯದ ಹಿನ್ನೆಲೆಯನ್ನು ವಿಶ್ಲೇಷಿಸುವುದು ಅಗತ್ಯವೆಂದು ಹೇಳಿದ್ದಾರೆ.

ಸಮಾಜ ಮತ್ತು ಸಮಾಜ ಜೀವಿಯ ಅಂತರ ಸಂಬಂಧದ ಸೂಕ್ಷ್ಮಾತಿಸೂಕ್ಷ್ಮ ಅಂಶಗಳು ಕೂಡ ಗಣನೆಗೆ ಬರುತ್ತದೆ. ಆದುದರಿಂದ ಸಾಮಾಜಿಕ ಕಾದಂಬರಿಯ ವೈಶಿಷ್ಟ್ಯಗಳನ್ನು ಗುರುತಿಸುತ್ತಲೇ ವ್ಯಕ್ತಿಗಳ ಆಲೋಚನೆ, ಭಾವನೆ, ಆಶೋತ್ತರಗಳು, ಪಂಪರಂಪರಾಗತವಾಗಿ ಒಪ್ಪಿಕೊಂಡ ಮೌಲ್ಯಗಳು ಪರಸ್ಪರ ಭಿನ್ನವಾಗಿರುತ್ತವೆ.

ಇಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಯಲ್ಲಿ ಕಾದಂಬರಿ ಪ್ರಕಾರವನ್ನು ಅವಲೋಕನ ಮಾಡುವುದು ತುಂಬಾ ಕಷ್ಟಕರವಾದ ವಿಚಾರವಾಗಿದೆ. ಕಾದಂಬರಿಯಲ್ಲಿ ಕಂಡುಬರುವ ಪಾತ್ರ ಚಿತ್ರಣಗಳು ಅಂದಂದಿನ ಸಾಮಾಜಿಕ ಜೀವನ ಶೈಲಿಯನ್ನು ಮತ್ತು ಸಂಪ್ರದಾಯ ಪದ್ಧತಿಯನ್ನು ಒಳಗೊಂಡಿರುತ್ತದೆ. ಲೇಖಕರು ಕೂಡ ಸಂಪ್ರದಾಯ ಮತ್ತು ಸಂಸ್ಕೃತಿಗಳ ಜೊತೆಗೆ ಬಾಳಿ ಬದುಕಿದವರಾದ್ದರಿಂದ ಅವರ ಜೀವನ ಕ್ರಮ, ಬರವಣಿಗೆಯ ಪ್ರಕಾರವು ಸಂಸ್ಕೃತಿಯ ಇತಿ–ಮಿತಿಯೊಳಗೆ ಸಾಗಿ ಬಂದಿರುವುದನ್ನು ನಾವು ಕಾಣುತ್ತೇವೆ. ರಾಮ್‌ರಾವ್‌ರವರ ಕಾದಂಬರಿಗಳು ಬಹುತೇಕವಾಗಿ ಸಾಮಾಜಿಕ ಕಳಕಳಿಯನ್ನು ಒಳಗೊಂಡಿವೆ. ಸಮಾಜದಲ್ಲಿನ ಸ್ತರ ವಿವಾದದ ಬಗೆಗಿನ ಧೋರಣೆಯನ್ನು ತಮ್ಮ ಕಾದಂಬರಿಗಳಲ್ಲಿ ಪಾತ್ರ–ಸಂಬಂಧಗಳ ಮೂಲಕ ಕಟ್ಟಿಕೊಡುವಲ್ಲಿ ಮುಂದಾಗಿದ್ದಾರೆ.

'ಪಚ್ಚತೋರಣ' ಕಾದಂಬರಿಯಲ್ಲಿ ರಾಮಸ್ವಾಮಿ ಮತ್ತು ಶಂಕರಪ್ಪರಿಬ್ಬರು ಕುದುರೆ ಬಾಲದ (ರೇಸ್) ಜೂಜಾಟವಾಡಲು ಬಂದಿದ್ದರು. ಈ ಆಟದಲ್ಲಿ ಶಂಕರಪ್ಪ ಸೋತು ಹಣವನ್ನು ಕಳೆದುಕೊಳ್ಳುತ್ತಾನೆ. ಮತ್ತು ತನ್ನ ಸೋಲನ್ನು ಮತ್ತೊಂದು ಗೆಲುವಿನ ಮೂಲಕ ಹೋಗಲಾಡಿಸಲು ಮುಂದಾಗುತ್ತಾನೆ. ಈ ಸಂದರ್ಭದಲ್ಲಿ ರಾಮಸ್ವಾಮಿಯು ಶಂಕರಪ್ಪನನ್ನು ಎಚ್ಚರಿಸುತ್ತಾನೆ. ಶಂಕರಪ್ಪ ಈ "ಕುದುರೆ ಬಾಲದ ಜೂಜಾಟವನ್ನು ನಂಬಿ ಕೂತಿದ್ದೀವಿ ನೋಡು ನಾವೇ ಹೆಸರಗತ್ತೆಗಳಲ್ಲವೆ" ಎಂದು. ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾಗಿರುವುದೇನೆಂದರೆ ಲೇಖಕರು ಸಾಮಾಜಿಕ ಕಳಕಳಿಯನ್ನು ಇಟ್ಟುಕೊಂಡು ಜೂಜಾಡುವುದು ತಪ್ಪು ಮತ್ತು ಸಂಸ್ಕೃತಿ, ಸಂಪ್ರದಾಯ ಬದ್ಧ ರಾಷ್ಟ್ರ ಭಾರತದಲ್ಲಿ ಪ್ರಾಣಿಗಳ ಮೇಲೆ ಪಂದ್ಯ (ಬೆಟ್) ಕಟ್ಟುವುದು ಅಪಚಾರವೆಂದು ತಿಳಿಸಬಯಸುತ್ತಾರೆ. ಲೇಖಕರು ಇಂತಹ ಚಿಂತನೆಗಳ ಮೂಲಕ ಸಮಾಜದಲ್ಲಿ ಹೊಸದೊಂದು ಬದಲಾವಣೆ ತರಲು ಮುಂದಾಗಿದ್ದರು. ಸಮಾಜದಲ್ಲಿ ಪ್ರಾಣಿಗಳ ಮೇಲಿನ ಆಟದಲ್ಲಿ ಜೂಜು ಕಟ್ಟುವ ಮತ್ತು ಲಾಭ, ನಷ್ಟಗಳ ಅವಲೋಕನ ಜೊತೆ ಆರ್ಥಿಕವಾಗಿ ರಾಜ್ಯ, ರಾಷ್ಟ್ರಕ್ಕಾಗುವ

ಅನುಕೂಲ ಮತ್ತು ಅನಾನುಕೂಲಗಳ ಚಿತ್ರಣವನ್ನು ಸರಳವಾಗಿ ತಿಳಿಸುವಲ್ಲಿ ಮಹತ್ವದ ಹೆಜ್ಜೆಯನ್ನು ಇಟ್ಟಿದ್ದಾರೆ.

ಶಂಕರಪ್ಪನು ಹೆಂಡತಿ ಪಾರ್ವತಿಗೆ ಸುಳ್ಳು ಹೇಳಿ ಊಟಿಗೆ ಹೋಗಿ ಬಂದಿರುತ್ತಾನೆ. ಅದೂ ಐದನೇ ಬಾರಿ. ಊಟಿಯಲ್ಲಿ ಅಂದು ಕುದುರೆ ಜೂಜು ಹೆಚ್ಚು ಪ್ರಸಿದ್ಧಿಯಾಗಿದ್ದ ಜೂಜಾಟವಾಗಿತ್ತು. ಈ ಆಟವಾಡುವವರು ದೊಡ್ಡ ಮನುಷ್ಯರು ಎಂಬ ನಾಣ್ನುಡಿ ಹರಡಿಕೊಂಡಿತು. ಊಟಿಯ ಚಳಿಯನ್ನು ತಡೆಯಲಾಗದೆ ಸ್ವಲ್ಪ-ಸ್ವಲ್ಪವೇ ವಿದೇಶಿ ಮಧ್ಯವನ್ನು ಸೇವಿಸಿ, ಪರಸ್ತ್ರೀಯಳ ಸಖ್ಯವನ್ನು ಹೊಂದುವುದು ಅಂದಿನ ಮೋಜಿನ ರೀತಿ-ನೀತಿಯಾಗಿತ್ತು. ಈ ಎಲ್ಲಾ ಕೆಲಸವನ್ನು ಶಂಕರಪ್ಪ ಚಾಚು ತಪ್ಪದೆ ಮಾಡುತ್ತಿದ್ದ. ಇಲ್ಲಿ ಲೇಖಕರು ಚಿಂತಿಸುವ ಕ್ರಮ ಹೇಗಿದೆಯೆಂದರೆ "ಶಂಕರಪ್ಪನ ಹೆಂಡತಿ ಪಾರ್ವತಿಯು ಮೈ ತುಂಬ ಸೆರಗನ್ನು ಹೊದ್ದು, ಬೆಳಿಗ್ಗೆ ತುಳಸಿಪೂಜೆ, ದೇವತಾ ಕಾರ್ಯ ನಂತರದಲ್ಲಿ ಗಂಡನ ಪಾದಪೂಜೆ ಮಾಡುವುದಾಗಿದೆ". ಶಂಕರಪ್ಪನಿಗೆ ಪರಸ್ತ್ರೀಯೊಬ್ಬಳ ಸೊಂಟವನ್ನು ಹಿಡಿದಾಗ ಆಗುವ ಅನುಭವ, ತನ್ನ ಹೆಂಡತಿಯ ಸೊಂಟವನ್ನು ಹಿಡಿದಾಗ ಆಗುವುದಿಲ್ಲವೆಂಬ ಪುರುಷನ ಧೋರಣೆಯನ್ನು ಖಂಡಿಸುವಲ್ಲಿ ಮುಂದಾಗಿ ಎಲ್ಲಾ ಸ್ತ್ರೀಯರ ಸಖ್ಯವೂ ಒಂದೇ ಆಗಿದ್ದು ಅದನ್ನು ವಿವಿಧ ಸ್ತರಗಳಲ್ಲಿ ನೋಡಬಾರದೆಂದು ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಒಂದು ಹೆಣ್ಣನ್ನು ಸಂಪ್ರದಾಯ, ಸಂಸ್ಕೃತಿ ಹೆಸರಿನಲ್ಲಿ ಬಚ್ಚಿಟ್ಟು, ಮತ್ತೊಂದು ನೆಲೆಯಲ್ಲಿ ವಿಶೇಷ ಸಂಪ್ರದಾಯವನ್ನು ಮುಂದುವರೆಸುವ, ಪ್ರೋತ್ಸಾಹಿಸುವ ವರ್ಗವನ್ನು ಲೇಖಕರು ಖಂಡಿಸಿ, ಹೊಸ ಸಂಸ್ಕೃತಿಯ ಸೃಷ್ಟಿಯ ಕಡೆಗೆ ಹೆಚ್ಚು ಒತ್ತು ಕೊಡುತ್ತಾರೆ.

ಪಚ್ಚತೋರಣ ಕಾದಂಬರಿಯಲ್ಲಿ ಚಂದ್ರಶೇಖರ್ ಮತ್ತು ಕಲ್ಪನಾ ಎಂಬ ಪಾತ್ರ ಚಿತ್ರಣದಲ್ಲಿ ಮೂಡಿಬರುವ ಅಂತರ ಜಾತಿಯ ವಿವಾಹವನ್ನು ಅವರ ಹಿರಿಯರು ಪ್ರತಿರೋಧಿಸುತ್ತಾರೆ. ಚಂದ್ರಶೇಖರ್ ತಮ್ಮ ಪ್ರೇಮ ವಿಚಾರದ ಬಗ್ಗೆ ತಂದೆ ಶಂಕರಪ್ಪನಲ್ಲಿ ಮಾತನಾಡುತ್ತಾನೆ. ಆಗ ಶಂಕರಪ್ಪನು ಬೇರೆ ಜಾತಿಯ ಹುಡುಗಿಯನ್ನು ವಿರೋಧಿಸುತ್ತಾನೆ. ಆಗ ಚಂದ್ರಶೇಖರ್ ಜಾತಿ ನನಗೆ ಮುಖ್ಯವಲ್ಲ ನನ್ನ ಪ್ರೀತಿಯ ಕಲ್ಪನಾ ಮುಖ್ಯವೆಂದು ತನ್ನ ನಿರ್ಧಾರ ತಿಳಿಸಿದಾಗ ತಂದೆಯ ಮಾತಿಗೆ ಬೇಸರಪಟ್ಟು ನಾನು ಜೀವನದಲ್ಲಿ ಮದುವೆಯಾದರೆ ಕಲ್ಪನಾಳನ್ನು ಮಾತ್ರ, ಇಲ್ಲವಾದರೆ ನನ್ನ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ವಿದೇಶಕ್ಕೆ ತೆರಳುತ್ತೇನೆಂದು ಕಠಿಣವಾದ ನಿರ್ಧಾರಮಾಡಿ ಹೊರಡಲು ಸಿದ್ಧತೆ ಮಾಡಿಕೊಳ್ಳುತ್ತಾನೆ. ಆಗ ಶಂಕರಪ್ಪ ಪಶ್ಚಾತ್ತಾಪಪಟ್ಟು ಮಗನ ಸಂತೋಷದ

ಮುಂದೆ ಜಾತಿ ಮುಖ್ಯವಲ್ಲ ಎಂದು ವಿವಾಹಕ್ಕೆ ಒಪ್ಪಿಗೆಕೊಡುತ್ತಾನೆ. ಮಾನವೀಯ ನೆಲೆಯಲ್ಲಿ ಚಿಂತಿಸಿ, ಸಂಪ್ರದಾಯ ಪದ್ಧತಿಯಲ್ಲಿ ಬದಲಾವಣೆ ಮಾಡಿಕೊಂಡು, ಅಂತರ್‌ಜಾತಿ ವಿವಾಹಕ್ಕೆ ಪ್ರೋತ್ಸಾಹಿಸಿದ ಹಿರಿಯರನ್ನು ಅಭಿನಂದಿಸುತ್ತಾರೆ. ಅಂತರ್ಜಾತಿ ವಿವಾಹದಿಂದಾಗಿ ಸಮಾಜದಲ್ಲಿ ನಾವೆಲ್ಲರೂ ಒಂದೇ ಕುಟುಂಬದವರೆಂಬ ಏಕತೆಯನ್ನು ನೋಡಬಹುದೆಂಬ ಆಶಯವನ್ನು ರಾಯರು ವ್ಯಕ್ತಪಡಿಸುತ್ತಾರೆ.

'ಆಸರೆಯ ಬೊಂಬೆ' ಕೃತಿಯಲ್ಲಿನ ಸವಿತಾಳನ್ನು ಮುಗ್ಧ ಹೆಣ್ಣು ಮಗಳಾಗಿ ಲೇಖಕರು ಚಿತ್ರಿಸಿದ್ದಾರೆ. ಸವಿತಾ ಸ್ವಭಾವತಃ ಸುಂದರಿಯಾಗಿದ್ದು, ತನ್ನ ಸೌಂದರ್ಯಕ್ಕೆ ಮೆರಗು ತರುವಂತ್ತೆ ಅಲಂಕರಿಸಿಕೊಂಡರೆ ಇನ್ನೂ ಅದ್ಭುತವಾಗಿ ಕಾಣಿಸುತ್ತಾಳೆಂದು ತಿಳಿಸುತ್ತಾರೆ. ಇವಳ ಸರಳತೆ ಮತ್ತು ಸೌಂದರ್ಯಕ್ಕೆ ಅರುಣ ಸೋತು ಪ್ರೀತಿಸುತ್ತಾನೆ. ಈ ಪ್ರೀತಿ ಇಬ್ಬರಲ್ಲೂ ಬಾಲ್ಯದಿಂದಲೂ ಸ್ನೇಹವಾಗಿ, ಪ್ರೀತಿಯಾಗಿರುತ್ತದೆ. ಆದರೆ ಅರುಣ ಸವಿತಾಳ ತಂದೆಯ ಮೇಲೆ ದ್ವೇಷಕ್ಕಾಗಿ, ಕಲಾವಿದೆಯಾದ ರೋಹಿಣಿಯ ಸೌಂದರ್ಯಕ್ಕೆ ಸೋತು ಆಕೆಯನ್ನು ಪ್ರೀತಿಸುತ್ತಾನೆ. ಅರುಣ ತನ್ನ ತಂದೆಯ ಕೊನೆಯ ಆಸೆಯಂತೆ ಸವಿತಾಳನ್ನು ವಿವಾಹವಾದ ದಿನವೇ ಆಕೆಯನ್ನು ಬಿಟ್ಟು ರೋಹಿಣಿಯ ಜೊತೆ ಹೊಸಪೇಟೆಗೆ ಹೋಗಿ ಜೀವನ ನಡೆಸುತ್ತಾನೆ. ಆದರೂ ಕೂಡ ಎಲ್ಲಾ ವಿಷಯ ತಿಳಿದ ಸವಿತಾ ಅರುಣನಲ್ಲಿ ಆಸರೆ ಬಯಸಿ ಬರುತ್ತಾಳೆ. ಆಗ ಅವನು ನಿರಾಕರಿಸುತ್ತಾನೆ. ಕೊನೆಗೆ ತಪ್ಪಿನ ಅರಿವಾಗಿ ಸವಿತಳನ್ನು ಹುಡುಕಿ ಬಂದು ಅವಳಲ್ಲಿ ಕ್ಷಮೆ ಕೇಳುತ್ತಾನೆ.

ಈ ಕೃತಿಯಲ್ಲಿ ಲೇಖಕರು ಪುರುಷ ಪ್ರಧಾನವಾದ ಸಮಾಜದಲ್ಲಿ ಹೆಣ್ಣಿನ ಶೋಷಣೆಯನ್ನು ಮಾಡಿದ್ದರೂ ಕೂಡ ಆಕೆಗೆ ಅನ್ಯಾಯವಾಗುವುದಕ್ಕೆ ಬಿಡುವುದಿಲ್ಲ. ಮತ್ತು ಸ್ತ್ರೀ ಎಂಥ ಸಮಸ್ಯೆಯನ್ನೇ ಆದರೂ ಸ್ವೀಕರಿಸಿ ಎದುರಿಸಬಲ್ಲಳು ಮತ್ತು ಸಾಮಾಜಿಕವಾಗಿಯೂ, ಸಾಂಪ್ರದಾಯಿಕವಾಗಿಯೂ ಅಪವಾದಕ್ಕೆ ಗುರಿಯಾಗಿರುವ ಅರುಣನ್ನಂತವರನ್ನು ಮನ್ನಿಸಿ ಪರಿವರ್ತಿಸುವ ಬಗೆಯನ್ನು ಮಾನವೀಯ ನೆಲೆಯಲ್ಲಿ ಒಪ್ಪುತ್ತಾರೆ. ಆದರೆ ಸಾಮಾಜಿಕ ಪದ್ಧತಿಯಲ್ಲಿ ದ್ವೇಷದಿಂದ ಬದುಕು ನಾಶವಾಗುತ್ತದೆಂದು ತಿಳಿಸಿದ್ದಾರೆ.

'ಕೆಂಪುಮಣ್ಣು' ಈ ಕಾದಂಬರಿಯಲ್ಲಿ ಲೇಖಕರು ಹೆಣ್ಣು, ಹೊನ್ನು, ಮಣ್ಣು ಹಿಂದೆ ನಡೆಯುವ ವ್ಯಕ್ತಿಗೆ ಯುದ್ಧವನ್ನು, ಅದರಿಂದಾಗುವ ಅನಾಹುತಗಳನ್ನು ಕಾಣಬಹುದು. ರಾಯರ ಪತ್ತೇದಾರಿ ಕಾದಂಬರಿಯಾದ ಈ ಕೆಂಪುಮಣ್ಣಿನ ಕುತೂಹಲಕಾರಿ, ಅಪಾಯಕಾರಿ, ರಹಸ್ಯವಾದ ಕಥೆಯನ್ನು ಕಾಣಬಹುದು. ಈ ಕಥೆಯಲ್ಲಿ

ಕೆಂಪು ಮಣ್ಣಿನ ಅಥವಾ ಕೆಮ್ಮಟ್ಟಿಯ ಇಡೀ ಕುಟುಂಬದ ವ್ಯಕ್ತಿಗಳ ಮೇಲೆ ಅನುಮಾನ ಬರುವಂತಹ ಸ್ಥಿತಿಗತಿಗಳನ್ನು ಕಾಣಬಹುದು.

"ಕಿಟಕಿ ಗಾಜಿನಲ್ಲಿ ಕಾಣೊ ಪ್ರತಿಬಿಂಬದ ನಾಟಕ ಅದೆಷ್ಟು ಚೆನ್ನಾಗಿತ್ತು! ಕೆಂಪುಮಣ್ಣು!" ಒಬ್ಬ ಸಾಮಾನ್ಯ ನರ್ಸ್‌ಗೆ ಲಕ್ಷಾಂತರ ಬೆಲೆಯ ಕೆಂಪುಮಣ್ಣಿನ ಆಸ್ತಿ ಲಭ್ಯವಾದ್ರೆ ಇನ್ನೆಷ್ಟು ಕಾಲ ಸಹಿಸ್ತಾ ಬದುಕಿರ್ಲಿ? ನೀನು ಚೆನ್ನಾಗಿ ನರಳ್ತಾ ಸಜೀವವಾಗಿ ಬೆಂದು ಹೋಗೊದೊಂದೇ ನನಗೆ ಬೇಕಾದ್ದು ಎಂದು ಚಂದ್ರಮ್ಮ ಆರಭಿಯ ಮೇಲಿನ ಕೋಪದಿಂದ ಹೇಳುತ್ತಾಳೆ. ಚಂದ್ರಮ್ಮ ಕೆಮ್ಮಟ್ಟಿ ಮನೆತನದ ಹಿರಿಯ, ಗಂಭೀರವಾದ ವ್ಯಕ್ತಿ ಎಂದೂ ತಿಳಿದಿದ್ದ ಎಲ್ಲರಿಗೂ ಆಕೆ ಗೋಮುಖವ್ಯಾಘ್ರ ಎಂದು ಹೇಳುತ್ತಿದ್ದರು. ಆಕೆ ಆಸ್ತಿಯ ವ್ಯಾಮೋಹದಿಂದ, ಪ್ರತೀಕಾರದಿಂದ ಕೊಲೆಗಳನ್ನು ಮಾಡಿದಳು. ಅದು ಯಾರಿಗೂ ಕೊನೆಯವರೆವಿಗೂ ಗೊತ್ತಾಗುವುದಿಲ್ಲ.

ಲೇಖಕರು ಕಾದಂಬರಿಗಳಲ್ಲಿ ಚಿತ್ರಿಸಿರುವ ಪ್ರತಿಯೊಂದು ಸ್ತ್ರೀಪಾತ್ರ ಚಿತ್ರಣಗಳು ಕುಟುಂಬದೊಳಗೆ ಭಾವನಾತ್ಮಕ ಸಂಬಂಧಗಳೊಂದಿಗೆ, ಸಾಮಾಜಿಕ ಸ್ವಾತಂತ್ರ್ಯವನ್ನು ನೀಡಿದ್ದರ ಉದ್ದೇಶ ಆಕೆಯೇ ಸಮಾಜಕ್ಕೆ ಕಂಟಕವಾಗಿರಬಾರದು. ಸ್ತ್ರೀಯು ಸಮಾಜಕ್ಕೆ ಆದರ್ಶ ಪ್ರಿಯಳಾಗಿ, ಮಾದರಿಯಾಗಿರಬೇಕೆ ಹೊರತು, ಭೂಕಬಳಿಕೆ, ಸೇಡುಗಳಿಂದ ವ್ಯಕ್ತಿಯ ನಾಶದ ಹಿಂದೆ ಬೆನ್ನತ್ತಿ ಹೋಗಬಾರದೆಂದು ಹೇಳಿದ್ದಾರೆ. ಯಾವುದೇ ರೀತಿಯ ಹೆಣ್ಣು-ಹೊನ್ನು-ಮಣ್ಣು ಯಾರಿಗಾದರೂ ಸರಿಯೇ ತಾನಾಗೇ ಒಲಿಯಬೇಕೆಂದು ಹೇಳುತ್ತಾರೆ.

ಟಿ.ಕೆ. ರಾಮರಾವ್ ಅವರ ಮತ್ತೊಂದು ಕೃತಿಯಾದ 'ಆಕಾಶದೀಪ'ದಲ್ಲಿ ವರ್ಗಸಂಘರ್ಷವನ್ನು ಕಾಣಬಹುದು. ಒಬ್ಬ ಬಡ ಪತ್ರಿಕಾ ವರದಿಗಾರನಿಂದ ಕಾದಂಬರಿ ಪ್ರಾರಂಭವಾಗುತ್ತದೆ. ಒಬ್ಬ ಆದರ್ಶವಾದಿ ಪತ್ರಿಕೆಗಾರನ ಜೀವನ ಒಂದು ಲೇಖನದಿಂದ ಹೇಗೆ ಪ್ರಾರಂಭವಾಗಿ-ಅಂತ್ಯವಾಗುತ್ತದೆ ಎಂಬುದರ ಬಗ್ಗೆ ಆಕಾಶದೀಪ ಎಂಬ ಶಿರೋನಾಮದಲ್ಲಿರುವಂತಹ ಪಾತ್ರ ಚಿತ್ರಣವನ್ನು ನೋಡಬಹುದು. ಆಕಾಶದೀಪ ಕೈಗೆ ಎಟುಕಲಾರದು ಎಂಬ ಆಶಯದೊಂದಿಗೆ ಮೂಡಿಬಂದಿದೆ. ಕಲ್ಪನೆ, ಕನಸು ಕಟ್ಟಬಾರದು ದೂರ ಗಗನದ ಹಾಗೆ ಅಂತ. "ಹೌದು ಆಕಾಶ ಪ್ರತಿದಿನವೂ ಹೊಸತು, ಅದಕ್ಕೆ ಅಂಚುಕಟ್ಟೆ, ಸೀಮಾರೇಖೆ ಒಂದು ಇಲ್ಲ. ಅಲ್ಲಿಗೆ ಹಾರಿ ಹೋಗೋಣ ಅನ್ನಿಸುತ್ತೆ ಹಾಗೆ ಹಾರಿಬಂದಾಗ ಏನು ಕಾಣುತ್ತೆ? ಮತ್ತೆ ಮುಂದಕ್ಕೆ ಅದೇ ರಂಗಿನ ಅನಂತ ಆಕಾಶ, ಮತ್ತೂ ಮುಂದಕ್ಕೆ ಅದೇ".

"ಕಣ್ಣೀರು ಬರೋದು ನೆಲಕ್ಕೆ ಬೀಳೋದಿಕ್ಕಂತೆ, ಪ್ರಪಂಚದಲ್ಲಿ ಪ್ರೀತಿ ಹುಟ್ಟೋದು ಸಾಯೋದಿಕ್ಕಂತೆ"

ಪ್ರೀತಿ ಒಂದು ಸಲ ಒಬ್ಬರಲ್ಲಿ ಹುಟ್ಟಿದರೆ ಅದು ಯಾವತ್ತಿಗೂ, ಅಳಿಸಿ ಹೋಗುವುದಿಲ್ಲ ಅದು ಶುದ್ಧವಾದ, ಸ್ವಚ್ಛಂದಂತ್ತೆ ಪ್ರವೇಹಿಸುತ್ತದೆ. ಶಿವಶಂಕರ್ ಈ ಕೃತಿಯ ಪಾತ್ರಧಾರಿ. ಮೋಹನ ರಾಯರ ಮಗಳನ್ನು ಪ್ರೀತಿಸಿದ ಇವನು ಬೇರೆ ಯಾರನ್ನೂ ಮನಸ್ಸಿನಲ್ಲಿ ಕಲ್ಪಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಇವನನ್ನು ಗಿರಿಬಾಲಾ, ಅಖಿಲಾ ಪ್ರೀತಿಸುತ್ತಾರೆ. ಆದರೆ ಅವನು ಕಿರಣಾಳನ್ನು ಬಿಟ್ಟು ಬೇರೆಯಾರು ಮನಸ್ಸಿನಲ್ಲೂ ಸುಳಿಯುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳುತ್ತಾನೆ.

ಕಿರಣಾಳ ಪುನರ್ ವಿವಾಹಕ್ಕೆ ತಂದೆ ಮೋಹನರಾಯರು ನಿರಾಕರಿಸುತ್ತಾರೆ. ಕಾರಣ ವರ್ಗ ಸಂಘರ್ಷ. ಕನಸು ಕಾಣೋವಾಗಲು ಅಂತಸ್ತಿನ ಅರಿವು ಇರಬೇಕು. ಕನಸು ಕನಸಾಗಿಯೇ ಉಳಿದರೆ ಚೆಂದ ಅದರ ಮೇಲೆ ಮನುಷ್ಯನಿಗೆ ಆವರಣದ ಪ್ರಜ್ಞೆಯೂ ಇರಬೇಕು ಎಂದು ರಾಯರು ಶಿವಶಂಕರ್‌ಗೆ ಹೇಳುತ್ತಾರೆ. ಅಂತಸ್ತು ಅನ್ನೋ ಪದ ಪ್ರೀತಿಯಲ್ಲಿ ಬರುವುದಿಲ್ಲ.

ಲೇಖಕರು ಈ ಕೃತಿಯಲ್ಲಿ ಯಾವಾಗಲೂ ಶೋಷಿತ ಸಮಾಜ ಹಾಗೂ ವರ್ಗಗಳ ನಡುವಿನ ಸಂಘರ್ಷವನ್ನು ಹೋಗಲಾಡಿಸಿ ಸಾಮರಸ್ಯದಿಂದ ಬಾಳುವ ಅವಕಾಶ ಮಾಡಿಕೊಡಬೇಕೆಂದು ಚಿಂತಿಸುತ್ತಿದ್ದರು. ಅವರು ಸಾಮಾಜಿಕ ಚಿಂತನೆಯನ್ನು ಕುಟುಂಬದ ಸದಸ್ಯರ ಮೇಲೆ ಕಂಡುಕೊಂಡು, ಅಲ್ಲಿನ ನ್ಯೂನತೆಗಳನ್ನು ಸರಿಪಡಿಸುವಲ್ಲಿ ಪ್ರಥಮವಾಗಿ ಹೆಜ್ಜೆ ಇಟ್ಟು ಸಾಮಾಜಿಕ ಜೀವನ ಶೈಲಿಯನ್ನು ಚಿತ್ರಿಸುತ್ತಾರೆ. ಅವರ 'ಆಕಾಶದೀಪ' ಕೃತಿಯ ಕಿರಣಾಳನ್ನು ಪರಿಚಯಿಸುತ್ತಾ, ಆಕೆಯ ಪುನರ್ ವಿವಾಹಕ್ಕೆ ಪ್ರೋತ್ಸಾಹ ನೀಡಿದ್ದಾರೆ.

ಉಪಸಂಹಾರ

"ಟಿ.ಕೆ. ರಾಮರಾವ್‌ರ ಕಾದಂಬರಿಗಳು" ಎಂಬ ವಿಚಾರವನ್ನು ತೆಗೆದುಕೊಂಡು ಪ್ರಸ್ತುತ ಸಾಲಿನ (೨೦೧೨-೧೩) ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಎಂ.ಫಿಲ್ ವಿದ್ಯಾರ್ಥಿ ವಿನೋದ ಕೆ.ಎನ್. ಆದ ನಾನು ಈ ಪ್ರಬಂಧವನ್ನು ಸಿದ್ಧಪಡಿಸಲು ನಿರ್ಧರಿಸಿದ್ದೇನೆ.

ಟಿ.ಕೆ. ರಾಮರಾವ್ ಅವರ ಕಾದಂಬರಿಗಳಲ್ಲಿ ಸಾಮಾಜಿಕ ಚಿಂತನೆ ತುಂಬಾ ಅದ್ಭುತವಾಗಿ ಮೂಢಿಬಂದಿದೆ. ಅವರು ಸಮಾಜದ ವಿವಿಧ ಸ್ತರಗಳಾದ ಜಾತಿವ್ಯವಸ್ಥೆ, ವರ್ಗವ್ಯವಸ್ಥೆ, ಸಂಪ್ರದಾಯ ವ್ಯವಸ್ಥೆ, ಕೌಟುಂಬಿಕ ಮತ್ತು ಬಾಹ್ಯ ಸಂಬಂಧಗಳು, ಲಿಂಗ ರಾಜಕಾರಣ, ಸಾಮಾಜಿಕ ಕಳಕಳಿಯಿಂದ ಆರ್ಥಿಕ ನೆಲೆಯಲ್ಲಿ, ಶೈಕ್ಷಣಿಕ ನೆಲೆಯಲ್ಲಿ ಧಾರ್ಮಿಕ ನೆಲೆಯಲ್ಲಿ, ಆಡಳಿತಾತ್ಮಕ ನೆಲೆಯನ್ನು ಸೂಕ್ಷ್ಮವಾಗಿ ನೋಡಿದ್ದಾರೆ. ಅವರು ರಚಿಸಿರುವ ಒಂದೊಂದು ಕಾದಂಬರಿಗಳಲ್ಲಿನ ಪಾತ್ರ ಚಿತ್ರಣಗಳು ಆಯಾ ಸಮಾಜ ಮತ್ತು ಸಂದರ್ಭದ ನೈಜ ಚಿತ್ರಣಗಳಾಗಿವೆ.

ಟಿ.ಕೆ. ರಾಮರಾವ್ ಅವರು ಮೊದಲಿಗೆ ತಮ್ಮ ಬರವಣಿಗೆಯನ್ನು ಕಥೆಗಳ ಮೂಲಕ ಪ್ರಾರಂಭಿಸಿದರು. ಅವರ ಕಥೆಗಳು ಚಿಕ್ಕದಾಗಿದ್ದರೂ, ಚೊಕ್ಕವಾಗಿ ಕಂಡು ಬಂದು ಓದುಗರನ್ನು ಆಕರ್ಷಿಸುವಲ್ಲಿ ಯಶಸ್ವಿಯಾದವು. ಈ ಯಶಸ್ಸಿನ ಹಿನ್ನೆಲೆಯನ್ನು ಇಟ್ಟುಕೊಂಡು, ಸಾಮಾಜಿಕ ಜೀವನ ಕ್ರಮವನ್ನು ಸವಿವರವಾಗಿ ಹೇಳಲು ಸಹಕಾರಿಯಾಗುವಂತಹ ಸಾಹಿತ್ಯದಲ್ಲಿ ಧೀರ್ಘ ಪ್ರಕಾರವಾದಂತಹ ಕಾದಂಬರಿ ಪ್ರಕಾರವನ್ನು ಆಯ್ಕೆಮಾಡಿಕೊಂಡರು. ಈ ಪ್ರಕಾರದಲ್ಲಿ ಸಾಮಾಜಿಕ ನೆಲೆಯಲ್ಲಿ ಕೃತಿ ರಚನೆಮಾಡಿ ಹಾಗೆಯೇ ಪತ್ತೇದಾರಿ ಎಂಬ ನಿಗೂಢತೆಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಕೃತಿ ರಚಿಸಿ ಯಶಸ್ಸು ಗಳಿಸಿದವರಲ್ಲಿ ಇವರು ಪ್ರಮುಖರು.

ಟಿ.ಕೆ. ರಾಮರಾವ್ ಅವರ ಕಾದಂಬರಿಯ ಪಾತ್ರಗಳು ನಮ್ಮ ದೈನಂದಿನ ಜೀವನದ ಜೊತೆ-ಜೊತೆಗೆ ವ್ಯವಹರಿಸುತ್ತವೆಯೋ ಏನೋ ಎಂಬ ಅನುಭವ ಸಹೃದಯನಿಗೆ ಉಂಟಾಗುವಂತೆ ವ್ಯಕ್ತಿಗಳ ಮನದಾಳದ ಮೂಲೆ-ಮಗ್ಗುಲುಗಳನ್ನು ಶೋಧಿಸಿ ಅಲ್ಲಿ ಅಂತಸ್ತವಾಗಿರುವ ಬಾವ ಸಾಮ್ರಾಜ್ಯದ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ತಮ್ಮ ಪ್ರತಿಭೆಯ ನೈಜ ಕಣ್ಣಿನಿಂದ ದರ್ಶಿಸಿ ಅವುಗಳನ್ನು ಚಿತ್ರವತ್ತಾಗಿ ಕಾದಂಬರಿಯಲ್ಲಿ

ಭಾವಾತಿರೇಕಗಳ ಅಥವಾ ತಾರ್ಕಿಕವಾದ ವೈಚಾರಿಕತೆಯಿಂದ ಮೂಡಿಬರುವಲ್ಲಿ ಆ ಪಾತ್ರಗಳು ತ್ರಿವಿಕ್ರಮದಂತೆ ಓದುಗರ ಮನದಾಳದಲ್ಲಿ ವ್ಯಾಪಿಸಿ ಬಿಡುತ್ತವೆ.

ಕನ್ನಡ ಪತ್ತೇದಾರಿ ಸಾಹಿತ್ಯ ಪ್ರಕಾರದ ಅತಿದೊಡ್ಡ ಹೆಸರು ಟಿ.ಕೆ. ರಾಮರಾವ್‌ರದು. ಬರೆಯುತ್ತಿದ್ದಾಗ ಅತ್ಯಂತ ಬೇಡಿಕೆಯಲ್ಲಿದ್ದ, ಬೇಡಿಕೆ ಪೂರೈಸಲು ಸಾಧ್ಯವಾಗದಿದ್ದ, ಅತಿದೊಡ್ಡ ಓದುಗರ ಬಳಗವನ್ನು ಗಳಿಸಿಕೊಂಡಿದ್ದ ಅಪರೂಪ ಸಾಧನಶೀಲರು ಟಿ.ಕೆ. ರಾಮರಾವ್ ಅವರು. ಇವರ ಸೊಗಸಾದ ಶೈಲಿಯ ಬರವಣಿಗೆ, ಆತ್ಮೀಯ-ಸರಳ ಚೌಕಟ್ಟು ಮೊದಲಿನಿಂದ ಕೊನೆಯವರೆವಿಗೂ ಕುತೂಹಲವನ್ನು ಉಳಿಸಿಕೊಂಡು ಹೋಗುವುದರ ಜೊತೆಗೆ ಪರಿಪೂರ್ಣವಾದ ಸ್ಥಳೀಯ ಮೆರಗು, ಸ್ಥಳೀಯ ಭಾಷೆ, ಸುಪರಿಸ್ಥಿತ ಸ್ಥಳನಾಮಗಳ ಬಳಕೆ, ಮತ್ತೆ ಖಚಿತವಾದ ತಾಂತ್ರಿಕ ಮತ್ತು ಕಾನೂನು ವಿವರಗಳು.

ಟಿ.ಕೆ. ರಾಮರಾವ್ ಅವರು ಯಾವಾಗಲೂ ಕುತೂಹಲಿಗಳು, ಹೊಸ-ಹೊಸ ವಿಷಯಗಳನ್ನು ತಿಳಿದುಕೊಳ್ಳಲು ಯಾವಾಗಲೂ ಹೆಜ್ಜೆ ಮುಂದಿಟ್ಟು ತೊಡಗಿಕೊಳ್ಳುತ್ತಿದ್ದರು. ಅಪರಾಧ ಪ್ರಪಂಚದ ಆಗು-ಹೋಗುಗಳ ಕಥೆಗಳನ್ನು ಸಂಬಂಧಪಟ್ಟವರಿಂದ ಕೇಳಿ ತಿಳಿದುಕೊಳ್ಳುತ್ತಿದ್ದರು. ಈ ಕಾರಣಕ್ಕಾಗಿಯೇ ಹಿರಿಯ ಪೋಲೀಸ್ ಅಧಿಕಾರಿಗಳನ್ನು, ಜೈಲು ಅಧಿಕಾರಿಗಳನ್ನು ಸ್ನೇಹಿತರಾಗಿಸಿಕೊಂಡಿದ್ದರು. ವಿವಿಧ ವಿವರಗಳನ್ನು ತಮ್ಮ ಕಾದಂಬರಿಗಳಲ್ಲಿ ತಿಳಿಸುವಾಗ ಸ್ವಲ್ಪವೂ ತಪ್ಪಾಗಬಾರದು ಎನ್ನುವುದಕ್ಕಾಗಿ ಎಂಥ ಹಿರಿಯ ಅಧಿಕಾರಿಗಳೊಂದಿಗೆ ಆಯುಧಗಳು, ನೀತಿನಿಯಮಗಳು, ಕಾನೂನು ಮತ್ತು ಪೊಲೀಸ್ ನಡಾವಳಿಗಳನ್ನೆಲ್ಲ ವಿವರವಾಗಿ ಚರ್ಚಿಸುತ್ತಿದ್ದರು.

ಟಿ.ಕೆ. ರಾಮರಾವ್ ಅವರು ಮೊದ ಮೊದಲು ಸಣ್ಣ ಕಥೆಗಳನ್ನು ಸಾಮಾಜಿಕ ಪತ್ತೇದಾರಿ ಕಾದಂಬರಿಗಳನ್ನು ಬರೆದರು. ರಾಯರ ಸಾಮಾಜಿಕ ಕಳಕಳಿಯುಳ್ಳ ಕಾದಂಬರಿ 'ಬಂಗಾರದ ಮನುಷ್ಯ' ಇದು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆ ಎನ್ನಬಹುದು. ಈ ಕೃತಿ ಇವರಿಗೆ ಹೆಚ್ಚು ಗೌರವಾಧಾರಗಳನ್ನು ತಂದುಕೊಟ್ಟಿತು.

ಇವರ ಕಾದಂಬರಿಯಲ್ಲಿ ಸಾಮಾಜಿಕ, ಸಾಂಪ್ರದಾಯಿಕ, ಧಾರ್ಮಿಕ ಆಚಾರಣೆಗಳು ಮಾನವ ಕುಲಕ್ಕೆ ಹೇಗೆ ಸಾಧಕ ಬಾಧಕಗಳನ್ನು ಸೃಷ್ಟಿಸುತ್ತವೆ ಮತ್ತು ಅವುಗಳಿಂದಾಗುತ್ತಿರುವ ಪರಿಣಾಮಗಳ ಬಗ್ಗೆ ಸೂಕ್ಷ್ಮವಾಗಿ ತಿಳಿಸುವ ಪ್ರಯತ್ನವನ್ನು ಮಾಡಿದ್ದಾರೆ.

ಟಿ.ಕೆ. ರಾಮರಾವ್ ಅವರ ಕಾದಂಬರಿಗಳನ್ನು ಎರಡು ನೆಲೆಯಲ್ಲಿ ರಚನೆ ಮಾಡಿದ್ದಾರೆ. ಮೊದಲನೇಯದಾಗಿ ಸಾಮಾಜಿಕ ಕಳಕಳಿಯನ್ನು ಹೊಂದಿದ್ದು, ಜೀವನದ ಸಾಮರಸ್ಯದೊಂದಿಗೆ ಹೋರಾಟ ನಡೆಸುವ ಕ್ರಮವನ್ನು ಹೇಳಿದ್ದಾರೆ. ಎರಡನೇಯದಾಗಿ ತೀವ್ರ ಕುತೂಹಲ ಕೆರಳಿಸಿದ ಅಚ್ಚರಿಯಾದ ಸಂಗತಿಗಳನ್ನು ಹೊರತಂದು, ಸಮಾಜಕ್ಕೆ ಹೊಸ ಸಂದೇಶ ಮತ್ತು ಆಶಯವನ್ನು ತಿಳಿಸುವ ಪ್ರಯತ್ನವನ್ನು ಮಾಡಿದ್ದಾರೆ.

ರಾಮರಾಯರ ಬರಹ ಮತ್ತು ಚಿಂತನೆ ಸಮಾಜದ ಒಂದು ಭಾಗವೇ ಆಗಿರುವುದರಿಂದ, ಅವರೂ ಕೂಡ ಸಮಾಜದ ಮತ್ತು ಸಂಸ್ಕೃತಿಯ ಒಪ್ಪಿತ ಮೌಲ್ಯಗಳ ಒಂದು ಭಾಗವಾಗಿ ಅವರ ಕಾದಂಬರಿಗಳಲ್ಲಿ ಸಮಾಜದಲ್ಲಿನ ಜೀವನ ಶೈಲಿ, ಆಚಾರ-ವಿಚಾರ, ವರ್ಗಭಾವನೆ, ಲಿಂಗರಾಜಕಾರಣವನ್ನು ಒಂದು ಸಂಸ್ಕೃತಿ ಎಂದು ಒಪ್ಪಿಯೂ, ಹಲವು ಕಡೆ ಒಪ್ಪದ ಹಾಗೆಯೂ ಕಂಡುಬರುತ್ತದೆ.

ಈ ನಿಟ್ಟಿನಲ್ಲಿ ಒಟ್ಟಾರೆ ಟಿ.ಕೆ. ರಾಮರಾವ್ ಅವರ ಪ್ರಾತಿನಿಧಿಕ ಕಾದಂಬರಿಗಳನ್ನು ವಿವೇಚನೆಗೆ ಒಳಪಡಿಸಿ ಅವರ ಎಲ್ಲಾ ಬರಹಗಳ ಒಟ್ಟು ಸಾಧನೆಗೆ ಭಂಗಬಾರದಂತೆ ಅವರ ಜೀವನ ದೃಷ್ಟಿ, ಸ್ತ್ರೀಪರ ಕಾಳಜಿ, ಕೌಟುಂಬಿಕ ಪರಂಪರೆಯ ಬಗೆಗಿನ ಅಭಿಮಾನ ಮೊದಲಾದ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಕನ್ನಡ ಸಾಹಿತ್ಯದ ಹೊಸ ಕಾಲದ ಮುಂದುವರಿದ ಪ್ರಸ್ತುತಗೊಳಿಸುವ ಅವರ ಕಾದಂಬರಿಗಳ ಅಧ್ಯಯನದ ಮಹತ್ವವನ್ನು ನಿರ್ಣಯಿಸುವ ಆಶಯದ ಪ್ರಯತ್ನವನ್ನು ತಿಳಿಸುವ ಕಾರ್ಯವನ್ನು ಪ್ರಾಮಾಣಿಕವಾಗಿ, ಪ್ರಯತ್ನಪೂರ್ವಕವಾಗಿ ಮಾಡಿದ್ದೇನೆಂದು ತಿಳಿಸಲಿಚ್ಛಿಸುತ್ತೇನೆ.

ಪರಾಮರ್ಶನ ಗ್ರಂಥಗಳು:

೧. ಕನ್ನಡ ಸಾಹಿತ್ಯ ಚರಿತ್ರೆ : ರಂ. ಶ್ರೀ ಮುಗುಳಿ

೨. ಯುಗಧರ್ಮ ಹಾಗೂ ಸಾಹಿತ್ಯದರ್ಶನ : ಕಡೀನಾಥ
ಕುರ್ತುಕೋಟಿ

೩. ಸಾಹಿತ್ಯ ಪ್ರವೇಶ : ಸಿ.ಪಿ.ಕೆ. ೧೯೯೮

೪. ಕನ್ನಡ ಸಾಹಿತ್ಯ ಚರಿತೆ : ಎಲ್. ಎಸ್.
ಶೇಷಗಿರಿರಾವ್

೫. ಸಾಹಿತ್ಯ ವಿಮರ್ಶೆ : ರಹಮತ್ ತರೀಕೆರೆ
ಕರ್ನಾಟಕ

ಸಾಹಿತ್ಯ ಅಕಾಡೆಮಿ
(ಬೆಂಗಳೂರು
೧೯೯೩)

೬. ಕೃತಿ ಸಂಸ್ಕೃತಿ : ಎಂ.ಜಿ.
ಕೃಷ್ಣಮೂರ್ತಿ

೭. ಶತಮಾನದ ಸಾಹಿತ್ಯ ವಿಮರ್ಶೆ : ಎಚ್.ಎಸ್.
ರಾಘವೇಂದ್ರರಾವ್

ಕರ್ನಾಟಕ ಸಾಹಿತ್ಯ
ಅಕಾಡೆಮಿ,
ಬೆಂಗಳೂರು
೨೦೧೧

೮. ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು : ಬಿ.ಎ. ವಿವೇಕರೈ

೯. ಕನ್ನಡ ಕಾದಂಬರಿ ನಡೆದು ಬಂದ ರೀತಿ : ಶಾಂತಿನಾಥ
ದೇಶಾಯಿ

೧೦. ಕನ್ನಡ ಕಾದಂಬರಿಯ ಬೆಳವಣಿಗೆ : ಜಿ.ಎಸ್. ಅಮೂರ

೧೧. ಸಾಹಿತ್ಯ ಮತ್ತು ಪರಂಪರೆ : ವಿ.ಎಂ.
ಇನಾಂದರ್

೧೨. ಸಾಹಿತ್ಯ ಕಥನ : ಡಿ.ಆರ್. ನಾಗರಾಜ

೧೩. ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ : ಎಲ್.ಎಸ್. ಶೇಷಗಿರಿರಾವ್

೧೪. ಕಾದಂಬರಿ ವಸ್ತು ಮತ್ತು ತಂತ್ರ : ಗಿರಡ್ಡಿ ಗೋವಿಂದರಾಜು

೧೫. ಭಾರತೀಯ ಸಾಹಿತ್ಯ ಸಮೀಕ್ಷೆ : ಜಿ.ಎಸ್. ರಂಗನಾಥ್‌ರಾವ್

೧೬. ಹೊಸಗನ್ನಡ ಅರುಣೋದಯ : ಡಾ. ಶ್ರೀನಿವಾಸ ಹಾದನೂರು.

೧೭. ನವ್ಯ ಸಾಹಿತ್ಯ ದರ್ಶನ : ಶಾಂತಿನಾಥ ದೇಸಾಯಿ

೧೮. ಶತಮಾನದಂಚಿನಲ್ಲಿ : ನಾಗತಿಹಳ್ಳಿ ಚಂದ್ರಶೇಖರ್

೧೯. ಸಾಹಿತ್ಯ ಮತ್ತು ಸಮಕಾಲೀನ ವಾಸ್ತವಿಕತೆ : ಎಚ್. ತಿಪ್ಪೇರುದ್ರಸ್ವಾಮಿ

೨೦. ಮಹಿಳಾ ಅಧ್ಯಯನ : ವಿ.ಬಿ. ತಾರಕೇಶ್ವರ

ಆಕರ ಗ್ರಂಥಗಳು

೧. ದೂರಗಗನ

೨. ಪಚ್ಚತೋರಣ

೩. ಮಧುರ ಮಿಲನ

೪. ಬಂಗಾರದ ಮನುಷ್ಯ : ತೃತೀಯ ಮುದ್ರಣ ೨೦೦೧-೨೦೧೦ ವಸಂತ ಪ್ರಕಾಶ -> ಆಸಿನಿ ಪ್ರಿಂಟರ್ಸ್, ಬೆಂಗಳೂರು

೫. ಜಗದೇವರಾಯ (ಐತಿಹಾಸಿಕ)

೬. ಕೋವಿಕುಂಚ

೭. ಆಕಾಶದೀಪ

೮. ವರ್ಣಚಕ್ರ

೯. ಸೀಮಾರೇಖೆ

೧೦. ಮರಳುಸರಪಳಿ

೧೧. ಹಿಮಪಾತ

೧೨. ಲಂಗರು

೧೩. ದಿಬ್ಬದ ಬಂಗಲೆ

೧೪. ಮಣ್ಣಿನದೋಣಿ

೧೫. ಸರ್ಪದಂಡೆ

೧೬. ಸೇಡಿನ ಹಕ್ಕಿ

೧೭. ಪಶ್ಚಿಮದ ಬೆಟ್ಟ

೧೮. ಕಹಳೆಬಂಡೆ

೧೯. ಪಯಣದ ಕೊನೆ : ಮರು ಮುದ್ರಣ ೨೦೦೯-೨೦೧೦ ಅಶ್ವಿನಿ ಪ್ರಿಂಟರ್ಸ್.

೨೦. ಮೂರನೇ ಕೀಲಿ ಕೈ : ಮಿನಿಕಾದಂಬರಿಗಳು

೨೧. ತಾಳೆ ಹೂ

೨೨. ತೋರು ಬೆರಳು

೨೩. ಕಪ್ಪುನಾಯಿ

೨೪. ಶಕುನ ಪಕ್ಷಿ

೨೫. ಗುಲಾಮ ಹೆಣ್ಣು

೨೬. ರಾಣಿ ಜೇನು

೨೭. ಬೆದರುಬೊಂಬೆ

೨೮. ಡೊಂಕುಮರ

೨೯. ನೆರಳು

೩೦. ಆರಿದ ಲಾಂಧ್ರ

೩೧. ವಜ್ರದಕೊಂಬು

ಚಲನಚಿತ್ರವಾದ ಕೃತಿಗಳು

೧. ಮರಳು ಸರಪಣಿ

೨. ಹಿಮಪಾತ

೩. ಸೇಡಿನ ಹಕ್ಕಿ

೪. ಬಂಗಾರದ ಮನುಷ್ಯ

೫. ಮಣ್ಣಿನ ದೋಣಿ

ಪ್ರಶಸ್ತಿಗಳು

೧. ಕನ್ನಡ ಸಾಹಿತ್ಯ ಅಕಾಡೆಮಿ

೨. ಮದ್ರಾಸ್ ಸಾಹಿತ್ಯ ಅಕಾಡೆಮಿ

ಸಾಧಕನಿಗೆ ಸಂದ ಗೌರವ

ಟಿ.ಕೆ. ರಾಮರಾವ್ ಅವರ ಧ್ವಾರ ಚೆನ್ನಪಟ್ಟಣ

ಪತ್ರಿಕೆಗಳು

೧. ಪ್ರಜಾವಾಣಿ – ಸಾಪ್ತಾಹಿಕ ಪುರವಾಣಿ

೨. ಕನ್ನಡ ಪ್ರಭ

೩. ಸಂಯುಕ್ತ ಕರ್ನಾಟಕ

೪. ಸುಧಾ